


ಮೈಸೂರು ಮಿತ್ರ



ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಾರ್ಚ್ 18 ಮಂಗಳವಾರ 2025
ಸಂಪುಟ: 45 | ಸಂಚಿಕೆ: 328 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಡ್ರಗ್ಸ್ ಜಾಲ ಸಂಪೂರ್ಣ ಹತ್ತಿಕ್ಕುವುದು ನಮ್ಮ ಗುರಿ

ಸಿಎಂ ಸಿದ್ದರಾಮಯ್ಯ ಘೋಷಣೆ

ಬೆಂಗಳೂರು, ಮಾ.17(ಕೆಎಂಶಿ)- ರಾಜ್ಯಾದ್ಯಂತ ಹಬ್ಬಿರುವ ಡ್ರಗ್ಸ್ ಜಾಲವನ್ನು ಬೇರುಸಹಿತ ಕಿತ್ತೊಗೆಯುವುದು ರಾಜ್ಯ ಸರ್ಕಾರದ ಗುರಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ ಪೊಲೀಸರು ರಾಜ್ಯದ ಇತಿಹಾಸದಲ್ಲೇ ಅತಿದೊಡ್ಡ ಪ್ರಮಾಣದ ಮಾದಕ ದ್ರವ್ಯ ಪತ್ತೆ ಹಚ್ಚಿ, ಇಬ್ಬರು ಆರೋಪಿಗಳನ್ನು ಬಂಧಿಸಿರುವುದು ಶ್ಲಾಘನೀಯ ಕಾರ್ಯ ಎಂದಿದ್ದಾರೆ.

ಸಾವಿರಾರು ಯುವಜನರ ಬದುಕಿಗೆ ಮಾರಕವಾಗಲಿದ್ದ ಸುಮಾರು 75 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ 37 ಕೆ.ಜಿ. ಎಂಡಿಎಂಎ ಮಾದಕ ದ್ರವ್ಯ ವಶಪಡಿಸಿಕೊಳ್ಳುವ ಮೂಲಕ ಬಹು ದೊಡ್ಡ ಅಪಾಯವನ್ನು ■6ನೇ ಪುಟಕ್ಕೆ



ಅಪರಾಧಗಳನ್ನು ಮಾಡುವವರೇ ಆರ್‌ಎಸ್‌ಎಸ್, ಬಿಜೆಪಿಯವರು...!



● ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ● ವಿಧಾನಸಭೆಯಲ್ಲಿ ಕೋಲಾಹಲ; ಬಿಜೆಪಿ ವಾಗ್ದಾಳಿ ● ನೀವು ಪ್ರಧಾನಿ ಹುದ್ದೆಗಾಗಿ ದೇಶವನ್ನೇ ಒಡೆದವರು; ಬಿಜೆಪಿ ಕಟು ಟೀಕೆ ● ಇಡೀ ದೇಶದ ಶಾಂತಿ ಕದಡುತ್ತಿರುವವರು ಕಾಂಗ್ರೆಸ್‌ನವರು

ಬೆಂಗಳೂರು, ಮಾ.17(ಕೆಎಂಶಿ)- ರಾಜ್ಯದಲ್ಲಿ ಅಪರಾಧಗಳನ್ನು ಮಾಡುವವರೇ ಆರ್‌ಎಸ್‌ಎಸ್, ಬಿಜೆಪಿಯವರು! ಕಾನೂನು-ಸುವ್ಯವಸ್ಥೆ ಹದಗೆಡಲು ಆರ್‌ಎಸ್‌ಎಸ್ ಮತ್ತು ಬಿಜೆಪಿಯೇ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದ ಆರೋಪ ವಿಧಾನಸಭೆಯಲ್ಲಿಂದು ಭಾರಿ ಕೋಲಾಹಲಕ್ಕೆ ಕಾರಣವಾಯಿತು. ಮಾತ್ರವಲ್ಲ, ಕಲಾಪ ಮುಂದೂಡಲ್ಪಟ್ಟ ಪ್ರಸಂಗವೂ ಜರುಗಿತು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಮುಖ್ಯಮಂತ್ರಿ ಉತ್ತರ ನೀಡುವ ವೇಳೆ, ರಾಜ್ಯದಲ್ಲಿ ಕಾನೂನು ವ್ಯವಸ್ಥೆ ನಿಮ್ಮ ಆಡಳಿತಕ್ಕಿಂತ ನಮ್ಮ ಕಾಲದಲ್ಲಿ ಉತ್ತಮವಾಗಿದೆ, ಆರ್‌ಎಸ್‌ಎಸ್ ಮತ್ತು ಬಿಜೆಪಿ ರಾಜಕಾರಣದಿಂದ ಹಾಳಾಗುತ್ತಿದೆ ಅಷ್ಟೇ ಎಂದು ಪ್ರತಿಪಕ್ಷವನ್ನು ತರಾಟೆಗೆ ತೆಗೆದುಕೊಂಡರು.

ರಾಜ್ಯದಲ್ಲಿ ಅಪರಾಧಗಳನ್ನು ಮಾಡುವವರೇ ಆರ್‌ಎಸ್‌ಎಸ್, ಬಿಜೆಪಿಯವರು ಎಂದು ದೂರಿದರು. ಮುಖ್ಯಮಂತ್ರಿ ಅವರ ಈ ಹೇಳಿಕೆಯನ್ನು ತೀವ್ರವಾಗಿ ವಿರೋಧಿಸಿದ ಬಿಜೆಪಿ ಸದಸ್ಯರು, ನಿಮ್ಮ ಹೇಳಿಕೆಯನ್ನು ಹಿಂತೆಗೆದುಕೊಳ್ಳಬೇಕು. ಆರ್‌ಎಸ್‌ಎಸ್ ಹಿಂದೂಸ್ಥಾನವನ್ನು ಕಾಪಾಡುವಲ್ಲಿ ಮುಂಚೂಣಿಯಲ್ಲಿದೆ.

ನಿಮ್ಮನ್ನು ಪಾಕಿಸ್ತಾನದವರು ಎನ್ನಬಹುದೇ, ಪ್ರಧಾನಿ ಹುದ್ದೆಗಾಗಿ ದೇಶವನ್ನೇ ಒಡೆದವರು. ಕಾಂಗ್ರೆಸ್‌ನವರು, ದೇಶದ ಶಾಂತಿ ಕದಡುತ್ತಿರುವ ಎಸ್‌ಡಿಪಿಐ ಹಾಗೂ ಪಿಎಫ್‌ಐ ಬೆಂಬಲಿತರು. ಈ ಎರಡು ದೇಶದ್ರೋಹಿ ಸಂಘಟನೆಗಳ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆದುಕೊಂಡವರು ನೀವು. ನಮಗೆ ದೇಶದ್ರೋಹಿ ಎನ್ನುತ್ತೀರಾ ಎಂದು ಬಿಜೆಪಿ ಸದಸ್ಯರು ಒಮ್ಮೆಲೇ ಮುಖ್ಯಮಂತ್ರಿ ಮೇಲೆ ಹರಿಹಾಯ್ದರು. ಆಡಳಿತ ಮತ್ತು ಪ್ರತಿಪಕ್ಷ ಬಿಜೆಪಿ ನಡುವಿನ ಮಾತಿನ ಚಕಮಕಿ ಮಧ್ಯೆ ಮುಖ್ಯಮಂತ್ರಿ ■6ನೇ ಪುಟಕ್ಕೆ

ಜನರ ಕಲ್ಯಾಣಕ್ಕೆ ಸರ್ಕಾರದ ಸಂಪನ್ಮೂಲ ಬಳಸಲು ಬಂದಿದ್ದೇವೆ; ಅಧಿಕಾರ ಮಾಡಲು ಅಲ್ಲ

ಬೆಂಗಳೂರು, ಮಾ.17(ಕೆಎಂಶಿ)-ಅಧಿಕಾರಕ್ಕಾಗಿ ಅಧಿಕಾರ ಮಾಡಲು ಬಂದಿಲ್ಲ, ಜನರ ಕಲ್ಯಾಣಕ್ಕೆ ಸರ್ಕಾರದ ಸಂಪನ್ಮೂಲ ಬಳಸಲು ಬಂದಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಇಂದು ಸಮರ್ಥಿಸಿಕೊಂಡಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ, ತಮ್ಮ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಟೀಕಾ ಪ್ರಹಾರಕ್ಕೆ ಬಹು ಸಮಯವನ್ನು ಬಳಸಿಕೊಂಡರು.

ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದಾಗ ಬಿಜೆಪಿಯಿಂದ ಭಾರಿ ಟೀಕಾ ಪ್ರಹಾರವೇ ಎದುರಾಯಿತು, ನಂತರದ ದಿನಗಳಲ್ಲಿ ಅವರು ಅಧಿಕಾರದಲ್ಲಿರುವ ರಾಜ್ಯಗಳಲ್ಲೇ ನಮ್ಮನ್ನು ನಕಲು ಮಾಡಿದ್ದಾರೆ.

ಬಿಜೆಪಿ ಮಾತ್ರವಲ್ಲ ಕಾಂಗ್ರೆಸ್ಸೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳು ತಮ್ಮ ಜನತೆಗೆ ಒಂದಲ್ಲಾ ಒಂದು ರೀತಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ಅಷ್ಟೇ ಅಲ್ಲ, ಅನ್ಯ ರಾಜ್ಯಗಳ ಸಚಿವರು, ಅಧಿಕಾರಿಗಳು ನಮ್ಮಲ್ಲಿ ಬಂದು ಯೋಜನೆಯ ಅನುಷ್ಠಾನದ ಬಗ್ಗೆ ಮಾಹಿತಿ ಮತ್ತು ವಿವರಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಅಷ್ಟೇ ಏಕೆ, ಉಪರಾಷ್ಟ್ರಪತಿ ಜಗದೀಪ್ ಧನಕರ್ ಹಾಗೂ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ನಮ್ಮ ವರದಿಗಳ ಬಗ್ಗೆ ಪ್ರಶಂಸಾ ವರದಿಯನ್ನು ಕೇಂದ್ರಕ್ಕೆ ನೀಡಿದ್ದಾರೆ. ನೀವು ಬಿಜೆಪಿ ಸದಸ್ಯರು ಮಾಡುತ್ತಿರುವುದು ರಾಜಕೀಯ ಪ್ರೇರಿತ ಕೆಲಸ, ■6ನೇ ಪುಟಕ್ಕೆ

ಕೇಂದ್ರ ಸರ್ಕಾರ ದೇಶದ ಶೇ.90ರಷ್ಟು ಜನರ ನಿರ್ಲಕ್ಷಿಸಿದೆ

● ಸಿಎಂ ಸಿದ್ದರಾಮಯ್ಯ ಟೀಕೆ ● ವಿಧವಾ, ಅಂತ್ಯೋದಯ, ವೃದ್ಧಾಪ್ಯ ವೇತನದಲ್ಲಿ ಇಲ್ಲಿವರೆಗೆ 1 ರೂ. ಹೆಚ್ಚಿಸಿಲ್ಲ

ಬೆಂಗಳೂರು, ಮಾ.17(ಕೆಎಂಶಿ)- ವಿಧವಾ ವೇತನ, ಅಂತ್ಯೋದಯ ಯೋಜನೆ, ವೃದ್ಧಾಪ್ಯ ವೇತನದಲ್ಲಿ ಒಂದು ರೂಪಾಯಿಯನ್ನೂ ಪ್ರಧಾನಿ ನರೇಂದ್ರ ಮೋದಿ ಅಧಿಕಾರ ವಹಿಸಿಕೊಂಡ 11 ವರ್ಷಗಳಲ್ಲಿ ಹೆಚ್ಚಳ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಕೇಂದ್ರ ಸರ್ಕಾರ ಶೇಕಡ 19 ರಷ್ಟು ಜನರಿಗೆ ಮಾತ್ರ ಕಾರ್ಯಕ್ರಮಗಳನ್ನು ನೀಡಿ, ಇನ್ನುಳಿದ ಶೇಕಡ 90ರಷ್ಟು ಜನರನ್ನು ನಿರ್ಲಕ್ಷಿಸಿದೆ ರಾಜ್ಯದಲ್ಲಿ ಪಂಚ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಶೇಕಡ 90ರಷ್ಟು ಜನರ ಕೈಹಿಡಿದಿದ್ದೇವೆ.

ಕೇಂದ್ರದಲ್ಲಿ ನೀವು ಬಂಡವಾಳಶಾಹಿಗಳು ಪಡೆದ ಸಾಲ ಮನ್ನಾ ಮಾಡಿದ್ದೀರಿ. ನಾವು ಸರ್ಕಾರದ ಹಣವನ್ನು ಜನರ ಅಭಿವೃದ್ಧಿಗೆ ಬಳಕೆ ಮಾಡುತ್ತಿದ್ದೇವೆ ಎಂದು ಬಿಜೆಪಿ ಸದಸ್ಯರನ್ನು ವಿಧಾನಸಭೆಯಲ್ಲಿ ತರಾಟೆಗೆ ತೆಗೆದುಕೊಂಡರು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ಬಿಜೆಪಿ ಮತ್ತು ಕಾಂಗ್ರೆಸ್‌ನ ಆರ್ಥಿಕ ನೀತಿ, ನಿಲುವುಗಳು ಯಾರ ಪರವಾಗಿವೆ ಎನ್ನುವ ವ್ಯತ್ಯಾಸವನ್ನು ವಿವರಿಸಿದರು.

ದೇಶದ 100 ಕೋಟಿ ಜನರಿಗೆ ಕೊಳ್ಳುವ ಆಯ್ಕೆಗಳೇ ಇಲ್ಲ ಎಂದು ವರದಿ ಬಂದಿತ್ತು, 20.5 ಕೋಟಿ ಕುಟುಂಬಗಳು, ಅಂದರೆ, ನೂರು ಕೋಟಿ ಜನರ ವಾರ್ಷಿಕ ಆದಾಯ 87,000 ರೂ.ಗಿಂತ ಕಡಿಮೆ ಇದೆ ಎನ್ನುವ ವರದಿ ಇದೆ. ದೇಶದಲ್ಲಿ ಅಸಮಾನತೆ ಅಪ್ಪರ ಮಟ್ಟಿಗೆ ಇದೆ. ಆರ್ಥಿಕ, ಸಾಮಾಜಿಕ ಅಸಮಾನತೆ ಇರುವವರೆಗೆ ನಿಜವಾದ ಸ್ವಾತಂತ್ರ್ಯ ಸಿಗುವುದಿಲ್ಲ. ■6ನೇ ಪುಟಕ್ಕೆ

9 ತಿಂಗಳ ಬಳಿಕ ಸುನಿತಾ ವಿಲಿಯಮ್ಸ್ ಇಂದು ಭೂಮಿಗೆ ವಾಪಸ್

ವಾಷಿಂಗ್ಟನ್: ಕಳೆದ 9 ತಿಂಗಳಿಂದ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿಕೊಂಡಿರುವ ಗಗನಯಾತ್ರಿಗಳಾದ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಮಾರ್ಚ್ 18ರಂದು ಭೂಮಿಗೆ ಮರಳಲಿದ್ದಾರೆ ಎಂದು ನಾಸಾ ತಿಳಿಸಿದೆ.

ಈ ಇಬ್ಬರು ಗಗನಯಾತ್ರಿಗಳು ಬುಧವಾರ ಫ್ಲೋರಿಡಾ ಕರಾವಳಿಯಲ್ಲಿ ಇಳಿಯಲಿದ್ದು, ಈ ಅಪರೂಪದ ಕ್ಷಣಗಳನ್ನು ನಾಸಾ ನೇರಪ್ರಸಾರ ಮಾಡಲಿದೆ.

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಭೂಮಿಗೆ ಸ್ಪೇಸ್‌ಎಕ್ಸ್ ಕ್ರೂ-



9 ಹಿಂದಿರುಗುವಿಕೆಯ ನೇರಪ್ರಸಾರವನ್ನು ನಾಸಾ ನೀಡಲಿದೆ ಎಂದು ಸಂಸ್ಥೆ ಎಕ್ಸ್‌ನಲ್ಲಿ ತಿಳಿಸಿದೆ. ಅಮೆರಿಕದ ಸ್ಥಳೀಯ ಕಾಲಮಾನದ ಪ್ರಕಾರ ■6ನೇ ಪುಟಕ್ಕೆ



ಸಿಇಟಿ ಕನ್ನಡ ಭಾಷೆ ಪರೀಕ್ಷೆ ಏ.15ರಂದು

ಬೆಂಗಳೂರು: ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಈ ಮೊದಲು ನಿಗದಿಗೊಳಿಸಿದ್ದ ಸಿಇಟಿ ಕನ್ನಡ ಪರೀಕ್ಷೆಯನ್ನು ಏ.18ಕ್ಕೆ ಬದಲು ಏ.15ರಂದು (ಮಂಗಳವಾರ) ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತಿಳಿಸಿದೆ.

ಏಪ್ರಿಲ್ 18ರಂದು 'ಶುಭ ಶುಕ್ರವಾರ' ಇರುವುದರಿಂದ ಪರೀಕ್ಷೆಯ ದಿನಾಂಕವನ್ನು ಬದಲಾಯಿಸಬೇಕೆಂದು ಮನವಿಗಳು ಬಂದಿದ್ದವು. ಹೀಗಾಗಿ, ಸರ್ಕಾರದ ನಿರ್ದೇಶನದಂತೆ ಈ ಬದಲಾವಣೆ ಮಾಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಬೆಂಗಳೂರು, ಮಂಗಳೂರು, ವಿಜಯಪುರ, ಬೆಳಗಾವಿ ಕೇಂದ್ರಗಳಲ್ಲಿ ಮಾತ್ರ ಅಂದು ಬೆಳಿಗ್ಗೆ 10.30ರಿಂದ 11.30ರವರೆಗೆ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ ಎಂದು ಅವರು ವಿವರಿಸಿದ್ದಾರೆ.

ಸಿಇಟಿ-25ರ ಉಳಿದ ಪರೀಕ್ಷೆಗಳು ನಿಗದಿಯಂತೆ ಏ. 16 ಮತ್ತು 17ರಂದು ನಡೆಯಲಿವೆ. ಸದ್ಯದಲ್ಲೇ ಪ್ರವೇಶ ಪತ್ರ ಡೌನ್‌ಲೋಡ್‌ಗೂ ಅವಕಾಶ ನೀಡಲಾಗುವುದು. ವೇಳಾಪಟ್ಟಿಗೆ ಪ್ರಾಧಿಕಾರದ ವೆಬ್‌ಸೈಟ್ ನೋಡಬಹುದು ಎಂದೂ ಅವರು ಹೇಳಿದ್ದಾರೆ.

ವರುಣ ಕೆರೆಯಲ್ಲಿ ಪ್ರೀ ವೆಡ್ಡಿಂಗ್ ಶೂಟ್; ಅನಾಹುತದ ಆತಂಕ

● ಫಿಲ್ಮಿ ಸ್ಟೈಲ್‌ನಲ್ಲಿ ಸೂರ್ಯೋದಯ, ಸೂರ್ಯಾಸ್ತಮಾನದ ವೇಳೆ ಶೂಟ್
● ಲೈಫ್ ಜಾಕೆಟ್ ಇಲ್ಲದೆ ದೋಣಿಯಲ್ಲಿ ಸಾಗುವ ವೇಳೆ ಅಪಾಯದ ಆತಂಕ
● ಕಣ್ಮುಚ್ಚಿ ಕುಳಿತಿರುವ ಮೈಸೂರು ಜಿಲ್ಲಾಡಳಿತ; ಪೊಲೀಸ್ ಇಲಾಖೆ



ಬಾಪುಲಿಂಗರಾಜ್ ಅರಸ್

ಮೈಸೂರು, ಮಾ.17- ವಿಶ್ವವಿಖ್ಯಾತ ಮೈಸೂರು ಅರಮನೆಯ ಮುಂದಿನ ರಸ್ತೆಗಳು, ಸುಂದರ ವೃತ್ತಗಳು ಕೆಲವೊಮ್ಮೆ ಅರಮನೆ ಆವರಣದಲ್ಲಿ ನಡೆಯುತ್ತಿದ್ದ ಪ್ರೀ ವೆಡ್ಡಿಂಗ್ ಶೂಟಿಂಗ್ ಈಗ ಮೈಸೂರು ಸುತ್ತಮುತ್ತಲಿನ ರಮಣೀಯ ತಾಣಗಳಿಗೆ ಶಿಫ್ಟ್ ಆಗಿದೆ. ಮೈಸೂರು ಹೊರವಲಯದ ವರುಣ ಕೆರೆಯ ರಮಣೀಯ ತಾಣದಲ್ಲಿ ಇಂತಹ ಯುವ ಜೋಡಿಗಳ ದೋಣಿ ವಿಹಾರ ಹೆಚ್ಚಾಗಿ ಕಂಡುಬರುತ್ತಿದೆ. ಪ್ರೀ ವೆಡ್ಡಿಂಗ್ ಶೂಟ್‌ಗೆ ತಯಾರಾಗಿ ಬಂದ ಯುವ ಜೋಡಿಗಳು ನಿತ್ಯವೂ ದೋಣಿಯಲ್ಲಿ ವಿಹರಿಸುತ್ತಿದ್ದು, ಯಾವುದೇ ಭದ್ರತಾ ಕ್ರಮ ಕೈಗೊಳ್ಳದೇ ಇರುವುದರಿಂದ ಅಪಾಯದ ಆತಂಕ ಮೂಡಿಸಿದೆ.

ವಿವಾಹ ಪೂರ್ವದಲ್ಲಿ ಸುಂದರ



ಪ್ರಕೃತಿಯ ತಾಣ ಇಲ್ಲವೇ ಪಾರಂಪರಿಕ ಕಟ್ಟಡಗಳ ಹಿನ್ನೆಲೆಯಲ್ಲಿ ಜೋಡಿಗಳು ಅವಿಸ್ಮರಣೀಯ ಫೋಟೋ-ವಿಡಿಯೋ ಮಾಡುವ ಉತ್ಸಾಹ ಹೊಂದಿರುತ್ತಾರೆ.

ಮೈಸೂರಿನ ಚಾಮರಾಜ ಒಡೆಯರ್ ಸರ್ಕಲ್‌ನಲ್ಲಿ ಪ್ರತಿ ದಿನ ಮುಂಜಾನೆ, ಜನ-ವಾಹನ ಸಂಚಾರ ವಿರಳವಾಗಿರುವ ವೇಳೆ ಪ್ರೀ ವೆಡ್ಡಿಂಗ್ ಚಿತ್ರೀಕರಣ ನಡೆಯುತ್ತಿದೆ. ಮೈಸೂರು ಅರಮನೆ ಹಿನ್ನೆಲೆಯಲ್ಲಿ ವಿವಿಧ ಟೆಕ್ನಿಕ್ ಬಳಸಿ, ಅವಿಸ್ಮರಣೀಯ ದೃಶ್ಯಗಳ ಪ್ರೀ ವೆಡ್ಡಿಂಗ್ ಶೂಟಿಂಗ್ ನಡೆಯುತ್ತದೆ. ಮೈಸೂರು ಮಾತ್ರವಲ್ಲದೆ ರಾಜ್ಯದ ವಿವಿಧೆಡೆಯಿಂದ ಜೋಡಿಗಳು ಇಂತಹ ಪ್ರೀ ವೆಡ್ಡಿಂಗ್ ಶೂಟಿಂಗ್‌ಗೆ ಇಲ್ಲಿಗೆ ಬರುವುದುಂಟು. ಹೀಗೆ ಅರಮನೆ ಸುತ್ತಮುತ್ತ ನಡೆಯುತ್ತಿದ್ದ ಪ್ರಿ ವೆಡ್ಡಿಂಗ್ ಶೂಟಿಂಗ್ ಈಗ ಮೈಸೂರಿನ ವರುಣ ಕೆರೆ ಸೇರಿದಂತೆ ■6ನೇ ಪುಟಕ್ಕೆ

ಅನಾಹುತಕ್ಕೆ ಮುನ್ನ ಸೂಕ್ತ ಎಚ್ಚರಿಕಾ ಕ್ರಮ ಕೈಗೊಳ್ಳುವುದು ಒಳಿತು

ಸೂರ್ಯಾಸ್ತಮಾನದ ಸುಂದರ ದೃಶ್ಯಗಳ ಸೆರೆಗೆ ಯುವ ಜೋಡಿಗಳು ಪ್ರತಿದಿನ ಕೆರೆ ಆವರಣದಲ್ಲಿ ನೆರೆಯುತ್ತಾರೆ. ರಾತ್ರಿ 7 ಗಂಟೆಯಾದರೂ ಜಾಗ ಬಿಟ್ಟು ಕದಲುವುದಿಲ್ಲ. ಇವರು ಬೀಡು ಬಿಟ್ಟ ಸ್ಥಳ ನಿರ್ಜನ ಪ್ರದೇಶವಾಗಿದ್ದು, ಈ ಸಂದರ್ಭವನ್ನು ಬಳಸಿಕೊಂಡು ದುಷ್ಕರ್ಮಿಗಳು ದಾಳಿ ಮಾಡುವ ಸಾಧ್ಯತೆಯೂ ಇರುತ್ತದೆ.

ಮೈಸೂರಿನ ಚಾಮುಂಡಿಬೆಟ್ಟದ ಲಲಿತಾದ್ರಿಪುರದ ನಿರ್ಜನ ಪ್ರದೇಶದಲ್ಲಿ ವರ್ಷಗಳ ಹಿಂದೆ ಸ್ನೇಹಿತನ ಜೊತೆ ಇದ್ದ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರವಾಗಿತ್ತು. ಇಂತಹ ಘಟನೆಯಿಂದ ಪಾಠ ಕಲಿಯಬೇಕಿದೆ. ಏನಾದರೂ ಅನಾಹುತ ಸಂಭವಿಸಿದ ಮೇಲೆ ಎಚ್ಚರಗೊಳ್ಳುವ ಜಿಲ್ಲಾಡಳಿತ ಮೊದಲೇ ಇದಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಒಳ್ಳೆಯದು.

ಮುಂಜಾನೆ ಹಾಗೂ ಸಂಜೆ ಮಕ್ಕಳನ್ನು ಪ್ರೀ ವೆಡ್ಡಿಂಗ್ ಶೂಟಿಂಗ್‌ಗಾಗಿ ನಿರ್ಜನ ಪ್ರದೇಶಕ್ಕೆ ಕಳುಹಿಸುವ ಮುನ್ನ ಪೋಷಕರು ಹತ್ತು ಬಾರಿ ಯೋಚಿಸುವುದು ಒಳಿತು.

ಹೆಬ್ಬಾಳು ಕೆರೆ ಸ್ವಚ್ಛತಾ ಕಾರ್ಯ ಆರಂಭ



ಮೈಸೂರಿನ ಹೆಬ್ಬಾಳು ಕೆರೆ ನೀರಿನ ಮೇಲೆ ಬೆಳೆದಿದ್ದ ಹಸಿರು ಪಾಚಿಯು ಸ್ವಚ್ಛತಾ ಕಾರ್ಯ ಸೋಮವಾರದಿಂದ ಆರಂಭವಾಗಿದೆ.

●ಘನತ್ಯಾಜ್ಯ, ಮದ್ಯದ ಬಾಟಲಿಗಳು, ಮೆಟಲ್ ಚೂರುಪಾರು ತೆಗೆಯಲು ತ್ರ್ಯಾಷ್ ಬ್ಯಾರಿಯರ್ ಬಳಕೆ ●ಮಲಿನ ನೀರು ಕೆರೆಗೆ ಸೇರದಂತೆ ತಡೆಯುವ ಕಾಮಗಾರಿ ಅಂದಾಜು ತಯಾರಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ

ಮೈಸೂರು, ಮಾ. 17(ಆರ್‌ಕೆ)- ಮೈಸೂರು ಜಿಲ್ಲಾಡಳಿತ, ಹೂಟಗಳ್ಳಿ ನಗರಸಭೆ ಮೂಲಕ ಕಡೆಗೂ ಹೆಬ್ಬಾಳು ಕೆರೆ ಸ್ವಚ್ಛತಾ ಕಾರ್ಯ ಆರಂಭಿಸಿದೆ.

ಒಂದು ಕಾಲದಲ್ಲಿ ಸುಂದರ ನಿಸರ್ಗ ತಾಣವಾಗಿದ್ದ ಮೈಸೂರು ಹೊರವಲಯದ ಹೆಬ್ಬಾಳು ಕೆರೆಯು ವಸತಿ ಬಡಾವಣೆಗಳ ಒಳಚರಂಡಿ ನೀರು ಮತ್ತು ಕೈಗಾರಿಕಾ ಘಟಕಗಳ ರಾಸಾಯನಿಕಯುಕ್ತ ತ್ಯಾಜ್ಯ ಸೇರುತ್ತಿರುವುದರಿಂದ ತೀವ್ರ ರೀತಿ ಕಲುಷಿತಗೊಂಡಿದೆ. ಸರಿಯಾದ ನಿರ್ವಹಣೆ ಇಲ್ಲದ ಕಾರಣ, ವಾಟರ್‌ಪ್ಲಾಂಟ್ ಬೆಳೆದು ಕೆರೆಯಲ್ಲಿ ನೀರೇ ಕಾಣದ ಹಾಗೆ ಹಸಿರು ಪಾಚಿ ತುಂಬಿದೆ.

ಈ ಸಂಬಂಧ ಮಾರ್ಚ್ 6ರಂದು 'ಮೈಸೂರು ಮಿತ್ರ'ನಲ್ಲಿ ಚಿತ್ರ ಸಹಿತ ವರದಿ ಪ್ರಕಟವಾಗಿತ್ತು. ಇನ್‌ಫೋಸಿಸ್ ಫೌಂಡೇಷನ್ ಮುಖ್ಯಸ್ಥರಾಗಿದ್ದ ಡಾ.ಸುಧಾಮೂರ್ತಿ 105 ಕೋಟಿ ರೂ. ಖರ್ಚು ಮಾಡಿ ಹೆಬ್ಬಾಳು ಕೆರೆಯನ್ನು ಅಭಿವೃದ್ಧಿಪಡಿಸಿದ್ದರು. ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ (ಎಸ್‌ಟಿಪಿ) ಸಹ ಸ್ಥಾಪಿಸಿದ್ದರು. ಹೆಬ್ಬಾಳು,


ಪುಟ 7 ಮೈಸೂರು ನಗರ | ಮೈಸೂರು ಮಿತ್ರ | ಗುರುವಾರ 6 ಮಾರ್ಚ್ 2025

ಕೆರೆಗೆ ಸೇರುವ ತ್ಯಾಜ್ಯ ನೀರು, ಪ್ಲಾಸ್ಟಿಕ್ ತಡೆಯಲು ವಿಫಲವಾದ ಮೈಸೂರು ಮಹಾನಗರಪಾಲಿಕೆ, ಕೆಐಎಡಿಬಿ

ಅವಸಾನದತ್ತ ಮೈಸೂರಿನ ಹೆಬ್ಬಾಳು ಕೆರೆ

ಇನ್‌ಫೋಸಿಸ್ ಪ್ರತಿಷ್ಠಾನದಿಂದ 105 ಕೋಟಿ ವೆಚ್ಚದಲ್ಲಿ ಪುನರುಜ್ಜೀವನಗೊಂಡು ಕಂಗೊಳಿಸುತ್ತಿದ್ದ ಕೆರೆ

ಮಾ.6ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ ಹೆಬ್ಬಾಳು ಕೆರೆ ದುಸ್ಥಿತಿ ಕುರಿತು ವರದಿ ಪ್ರಕಟವಾಗಿತ್ತು.

ಹೂಟಗಳ್ಳಿ ಕೈಗಾರಿಕಾ ಪ್ರದೇಶ ಹಾಗೂ ಹೆಬ್ಬಾಳು, ಲಕ್ಷ್ಮೀಕಾಂತ ನಗರ ಮತ್ತು ಸುತ್ತಲಿನ ವಸತಿ ಬಡಾವಣೆಗಳ ಭಾರಿ ಪ್ರಮಾಣದ ತ್ಯಾಜ್ಯ ನೀರು ಕೆರೆಗೆ ಸೇರುತ್ತಿದ್ದುದೇ ಹೆಬ್ಬಾಳು ಕೆರೆ ಮಲಿನಗೊಂಡು ದುರ್ವಾಸನೆ ಬೀರಲು ಕಾರಣ ಎಂದು 'ಮೈಸೂರು ಮಿತ್ರ' ತನ್ನ ವರದಿಯಲ್ಲಿ ವಿವರಿಸಿ, ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆದಿತ್ತು. ಪತ್ರಿಕೆಯಲ್ಲಿ ವರದಿ ಪ್ರಕಟವಾಗುತ್ತಿದ್ದಂತೆಯೇ ■6ನೇ ಪುಟಕ್ಕೆ

ಚಾಮರಾಜನಗರದ ಶಿವಪುರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕ ಸ್ಥಾಪಿಸಿದರೆ ಪ್ರತಿಭಟನೆ ಎಚ್ಚರಿಕೆ

ಮೈಸೂರು, ಮಾ.17(ಜಿಎ)–ಚಾಮರಾಜನಗರ ತಾಲೂಕಿನ ಕಸಬಾ ಹೋಬಳಿ ಶಿವಪುರ ಗ್ರಾಮದ ಸರಹದ್ದಿನ ಯಡಪುರ ಗ್ರಾಮದ ಸರ್ವೆ ನಂ.64ರಲ್ಲಿ ಘನ ತ್ಯಾಜ್ಯ ಸಂಸ್ಕರಣ ಘಟಕ ಸ್ಥಾಪನೆಗೆ ಮುಂದಾಗಿದ್ದು, ಇದರಿಂದ ಈ ಪರಿಸರಕ್ಕೆ ಹಾನಿಯಾಗುವ ಕಾರಣ ಒಂದು ವೇಳೆ ಸ್ಥಾಪನೆ ಮಾಡುವ ನಿರ್ಧಾರ ಕೈಬಿಡದಿದ್ದಲ್ಲಿ ಪ್ರಗತಿಪರ ಸಂಘಟನೆ, ಗ್ರಾಮಸ್ಥರು ಹಾಗೂ ಇನ್ನಿತರೊಡಗೂಡಿ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ವಕೀಲ ರವಿ ಬೆಳ್ಳಯ್ಯ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ದೇಶಿತ ಘನತ್ಯಾಜ್ಯ ಸಂಸ್ಕರಣ ಘಟಕದ ಭೂಮಿ ಕೃಷಿ ಯೋಗ್ಯವಾದ ಖರಾಬು ಭೂಮಿ ಆಗಿದೆ. ಇತ್ತೀಚೆಗೆ ಪಿಡಿಒ ಮತ್ತು ಗ್ರಾಮದ ಆಡಳಿತಾಧಿಕಾರಿ ಸ್ಥಳಕ್ಕೆ ಬಂದು ಘನ ತ್ಯಾಜ್ಯ ಘಟಕ ಸ್ಥಾಪನೆಗಾಗಿ ಜಾಗ ಇಲ್ಲಿ ಗುರುತಿಸಿದ್ದಾರೆ. ಗ್ರಾಮದಲ್ಲಿ ಸುಮಾರು 70ರಿಂದ 80 ಕುಟುಂಬಗಳು ಕೃಷಿ ಚಟುವಟಿಕೆಯಲ್ಲಿವೆ. ಕೃಷಿ ಪಂಪ್‌ಸೆಟ್‌ಗಳು ಸಹ ಇವೆ. ಹೀಗಾಗಿ ಈ ಘಟಕ ಸ್ಥಾಪಿಸಿದಲ್ಲಿ ಕುಡಿಯುವ ನೀರು, ಕಲುಷಿತಗೊಂಡು ಮಾಲಿನ್ಯಕ್ಕೆ ಒಳಗಾಗುತ್ತವೆ. ಇದರಿಂದಾಗಿ ಇವರು ಅನಿವಾರ್ಯವಾಗಿ ವಲಸೆ ಹೋಗಬೇಕಾದ ಪರಿಸ್ಥಿತಿಯುಂಟಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಈಗಾಗಲೇ ಈ ಬಗ್ಗೆ ಡಿಸಿ, ನಗರಸಭೆ ಆಡಳಿತ ವರ್ಗ, ಗ್ರಾಪಂಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಘಟಕ ಸ್ಥಾಪನೆಗೆ ಮುಂದಾದರೆ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ವಕೀಲರಾದ ಭರತ್‌ರಾಜ್, ಮಹದೇವ ಸಾಗರ್, ಗ್ರಾಮಸ್ಥರಾದ ಕುಮಾರ್ ಉಪಸ್ಥಿತರಿದ್ದರು.

ಪ್ರಾಧ್ಯಾಪಕ ಪ್ರೊ.ಮುಜಾಫರ್ ಅಸ್ಸಾದಿ ಅವರಿಗೆ ನುಡಿ ನಮನ

ಪ್ರೊ.ಅಸ್ಸಾದಿ ಅವರ ರೈತ, ದಲಿತ ಪರ ಕೆಲಸ–ಕಾರ್ಯ ಜಾರಿಗೊಳಿಸುವ ಹೊಣೆ ವಿದ್ಯಾರ್ಥಿಗಳ ಮೇಲಿದೆ

ಮೈಸೂರು, ಮಾ.17(ಬಿಎಲ್‌ಯು)– ದಿವಂಗತ ಪ್ರಾಧ್ಯಾಪಕ ಪ್ರೊ.ಮುಜಾಫರ್ ಅಸ್ಸಾದಿ ಅವರ ದಲಿತ ಹಾಗೂ ರೈತಪರ ಕಾಳಜಿಯ ಕಾರ್ಯಗಳನ್ನು ಜಾರಿಗೊಳಿಸುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ ನೀಡಿದರು.

ನಗರದ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗ ಇಂದು ಆಯೋಜಿಸಿದ್ದ ಪ್ರೊ.ಮುಜಾಫರ್ ಅಸ್ಸಾದಿ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜಕೀಯ ವಿಜ್ಞಾನಿ, ಶಿಕ್ಷಣ ತಜ್ಞ ಹಾಗೂ ಸಾಮಾಜಿಕ ಚಿಂತಕರಾಗಿದ್ದ ಪ್ರೊ.ಮುಜಾಫರ್ ಅಸ್ಸಾದಿ 300ಕ್ಕೂ ಹೆಚ್ಚು ಸಂಶೋಧನಾ ಲೇಖನ ಹಾಗೂ 14 ವಿಜೇತ ಕೃತಿಗಳನ್ನು ರಚಿಸಿದ್ದು, ಇವು ಸಮಾಜಮುಖಿ ವಿಷಯ ವಸ್ತುಗಳನ್ನು ಹೊಂದಿದ್ದವು ಎಂದು ಪ್ರೊ.ಲೋಕನಾಥ್ ಹೇಳಿದರು.



ಮೈಸೂರಿನ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗ ಸೋಮವಾರ ಆಯೋಜಿಸಿದ್ದ ಪ್ರೊ.ಮುಜಾಫರ್ ಅಸ್ಸಾದಿ ನುಡಿನಮನ ಕಾರ್ಯಕ್ರಮವನ್ನು ಅಸ್ಸಾದಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಪ್ರೊ.ಮುಜಾಫರ್ ಅಸ್ಸಾದಿ ಅವರ ಪ್ರತಿಯೊಂದು ಭಾಷಣವೂ ಪರಿಣಾಮಕಾರಿಯಾಗಿದ್ದವು. ಸರ್ಕಾರದ ಗಮನ ಸೆಳೆದು ರೈತರ ಹಾಗೂ ದಲಿತರ ಸಮಸ್ಯೆಗಳನ್ನು ಪರಿಹಾರ ಮಾಡುತ್ತಿದ್ದರು. ಇದರಿಂದ ಪ್ರೊ.ಅಸ್ಸಾದಿ ಅವರು ಇಂದು ನಮ್ಮನ್ನು ಅಗಲಿರಬಹುದು, ಆದರೆ ಅವರು ಮಾಡಿರುವ ಕೆಲಸ ಕಾರ್ಯಗಳು ಸದಾ ನಮ್ಮೊಡನೆ ಇರಲಿದೆ ಎಂದು ಹೇಳಿದರು.

ಸ್ಪಷ್ಟವಾಗಿ ಕನ್ನಡ ಮಾತನಾಡುತ್ತಿದ್ದ ಪ್ರೊ.ಮುಜಾಫರ್ ಅಸ್ಸಾದಿ ಅವರಲ್ಲಿ ಕನ್ನಡ ಪದಮಂಜಗಳಿತ್ತು. ಎಂದೂ ಬೇಸರ ಮಾಡಿಕೊಳ್ಳದೆ ಸದಾ ಹಸನ್ಮುಖಿಯಾಗಿರುತ್ತಿದ್ದರು. ಇಂತಹ ಮಹಾನ್ ವ್ಯಕ್ತಿಯ 30 ವರ್ಷಗಳ ಸಾಧನೆಗಳನ್ನು ವಿದ್ಯಾರ್ಥಿಗಳು ವಿಶ್ಲೇಷಣೆ ಮಾಡಬೇಕು ಎಂದು ಸಲಹೆ ನೀಡಿದ ಪ್ರೊ.ಲೋಕನಾಥ್, ಪ್ರೊ.ಅಸ್ಸಾದಿ ಅವರ ಅಗಲಿಕೆಯಿಂದ ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದಲ್ಲಿ ದೊಡ್ಡ ಕೊರತೆ ಎದುರಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಪ್ರಾಧ್ಯಾಪಕರಾದ ಶಬೀನಾ, ಡಾ.ಕೃಷ್ಣ ಹೊಂಬಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿಎಂ ಸಿದ್ದರಾಮಯ್ಯರಿಂದ ಜನಪರ ಬಜೆಟ್



ಮೈಸೂರು, ಮಾ.17(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ಜನಪರವಾಗಿದೆ. ಹೀಗಿದ್ದರೂ ವಿರೋಧ ಪಕ್ಷಗಳು ಅದನ್ನು ಟೀಕಿಸುತ್ತಿರುವುದು ಕೇವಲ ಆಧಾರರಹಿತವಾದುದಾಗಿದೆ ಎಂದು ನಗರ ಕಾಂಗ್ರೆಸ್ ಕಾನೂನು ವಿಭಾಗದ ಹಿರಿಯ ವಕೀಲರಾದ ಜೆ.ಎನ್.ಲಕ್ಷ್ಮಣ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಯಾವುದೇ ಭೇದ ಭಾವವಿಲ್ಲದೇ ಎಲ್ಲರಿಗೂ ಸಮಾನವಾಗಿ ಅಭಿವೃದ್ಧಿ ಯೋಜನೆ ನೀಡಿದ್ದಾರೆ. ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಆದರೆ ಕೆಲವರ ತುಷ್ಟೀಕರಣದ ಬಜೆಟ್ ಎಂದು ಬಿಜೆಪಿಯವರು ಟೀಕಿಸುತ್ತಿದ್ದಾರೆ. ವಾಸ್ತವಾಗಿ ಈ ಟೀಕೆ ಸುಳ್ಳೆಂಬುದು ಜನರಿಗೆ ಅರಿವಿದೆ ಎಂದರು.

ಕಾಂಗ್ರೆಸ್ ಪಕ್ಷ ಜನ ಸಮುದಾಯದ ಏಳಿಗೆಯ ಸಾಮಾಜಿಕ ಕಾಳಜಿ, ಚಿಂತನೆಗಳ ವೇದಿಕೆ ಆಗಿದೆ. ಪಾರಂಪರಿಕ ಜನಾಂಗೀಯ ಭೇದ ತೊಡೆದು ಹಾಕಲು ಶ್ರಮಿಸುತ್ತಿದೆ. ಹೀಗಿರುವಾಗ ಅದನ್ನು ಟೀಕಿಸುವ ನೈತಿಕ ಹಕ್ಕು ಯಾರಿಗೂ ಇಲ್ಲ. ಸ್ಪಷ್ಟ ಬಹುಮತವಿಲ್ಲದೇ ತನ್ನ ಎರಡು ಪ್ರಮುಖ ಅಂಗ ಪಕ್ಷಗಳನ್ನು ಮುಂದಿಟ್ಟುಕೊಂಡು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ರಚಿಸಲಾಗಿದೆ. ಇದು ಜನಪರವಾಗಿಲ್ಲ ಎಂದು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಎಸ್. ವೈದ್ಯನಾಥನ್ ಉಪಸ್ಥಿತರಿದ್ದರು.

ಮಾ.20ರಿಂದ ಉಚಿತ ಸಿಇಟಿ ತರಬೇತಿ

ಮೈಸೂರು, ಮಾ.17– ತಾಂಡವಪುರ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಾ.20ರಿಂದ ಉಚಿತ ಸಿಇಟಿ ತರಬೇತಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಿನ್ಸಿಪಾಲ್ ಡಾ.ವೈ.ಟಿ.ಕೃಷ್ಣೇಗೌಡ ತಿಳಿಸಿದ್ದಾರೆ.

ಗ್ರಾಮೀಣ ಹಾಗೂ ನಗರ ಪ್ರದೇಶದ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಿಸುವ ಮೂಲಕ ದೇಶದ ತಾಂತ್ರಿಕ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುವುದು ಕಾಲೇಜಿನ ಮುಖ್ಯ ಧ್ಯೇಯವಾಗಿದೆ. ಇಂತಹ ಉದ್ದೇಶಗಳನ್ನು ಒಳಗೊಂಡಿರುವ ನಮ್ಮ ಕಾಲೇಜಿನಲ್ಲಿ, ಸುತ್ತಮುತ್ತಲ ತಾಲೂಕು ಪ್ರತಿಭಾನ್ವಿತ ಅಭ್ಯರ್ಥಿಗಳ ತಾಂತ್ರಿಕ ಭವಿಷ್ಯಕ್ಕೆ ಅನುಕೂಲವಾಗಲೆಂದು ಇಂಜಿನಿಯರ್ ಆಕಾಂಕ್ಷಿಗಳಿಗೆ ಸತತ 8 ವರ್ಷಗಳಿಂದ ಉಚಿತ ಸಿಇಟಿ ತರಬೇತಿಯನ್ನು ನೀಡುತ್ತಾ ಬರುತ್ತಿದ್ದೇವೆ ಎಂದರು.

ಅದರಂತೆಯೇ 2025–2026ನೇ ಸಾಲಿನ ಅಭ್ಯರ್ಥಿಗಳಿಗಾಗಿ ಈ ಬಾರಿಯೂ ಮಾರ್ಚ್ 20ನೇ ತಾರೀಕಿನಿಂದ ಎರಡು ವಾರಗಳ ತನಕ ಉಚಿತ ಸಿಇಟಿ ತರಬೇತಿ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನದ ಊಟದ ವ್ಯವಸ್ಥೆ ಹಾಗೂ ಬರುವ ವಿದ್ಯಾರ್ಥಿಗಳಿಗೆ ಮೈಸೂರು, ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ, ಸರಗೂರು, ಹೆಚ್.ಡಿ.ಕೋಟೆ, ಟಿ.ನರಸೀಪುರ, ಪಾಂಡವಪುರ, ಮಳವಳ್ಳಿ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಮಂಡ್ಯ, ಕೆ.ಆರ್.ನಗರ ಮತ್ತು ಹುಣಸೂರು ತಾಲೂಕುಗಳಿಂದ ಉಚಿತ ಬಸ್ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಹೆಚ್ಚಿನ ಮಾಹಿತಿಗೆ ಸಿಇಟಿ ಸಂಯೋಜಕ ಪ್ರೊ.ಪ್ರದೀಪ್, ಮೊ: 8310854887, ಪ್ರೊ. ಮೊಹಮ್ಮದ್ ಸಲಮತ್, ಮೊ: 9980832371 ಸಂಪರ್ಕಿಸಬಹುದು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು: ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಮೆಟ್ರಿಕ್ ನಂತರದ ಕೋರ್ಸುಗಳಾದ ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ ಮತ್ತು ವೃತ್ತಿಪರ ಸ್ನಾತಕೋತ್ತರ ಪದವಿ ಹಾಗೂ ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 2024–25ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಶುಲ್ಕ ಮರುಪಾವತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು https://ssp.postmatric.karnataka. gov.in/ ಮೂಲಕ ಸಲ್ಲಿಸಬೇಕು. ಮಾಹಿತಿಗೆ ಸಹಾಯವಾಣಿ ಸಂ:8050770005 ಸಂಪರ್ಕಿಸಿ.

ಶಿವ ಜಯಂತಿ ಮಹೋತ್ಸವ...



ಮೈಸೂರು ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಲಾಗಿದ್ದ ಜ್ಞಾನ ವಿಜ್ಞಾನ ಮೇಳದಲ್ಲಿ 89ನೇ ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಅಂಗವಾಗಿ ಶಿವಧ್ವಜಾರೋಹಣ ನೆರವೇರಿಸಲಾಯಿತು. ಯೋಗ ಭವನದ ರಾಜಯೋಗಿ ಬ್ರಹ್ಮಾಕುಮಾರ ನಾಗರಾಜ್ ಭಾಯ್, ಮೈಸೂರು ಉಪವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಪ್ರಾಂಶುಪಾಲ ರಂಗನಾಥ್ ಶಾಸ್ತ್ರೀಜಿ ಇತರರು ಹಾಜರಿದ್ದರು.

ನಾರಿ ಶಕ್ತಿ ಪ್ರಶಸ್ತಿ ಪ್ರದಾನ...



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರು ರೇಡಿಯೋ ಮತ್ತು ವಾಸನ್ ಐ ಕೇರ್ ಹಾಗೂ ಕಾರ್ಯಕ್ರಮ ಸಂಘಟಕರಾದ ಶ್ರೀಮತಿ ದೇಚಮ್ಮ ಇತರರಿಗೆ ನಾರಿ ಶಕ್ತಿ ಪ್ರಶಸ್ತಿ 2025 ಪ್ರದಾನ ಮಾಡಲಾಯಿತು.

ಮೈಸೂರಲ್ಲಿ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ

ಮೈಸೂರು, ಮಾ.17(ಜಿಎ)–ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಅವರ 50ನೇ ವರ್ಷದ ಹುಟ್ಟುಹಬ್ಬವನ್ನು ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಜ್ಯೋತಿಷಿ ವಿಷ್ಣು ಸಾಲಿಗ್ರಾಮ ಸ್ವಾಮೀಜಿ, ಪುನೀತ್ ರಾಜ್‌ಕುಮಾರ್ ಸಮಾಜ ಸೇವಾ ಸಮಿತಿ ಅಧ್ಯಕ್ಷ ಎನ್.ರಾಜು, ಪ್ರತಿಷ್ಠಾನದ ಅಧ್ಯಕ್ಷ ಬಸವ ರಾಜೇಂದ್ರ ಸ್ವಾಮಿ, ನಟ ಸುಪ್ರೀತ್ ಅವರು ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಚಿತ್ರರಂಗದ ಸಾಧನೆ ಮತ್ತು ಸೇವಾ ಕಾರ್ಯಗಳ ಬಗ್ಗೆ ಸ್ಮರಿಸಿದರು.



ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಅವರ 50ನೇ ವರ್ಷದ ಹುಟ್ಟುಹಬ್ಬವನ್ನು ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಚರಿಸಲಾಯಿತು.

ನಂತರ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ ಮಾತನಾಡಿ, ಪುನೀತ್ ನಮ್ಮನ್ನು ಅಗಲಿಲ್ಲ ಎನ್ನುವುದಕ್ಕೆ ಇಂದಿಗೂ ರಾಜ್ಯ ಹಾಗೂ ಇತರೆಡೆಯೂ ಅವರ ಹುಟ್ಟುಹಬ್ಬ ಆಚರಿಸುತ್ತಿರುವುದೇ ಸಾಕ್ಷಿಯಾಗಿದೆ. ಮರಣಾನಂತರ ಅದುವರೆಗೂ ಆತ ಮಾಡಿದ ಸಮಾಜಮುಖಿ ಸೇವಾ ಕಾರ್ಯಗಳು ಬಹಿರಂಗವಾದಾಗ ನಿಜಕ್ಕೂ ಪ್ರಚಾರ ಬಯಸದೇ ಸಮಾಜಕ್ಕೆ ನೆರವಾಗುವವರು ಈಗಲೂ ಇದ್ದಾರೆಯೇ ಎಂಬ ಅಚ್ಚರಿ ಮೂಡುತ್ತದೆ ಎಂದರು.

ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್ ಮಾತನಾಡಿ, ಚಿತ್ರರಂಗದಲ್ಲಿನ ಅನೇಕರನ್ನು ಕಲಾವಿದರು ಎನ್ನುತ್ತೇವೆ. ಆದರೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಿತ್ರಗಳಲ್ಲಿ ನಟಿಸಿ, ಅದರಂತೆಯೇ ಬದುಕಿದ ಪುನೀತ್ ಅಂತಹವರು ಮಾತ್ರ ನಾಯಕ ಎನಿಸಿಕೊಂಡಿದ್ದಾರೆ. ಪುನೀತ್ ರಾಜ್‌ಕುಮಾರ್ ಅವರ ಜೀವನ ಶೈಲಿ ಮತ್ತು ಸಿನಿಮಾಗಳು ಸಾರ್ವಜನಿಕರ ಮೇಲೆ ಸಾಕಷ್ಟು ಪ್ರಭಾವ ಬೀರಿವೆ ಎಂದು ತಿಳಿಸಿದರು.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.17– ಮಾರ್ಚ್ 19ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ, ಮೇಗಳಾಪುರ, ಚಿಕ್ಕನಹಳ್ಳಿ, ಮಲ್ಲೇಗೌಡನಕೊಪ್ಪಲು, ಆನಂದೂರು ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹಾಗೆಯೇ ಅಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಕೆ. ಬೆಳ್ತೂರು, ಮನುಗನಹಳ್ಳಿ ಮತ್ತು ಬಾಚೇಗೌಡನಹಳ್ಳಿ ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಜನ ಸಂಪರ್ಕ ಸಭೆ ದಿನಾಂಕ ಪುನರ್ ನಿಗದಿ

ಮೈಸೂರು,ಮಾ.17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ನ.ರಾ ಮೊಹಲ್ಲಾ ವಿಭಾಗ ವ್ಯಾಪ್ತಿಯ ಕೇಂದ್ರ, ಚಾಮುಂಡಿಪುರಂ, ನ.ರಾ. ಮೊಹಲ್ಲಾ, ಜ್ಯೋತಿನಗರ, ಹಾಗೂ ವರುಣ ಉಪವಿಭಾಗಗಳಲ್ಲಿ ನಾಲ್ಕನೇ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ಮಾರ್ಚ್ 26 ಹಾಗೂ 27 ರಂದು ಏರ್ಪಡಿಸಲಾಗಿತ್ತು.

ಆದರೆ ಆಡಳಿತಾತ್ಮಕ ಕಾರಣಾಂತರಗಳಿಂದ ಸದರಿ ದಿನಾಂಕಗಳಂದು ನಡೆಯಬೇಕಿದ್ದ ಸಭೆಯ ದಿನಾಂಕವನ್ನು ಮಾರ್ಚ್ 19ರಂದು ಬೆಳಗ್ಗೆ 11 ಗಂಟೆಗೆ ವರುಣ ಉಪವಿಭಾಗದಲ್ಲಿ, 20ರಂದು ಬೆಳಗ್ಗೆ 11 ಗಂಟೆಗೆ ಚಾಮುಂಡಿಪುರಂ, ಮತ್ತು ಮಧ್ಯಾಹ್ನ 3 ಗಂಟೆಗೆ ಜ್ಯೋತಿನಗರ ಉಪವಿಭಾಗದಲ್ಲಿ, ಹಾಗೂ 24ರಂದು ಬೆಳಗ್ಗೆ 11 ಗಂಟೆಗೆ ಕೇಂದ್ರ ಹಾಗೂ ಮಧ್ಯಾಹ್ನ 3 ಗಂಟೆಗೆ ನ.ರಾ ಮೊಹಲ್ಲಾದಲ್ಲಿ ನಡೆಸಲು ಉದ್ದೇಶಿಸಲಾಗಿದ್ದು, ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಕೇಂದ್ರ ಚಾಮುಂಡಿಪುರಂ, ನ.ರಾ.ಮೊಹಲ್ಲಾ, ಜ್ಯೋತಿನಗರ, ಹಾಗೂ ವರುಣ ಉಪವಿಭಾಗಗಳಲ್ಲಿ ನಡೆಯುವ ಜನಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಕಿಕ್‌ಬಾಕ್ಸಿಂಗ್ ಸ್ಪರ್ಧೆ...



2024–25ನೇ ಸಾಲಿನ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕಿಕ್‌ಬಾಕ್ಸಿಂಗ್ ಸ್ಪರ್ಧೆಯು ಮಾ.21ರಿಂದ 25ರವರೆಗೆ ಉತ್ತರಪ್ರದೇಶದ ಸ್ವಾಮಿ ವಿವೇಕಾನಂದ ಸುಭಾರ್ತಿ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ. ಪಂದ್ಯಾವಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಮಹಿಳೆಯರ ಕಿಕ್‌ಬಾಕ್ಸಿಂಗ್ ತಂಡ ಭಾಗವಹಿಸಲಿದೆ. (ನಿಂತಿರುವವರು ಎಡದಿಂದ) ಪಲ್ಲವಿ ಎ.ಪಿ, ದುರ್ಗಾ ಭವಾನಿ ಎನ್.ಎಲ್, ಶಾಲಿನಿ ಎಸ್, ಪುಷ್ಪಲತಾ ಹೆಚ್.ಎನ್, ಬಿಂದುಶ್ರೀ, ರೋಶನಿ ಮುತ್ತಣ್ಣ ಬಿ. ಸ್ಫೂರ್ತಿ ಮಲ್ಲಿಕ್ ಎಂ, ಸಹಾನ ಎಂ. (ಕುಳಿತಿರುವವರು ಎಡದಿಂದ) ಸ್ಫೂರ್ತಿ ಸಿ.ಹೆಚ್. (ನಾಯಕಿ), ಜಶ್ವಂತ್ ಎಸ್, ಜೆ,(ತರಬೇತುದಾರ), ಡಾ.ಸಿ.ವೆಂಕಟೇಶ್(ನಿರ್ದೇಶಕರು), ರಮೇಶ್ ಆರ್(ವ್ಯವಸ್ಥಾಪಕ) ಅವರನ್ನು ಚಿತ್ರದಲ್ಲಿ ಕಾಣಬಹುದು.


ನಿಧನ

ಗೋವಿಂದರಾಜ್



ಮೈಸೂರು, ಮಾ.17–ಮೂಲತಃ ಮೈಸೂರು ಕುಂಬಾರಕೊಪ್ಪಲಿನವರಾದ, 'ಮೈಸೂರು ಮಿತ್ರ' ಹಿರಿಯ ಡಿಟಿಪಿ ಆಪರೇಟರ್ ಗೋವಿಂದರಾಜ್ (53) ಅವರು ಸೋಮವಾರ ಮಧ್ಯಾಹ್ನ ಹೃದಯಾಘಾತದಿಂದ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಶ್ರೀಮತಿ ಗೀತಾ, ಪುತ್ರ ಜೀವನ್, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಈಗ ಮೃತದೇಹವನ್ನು ಅವರು ನೆಲೆಸಿದ್ದ ಚಾಮುಂಡೇಶ್ವರಿ ರೈಲ್ವೆ ಬಡಾವಣೆಯ ಮನೆಯಲ್ಲಿ ಇರಿಸಲಾಗಿದ್ದು, ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ಕುಂಬಾರಕೊಪ್ಪಲಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.03.2025 ಮಂಗಳವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9 ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ ಮಹಾಭಿಷೇಕ, ಸ್ಥಳ: ದೇವಸ್ಥಾನದ ಪ್ರಾಂಗಣ, ಹಳೇ ಸಂತೇಪೇಟೆ.

■ **ಬೆಟ್ಟದ ಮಾರಮ್ಮನ ಸೇವಾ ಸಮಿತಿ ಟ್ರಸ್ಟ್:** ಬೆಟ್ಟದ ಮಾರಮ್ಮ ದೇವಸ್ಥಾನದ 20ನೇ ವರ್ಷದ ಪೂಜಾ ಮಹೋತ್ಸವ, ಬೆಳಗ್ಗೆ 7.15 ರಿಂದ ಮಂಗಳವಾದ್ಯ ಸಹಿತ ಕುಂಭ ಕಳಸ ತರುವ ಕಾರ್ಯಕ್ರಮ, 8.30 ರಿಂದ ಅಭಿಷೇಕ, ಅರ್ಚನೆ, ಅಲಂಕಾರ, 11.30ಕ್ಕೆ ತಂಬಿಟ್ಟಿನ ಆರತಿ, ಮಹಾಮಂಗಳಾರತಿ, 12ಕ್ಕೆ ಅನ್ನಸಂತರ್ಪಣೆ, ಸಂಜೆ 6.30ಕ್ಕೆ ಜಾನಪದ ಕಲಾವಿದ ಹಿನಕಲ್ ಮಹಾದೇವಸ್ವಾಮಿಯವರಿಂದ ಸಂಗೀತ ಕಾರ್ಯಕ್ರಮ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಪ್ರಾಂಗಣ, ಜೆಎಸ್‌ಎಸ್ ಸ್ಕೂಲ್ ಹತ್ತಿರ, ಜೆ.ಬಿ.ಪಾಳ್ಯ, ರಾಜೇಂದ್ರನಗರ.

■ **ಮೈಸೂರು ವಿಶ್ವವಿದ್ಯಾನಿಲಯ :** ಮಾನಸ ಯುವ ಸಬಲೀಕರಣ–2025, ಔದ್ಯೋಗಿಕ ಮತ್ತು ಯುವ ಸಬಲೀಕರಣ ಕಾರ್ಯಾಗಾರ, ಉದ್ಘಾಟನೆ : ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೊ. ಎನ್. ನಾಗರಾಜ, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ :** ರಾಜ್ಯ ಮಟ್ಟದ ಯುವ ಜನೋತ್ಸವ–2025, ಬೆಳಗ್ಗೆ 11 ರಿಂದ ಪ್ರೊ. ಜಿ.ಬಿ. ಶಿವರಾಜು ಅವರಿಂದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಗಾಂಧಿ ತತ್ವಗಳು; ಮಧ್ಯಾಹ್ನ 3 ರಿಂದ ಪ್ರೊ. ಎಂ.ಬಿ. ಸುರೇಶ ಅವರಿಂದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ವ್ಯಕ್ತಿತ್ವ ವಿಕಸನ ಕುರಿತು ಉಪನ್ಯಾಸ, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚನ್ನಯ್ಯ ರಸ್ತೆ.

■ **ಎನ್‌ಐಇ ಪ್ರಥಮ ದರ್ಜೆ ಕಾಲೇಜು, ಎನ್‌ಎಸ್‌ಎಸ್ ಯೋಜನೆ :** ಜಯನಗರದ ಸಾಲುಮರದ ತಿಮ್ಮಕ್ಕ ಉದ್ಯಾನವನ ಸ್ವಚ್ಛತಾ ಕಾರ್ಯಕ್ರಮ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಆರ್. ಗೋಪಾಲ ಕೃಷ್ಣೇ ಅರಸ್, ಶಿವಾಜಿರಾವ್ ಗಾಯಕ್ವಾಡ್, ಹೆಚ್.ಸಿ. ಕುಮಾರ, ಶ್ರೀಮತಿ ಬಿ.ಎ. ಸುಮ, ದೈಹಿಕ ಶಿಕ್ಷಣ ನಿರ್ದೇಶಕ ಕೆ.ಎಸ್. ರವಿನಂದನ್, ಬೆಳಗ್ಗೆ 10.30ಕ್ಕೆ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಮಾರಾಟಗಾರರ ಸಂಘ :** ಜಿಲ್ಲಾ ಮಟ್ಟದ ವಾರ್ಷಿಕ ಸಮಾವೇಶ, ಉದ್ಘಾಟನೆ : ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಡಆ.ಕೆ.ಹೆಚ್. ರವಿ, ಮುಖ್ಯ ಅತಿಥಿಗಳು : ಚಾಮರಾಜನಗರ ಜಂಟಿ ಕೃಷಿ ನಿರ್ದೇಶಕ ಡಾ. ಎಸ್.ಎಸ್. ಅಬೀದ್, ಮೈಸೂರು ವಿಭಾಗ ಜಂಟಿ ಕೃಷಿ ನಿರ್ದೇಶಕ ಡಾ.ಕೆ. ಮಧುಸೂದನ್, ತೋಟಗಾರಿಕಾ ಜಂಟಿ ನಿರ್ದೇಶಕ ಡಾ.ಹೆಚ್.ಎಂ. ನಾಗರಾಜ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಬಿ.ಪಿ. ಶಿವಪ್ರಕಾಶ್, ಉಪಸ್ಥಿತರು : ಗೌರವಾಧ್ಯಕ್ಷ ಎಂ.ಎ. ನಂಜಪ್ಪ, ಖೋ ಖೋ ವಿಶ್ವಕಪ್ ಸಾಧಕಿ ಕು.ಬಿ. ಚೈತ್ರ, ಸ್ಥಳ: ಶ್ರೀಧಾಮ ಹಾಲ್, ಇಸ್ಕಾನ್, ಜಯನಗರ, ಬೆಳಗ್ಗೆ 11.30ಕ್ಕೆ.

■ **ಟೆರೇಷಿಯನ್ ಕಾಲೇಜು:** 'ಗ್ರಾಹಕರ ನಡವಳಿಯ ಪ್ರವೃತ್ತಿಗಳು ಮತ್ತು ಸವಾಲುಗಳು' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ವಕೀಲ ಜೆ. ಜಯಪ್ರಕಾಶ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಸಿಸ್ಟರ್ ರೋಹಿಣಿ, ಸ್ಥಳ: ಅವೇ ಮರಿಯಾ ಗೋಲ್ಡನ್ ಬ್ಯುಬಿಲಿ ಆಡಿಟೋರಿಯಂ, ಟೆರೇಷಿಯನ್ ಕಾಲೇಜು, ಮಧ್ಯಾಹ್ನ 3.30ಕ್ಕೆ.

■ **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆ :** ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.

■ **ಶ್ರೀ ದೇವಿಪಟ್ಟಲದಮ್ಮ ಹಾಗೂ ಶ್ರೀ ಕತ್ತಿ ಮುನೇಶ್ವರ ದೇವಸ್ಥಾನ :** 94ನೇ ವರ್ಷದ ಜೋಡಿ ಕರಗ ಜಾತ್ರಾ ಮಹೋತ್ಸವ, ಸ್ಥಳ : ದೇವಸ್ಥಾನ, ಅಶೋಕಪುರಂ.

ಸರಗೂರಿನಲ್ಲಿಂದು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ಸರಗೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು :** ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ನಿವೃತ್ತ ಉಪನ್ಯಾಸಕ ಎಸ್.ಎಸ್. ರಮೇಶ್ ಅವರಿಂದ ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ದತ್ತಿ ಉಪನ್ಯಾಸ, ಪ್ರಾಸ್ತಾವಿಕ ನುಡಿ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ಅಧ್ಯಕ್ಷತೆ : ಸರಗೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಎಂ.ಜೆ. ದಯಾನಂದ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ, ಕೆ.ಬಿ. ಸುನೀತಾ ಆಚಾರ್ಯ, ಟಿ.ಎಸ್.ಸ್ನೇಹಾ, ವ್ಯಾಖ್ಯಾನ–ಡಾ.ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಲ್. ಅರ್ಚನಾ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್. ಎಂ.ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಹತಿ ಟಿ. ಭಾರ್ಗವಪುರಿ–ವೈಯೋಲಿನ್, 4.00 ಕಥಾಕಾಲಕ್ಷೇಪ–ಭಕ್ತ ಸುಧಾಮ, ಪ್ರಸ್ತುತಿ–ವಿದ್ವಾನ್. ಆರ್. ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಮೀನು ಮರಿ ಉತ್ಪಾದನೆ ಈ ಕುರಿತು ಸರಗೂರು ತಾಲೂಕು ಬೀರುವಾಳು ಗ್ರಾಮದ ನುಗು ಮೀನು ಮರಿ ಉತ್ಪಾದನಾ ಕೇಂದ್ರದ ಉಪನಿರ್ದೇಶಕರಾದ ಮಹದೇವ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್, ಡಾ.ಅಂಬರೀಷ್ ಬದುಕಿದ್ದರೆ 'ನಟ್ಟು–ಬೋಲ್ಟು' ಟೈಟ್ ಮಾಡುವ ಮಾತು ಆಡುವ ಧೈರ್ಯ ಮಾಡುತ್ತಿದ್ದರಾ...

●ಹಿರಿಯ ರಂಗಕರ್ಮಿ, ನಟ ಪ್ರಕಾಶ್ ಬೆಳವಾಡಿ ಅಚ್ಚರಿ ಪ್ರಶ್ನೆ ●ರಾಜ್ಯದ ಎಲ್ಲಾ ವಿಚಾರ ತಿಳಿದಂತಹ ನಾಯಕನನ್ನು ಜನರು ಬೆಳೆಸಬೇಕಿದೆ

ಮೈಸೂರು, ಮಾ.17(ಎಸ್‌ಪಿಎನ್)– ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರವನ್ನು ಸಂಪೂರ್ಣ ಅರಿತಿರುವ ನಾಯಕರನ್ನು ಬೆಳೆಸುವ ಅಗತ್ಯತೆ ಕನ್ನಡಿಗರಿಗಿದೆ ಎಂದು ಹಿರಿಯ ರಂಗಕರ್ಮಿ ಪ್ರಕಾಶ್ ಬೆಳವಾಡಿ ಬಲವಾಗಿ ಪ್ರತಿಪಾದಿಸಿದ್ದಾರೆ.

ಮೈಸೂರು ಕಲಾಮಂದಿರದಲ್ಲಿ ಪರಿಸರ ಸೇವಾ ಟ್ರಸ್ಟ್ ವತಿಯಿಂದ 'ಅಪ್ಪು ಐವತ್ತು, ನೀವು ಇರಬೇಕಿತ್ತು' ಶೀರ್ಷಿಕೆಯಡಿ ನಡೆದ ಡಾ.ಪುನೀತ್ ರಾಜ್‌ಕುಮಾರ್ ಅವರ ಜನ್ಮ ದಿನಾಚರಣೆ ಹಾಗೂ ರಸಸಂಜೆ ಕಾರ್ಯಕ್ರಮದಲ್ಲಿ ನಟ ಪುನೀತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮಾತನಾಡಿದರು.

ಬೆಂಗಳೂರಿನಲ್ಲಿ ಮೂಲಸೌಕರ್ಯಗಳ ಕೊರತೆಯಿಂದಾಗಿ ಜನರು ಅಲ್ಲಿ ಬದುಕುವುದೇ ದಿನೇ ದಿನೇ ಕಷ್ಟವಾಗುತ್ತಿದೆ. ಇಂದು ಜೆಸಿ ರಸ್ತೆ ಕಾಮಗಾರಿಗೆ ಅಗೆದು ತಿಂಗಳುಗಳೇ ಕಳೆದಿವೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನಗಳು ಓಡಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ, ರಾಜ್ಯ ಸರ್ಕಾರ ಜಾರಿಗೊಳಿಸಿರುವ ಜನ ವಿರೋಧಿ ನೀತಿಗಳನ್ನು ಖಂಡಿಸಿ, ರಾಜ್ಯಪಾಲರಿಗೆ ಮನವಿ ಪತ್ರ ನೀಡುವ ಕಾರ್ಯಕ್ರಮ ಇಂದು ನಿಗದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಅಪ್ಪು ಐವತ್ತು ಕಾರ್ಯಕ್ರಮಕ್ಕೆ ಬರಲು ಎರಡು ಗಂಟೆ ತಡವಾಯಿತು ಎಂದು ತಾವು ತಡವಾಗಿ ಬಂದಿದ್ದಕ್ಕೆ ಕಾರಣ ತಿಳಿಸಿದರು.

ಆಟೋದಲ್ಲಿ ರಾಜಭವನಕ್ಕೆ ಹೋಗುವ ವೇಳೆ ಆ ಆಟೋ ಚಾಲಕ ನನ್ನ ಜೊತೆ ಮಾತನಾಡುತ್ತ, ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಸಿನಿಮಾ ನಟ–ನಟಿಯರು ಬಂದಿಲ್ಲ ಎಂಬ ಕಾರಣ ಉಲ್ಲೇಖಿಸಿ ಸಿನಿಮಾದವರಿಗೆ 'ನಟ್ಟು–ಬೋಲ್ಟು ಎಲ್ಲಿ ಟೈಟ್ ಮಾಡಬೇಕು ಗೊತ್ತಿದೆ' ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಬಗ್ಗೆ ಕಿರುತೆರೆ, ಹಿರಿತೆರೆ ಹಾಗೂ ರಂಗಭೂಮಿ ಕಲಾವಿದರು ಒಗ್ಗಟ್ಟಾಗಿ ಖಂಡಿಸಲಿಲ್ಲ, ಪ್ರತಿಭಟನೆ ಮಾಡಲಿಲ್ಲ ಏಕೆ ಎಂದು ಪ್ರಶ್ನಿಸಿದ. ಈ ಮಾತಿಗೆ ಆ ಕ್ಷಣಕ್ಕೆ ನನ್ನ ಬಳಿ ಉತ್ತರ ಇಲ್ಲವಾಗಿತ್ತು ಎಂದು ಹೇಳಿದರು.

ಮುಂದುವರೆದು, ವರನಟ ಡಾ.ರಾಜ್‌ಕುಮಾರ್, ಡಾ.ಅಂಬರೀಷ್, ಡಾ.ವಿಷ್ಣುವರ್ಧನ್ ಇಂದು ಬದುಕಿದ್ದರೆ, ಡಿ.ಕೆ.ಶಿವಕುಮಾರ್ 'ನಟ್ಟು –ಬೋಲ್ಟು' ಮಾತು ಹೇಳುವ ಧೈರ್ಯ ಮಾಡುತ್ತಿದ್ದರಾ ಎಂದು ಮರುಪ್ರಶ್ನೆ ಹಾಕಿದರೆ, ಇದಕ್ಕೆ ಸ್ವಲ್ಪ ಮುಜುಗರದಿಂದಲೇ ಇಲ್ಲ ಎಂದು ಉತ್ತರ ನೀಡಿದೆ ಅಂದರೆ, ನಾಡು–ನುಡಿ, ಗಡಿ ವಿಚಾರವನ್ನು ಸಂಪೂರ್ಣವಾಗಿ ತಿಳಿದುಕೊಂಡಿರುವ ಸೂಕ್ತ ಜವಾಬು ನೀಡುವಂತಹ ಒಬ್ಬ ಒಳ್ಳೆಯ ನಾಯಕನ ಅವಶ್ಯಕತೆ ಕರ್ನಾಟಕಕ್ಕೆ ಇದೆ ಎಂದು ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನ ಸಿನಿಮಾ ನಿರ್ದೇಶಕ ಪೂರ್ಣಚಂದ್ರ ತೇಜಸ್ವಿ ಅವರು ಡಾ. ಪುನೀತ್ ರಾಜ್‌ಕುಮಾರ್ ಅವಶ್ಯಕತೆ ಕುರಿತು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಅದು ಸತ್ಯವೂ ಹೌದು. ಹಾಗಾಗಿ ಎಲ್ಲಾ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿರುವ ನಾಯಕನನ್ನು ಕನ್ನಡಿಗರು ಬೆಳೆಸುವ ಪ್ರಯತ್ನ ಮಾಡಬೇಕು ಎಂದು ಕಿವಿಮಾತು ಹೇಳಿದರು.



'ಅಪ್ಪು ಐವತ್ತು; ನೀವು ಇರಬೇಕಿತ್ತು' ಶೀರ್ಷಿಕೆಯಡಿ ನಡೆದ ಡಾ.ಪುನೀತ್ ರಾಜ್‌ಕುಮಾರ್ ಅವರ ಜನ್ಮ ದಿನಾಚರಣೆ ಹಾಗೂ ರಸಸಂಜೆ ಕಾರ್ಯಕ್ರಮದಲ್ಲಿ ಟ್ರಾಫಿಕ್ ವಾರ್ಡನ್ ಮಹೇಶ್ವರನ್ ಹಾಗೂ ಬಟ್ಟೆಯಲ್ಲಿ ಪುನೀತ್ ರಾಜ್ ಕುಮಾರ್ ಅವರ ಭಾವಚಿತ್ರ ಬಿಡಿಸಿದ ಕಲಾವಿದರನ್ನು ಸನ್ಮಾನಿಸಲಾಯಿತು.

> ಕಲಾಮಂದಿರ ಸಭಾಂಗಣದಲ್ಲಿ ಹಿಂಬದಿ ಸೀಟ್ ಸಂಪೂರ್ಣ ಮುರಿದು ಬಿದ್ದಿದ್ದ ಆಸನದ ಜಾಗದಲ್ಲಿ ಕೆಲವು ಮಕ್ಕಳು ಈ ಕಡೆ–ಆ ಕಡೆ ಜಿಗಿಯುವ ಆಟ ಆಡಿ, ಆ ಆಸನಕ್ಕೆ ಮತ್ತಷ್ಟು ಹಾನಿ ಮಾಡುತ್ತಿದ್ದರು. ಇದೇ ರೀತಿ ಸಭಾಂಗಣದಲ್ಲಿ ಮತ್ತಷ್ಟು ಸೀಟುಗಳು ಕಿತ್ತು ಹೋಗಿದ್ದು, ಈ ಸೀಟುಗಳ ರಿಪೇರಿ ಮಾಡಿಸುವಂತೆ ಪ್ರೇಕ್ಷಕರು ಸರ್ಕಾರವನ್ನು ಒತ್ತಾಯಿಸಿದರು.

ಸಾಧಕರಿಗೆ ಸನ್ಮಾನ: ಪುನೀತ್ ರಾಜ್‌ಕುಮಾರ್ ಜನ್ಮದಿನ ಪ್ರಯುಕ್ತ ಕಲಾಮಂದಿರ ಮುಂಭಾಗ ಬೃಹತ್ ಪುನೀತ್ ರಾಜಕುಮಾರ್ ಚಿತ್ರವನ್ನು ಬಿಡಿಸಿದ್ದ ಕಲಾನಿರ್ದೇಶಕರಾದ ಎನ್.ಮಹೇಶ್ವರ, ಮಂಜು ಆರ್. ಬೆಳವಾಡಿ, ಕೆ.ಪುನೀತ್ ಕುಮಾರ್, ಎನ್.ಪರಮೇಶ್ವರ ಹಾಗೂ ಟ್ರಾಫಿಕ್ ವಾರ್ಡನ್ ಮಹೇಶ್ವರನ್ ಅವರನ್ನು ಸನ್ಮಾನಿಸಲಾಯಿತು.

ಅಪ್ಪು–50 ಅಂಗವಾಗಿ ಭುವನಂ ಗಗನಂ ವಿದ್ಯಾರ್ಥಿಗಳಿಂದ ನೃತ್ಯ, ಸಿನಿಮಾ ಗೀತೆಗಳಾದ ಬಾನದಾರಿಯಲ್ಲಿ, ಆ ದೇವರ ಹಾಡಿದು, ಜೋಪಾನ ಜೋಕೆ, ಉಸಿರಾಗುವೆ, ನಿನ್ನ ಜೊತೆ ನಿನ್ನ ಕಥೆ, ಮಳೆ ನಿಂತು ಹೋದ ಮೇಲೆ, ಬೊಂಬೆ ಹೇಳುತ್ತೈತೆ, ಏಕೋ ಏನೂ ನನ್ನಲ್ಲಿ, ಯಾರಿವನು ಯಾರಿವನು, ಪರವಶನಾದೆನು, ನೀರಲ್ಲಿ ಸಣ್ಣ ಅಲೆಯೊಂದು, ಸಾಗರದ ಅಲೆಗೂ, ನೀನು ಇರುವಾಗ, ಕಾಣದಂತೆ ಮಾಯವಾದನು, ಹೊಸಗಾನ ಬಜಾನ, ಗುಬ್ಬಚ್ಚಿ ಗೂಡಿನಲ್ಲಿ, ಎರಡು ಜಡೆಯನ್ನು, ಏನಾಯ್ತು ಇದೇನಾಯ್ತು, ನಿನ್ನಿಂದಲೇ ನಿನ್ನಿಂದಲೇ, ಜೊತೆಜೊತೆಯಲಿ, ಎಲ್ಲಿಂದ ಆರಂಭವೋ, ಏನೆಂದು ಹೆಸರಿಡಲಿ, ಪಾರು ಹಾಗೂ ನಿನ್ನ ಕಂಗಳ ಹಾಡುಗಳಿಗೆ ಗಾಯಕರಾದ ನಿತಿನ್, ಚನ್ನಪ್ಪ ಶೃತಿ ತುಮಕೂರು, ಅನಿತಾ, ಸಿದ್ದು, ದಿವ್ಯ, ನಾಗೇಶ್ ಕಂದೇಗಾಲ, ಕೃಷ್ಣಶೆಟ್ಟಿ, ಅನಿಲ್ ರಾಜ್ ಧ್ವನಿಯಾದರು.

ವೇದಿಕೆಯಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ನಾಗರಾಜ್ ವಿ.ಬೈರಿ,ಪರಿಸರ ಸೇವಾ ಟ್ರಸ್ಟ್ ಅಧ್ಯಕ್ಷ ದೇವನಾಗ್, ಪದ್ಮಾದೇವಿ ಸೇರಿದಂತೆ ಇತರರಿದ್ದರು.

ಮಧುಮೇಹದ ಬಗ್ಗೆ ಜಾಗೃತಿ ಮೂಡಿಸಲು ನಂಜನಗೂಡು ದೇವಸ್ಥಾನದವರೆಗೆ ಶ್ರೀ ದತ್ತ ವಿಜಯಾನಂದ ತೀರ್ಥರ ಪಾದಯಾತ್ರೆ



ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ನಂಜನಗೂಡಿನ ನಂಜುಂಡೇಶ್ವರ ಸ್ವಾಮಿ ದೇವಸ್ಥಾನದವರೆಗೆ ಪಾದಯಾತ್ರೆ ನಡೆಸಲಾಯಿತು.

ಮೈಸೂರು, ಮಾ.17(ಎಂಕೆ)– ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವ ಮಧುಮೇಹ ಕಾಯಿಲೆ ಕುರಿತು ಜಾಗೃತಿ ಮೂಡಿಸಲು 'ನಮ್ಮ ನಡಿಗೆ ಆರೋಗ್ಯವಂತ ವಿಶ್ವದೆಡೆಗೆ' ಘೋಷವಾಕ್ಯದಡಿ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಿಂದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ನಂಜನಗೂಡಿನ ನಂಜುಂಡೇಶ್ವರ ಸ್ವಾಮಿ ದೇವಸ್ಥಾನದವರೆಗೆ ಪಾದಯಾತ್ರೆ ನಡೆಸಲಾಯಿತು.

ಈ ವೇಳೆ ಭಕ್ತರನ್ನುದ್ದೇಶಿಸಿ ಮಾತನಾಡಿದ ಶ್ರೀಗಳು, ಮಧುಮೇಹದ ಬಗ್ಗೆ ಅತೀ ಹೆಚ್ಚು ನಾವು ಕೇಳುತ್ತಿದ್ದೇವೆ. ಮಧುಮೇಹದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸದುದ್ದೇಶದಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಮಧು ಮೇಹದ ಬಗ್ಗೆ ಜನರಲ್ಲಿ ಜಾಗೃತಿ ಅತ್ಯವಶ್ಯಕವಾಗಿದೆ. ಹಾಗಾಗಿ ಪ್ರತಿದಿನ ಎಲ್ಲರೂ ಯಾವುದಾದರೂ ಒಂದು ವ್ಯಾಯಾಮ ಮಾಡಬೇಕು, ಉತ್ತಮ ಸಮಾಜಕ್ಕಾಗಿ ನಾವೆಲ್ಲ ಕೃಷಿ ಮಾಡಬೇಕು. ಜನರಲ್ಲಿ ತಿಳುವಳಿಕೆ ಮೂಡಿಸಲು ಈ ಪಾದಯಾತ್ರೆ ಕೈಗೊಂಡಿದ್ದೇವೆ, ನಮ್ಮ ಜೊತೆ ಭಕ್ತರು ಸೇರಿ ನಡಿಗೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಹೇಳಿದರು.

ಧರ್ಮ ಮಾರ್ಗದಲ್ಲಿ ನಡೆಯಲು ಬೇಕಾದ ಆರೋಗ್ಯ ದಯಪಾಲಿಸು, ನಮಗೆ ಬೇಕಾದ ಉತ್ತಮ ಬುದ್ಧಿ, ಒಳ್ಳೆಯ ಆರೋಗ್ಯ ಅನುಗ್ರಹಿಸು ಎಂದು ಸ್ವಾಮಿ ಶ್ರೀಕಂಠೇಶ್ವರನಲ್ಲಿ ಪ್ರಾರ್ಥಿಸಲು ಈ ಪಾದಯಾತ್ರೆ ಕೈಗೊಂಡಿದ್ದೇವೆ ಹಾಗೆಯೇ ಪ್ರತಿ ದಿನ ಜನರು ತಾವಿರುವ ಜಾಗದಲ್ಲೇ ಯಾವುದಾದರೂ ಆಶ್ರಮ ಅಥವಾ ದೇವಸ್ಥಾನಗಳಿಗೆ ತೆರಳಿ ದೇವರ ದರ್ಶನ ಮಾಡಿ ಪ್ರದಕ್ಷಿಣೆ ಹಾಕಬೇಕು. ಇದರಿಂದ ಭಕ್ತಿ ಹೆಚ್ಚಾಗುತ್ತದೆ ಮತ್ತು ಉತ್ತಮ ಆರೋಗ್ಯವನ್ನು ಪಡೆಯಬಹುದು. ದೇವರ ದರ್ಶನ ಮಾಡುವುದು, ಪ್ರದಕ್ಷಿಣೆ ಹಾಕುವುದು ನಮ್ಮ ಸನಾತನ ಧರ್ಮದ ಸಂಪ್ರದಾಯವೂ ಆಗಿದ್ದು, ಮಕ್ಕಳಿಗೂ ಕೂಡ ಪ್ರದಕ್ಷಿಣೆ ಮಾಡುವುದನ್ನು ಕಲಿಸಬೇಕು ಎಂದು ಸಲಹೆ ನೀಡಿದರು.

ಮುಂಜಾನೆ 5.30ಕ್ಕೆ ಗಣಪತಿ ಸಚ್ಚಿದಾನಂದ ಆಶ್ರಮದಿಂದ ಆರಂಭವಾದ ಪಾದಯಾತ್ರೆ ಬೆಳಗ್ಗೆ 11.30ಕ್ಕೆ ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದ ಆವರಣ ತಲುಪಿತು. ಶ್ರೀಗಳೊಂದಿಗೆ ನೂರಾರು ಭಕ್ತರು ಕೂಡ ಪಾದಯಾತ್ರೆ ಸಾಗಿದರು. ನಂತರ ಶ್ರೀಕಂಠೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಸ್ವಾಮಿಗೆ ಅಭಿಷೇಕ, ವಿಶೇಷ ಪೂಜೆ ನೆರವೇರಿಸಿ ನಂತರ ಮಹಾಮಂಗಳಾರತಿ ನೆರವೇರಿಸಲಾಯಿತು.

ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷರಾಗಿ ಎಂ.ಶಿವಣ್ಣ ನೇಮಕ



ಮೈಸೂರು, ಮಾ.17(ಬಿಎಲ್‌ಯು)– ಮಾಜಿ ಸಚಿವ ಎಂ.ಶಿವಣ್ಣ ಅವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ ಅವರು ಶಿವಣ್ಣ ಅವರನ್ನು ನೇಮಕ ಮಾಡಿದ್ದು, ಅವರಿಗೆ ಮೈಸೂರು, ರಾಮನಗರ, ಮಂಡ್ಯ ಜಿಲ್ಲೆಗಳ ಉಸ್ತುವಾರಿ ನೀಡಲಾಗಿದೆ.

ಲವ್, ಅಟ್ರಾಕ್ಷನ್, ಅಫೆಕ್ಷನ್‌ನಿಂದಾಗಿ ಜೈಲುಗಳಲ್ಲಿ ಯುವ ಕೈದಿಗಳ ಸಂಖ್ಯೆ ಹೆಚ್ಚಾಗುತ್ತಿದೆ!

●ಚಾ.ನಗರ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ನಿರ್ದೇಶಕ ಎನ್.ಮಹೇಶ್ ಆತಂಕದ ನುಡಿ

●ಈಗ ವಿದ್ಯಾವಂತರಾದವರೆಲ್ಲಾ ಬುದ್ಧಿವಂತರಾಗುತ್ತಿಲ್ಲ; ಮಾಹಿತಿ ಕೊರತೆಯಿಂದ ಸಾಧನೆ ಶೂನ್ಯವಾಗಿದೆ

ಮೈಸೂರು, ಮಾ.17(ಎಂಕೆ)– ಲವ್, ಅಟ್ರಾಕ್ಷನ್, ಅಫೆಕ್ಷನ್‌ನಿಂದಾಗಿ ಜೈಲುಗಳಲ್ಲಿ ಯುವ ಕೈದಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಚಾ.ನಗರ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಎನ್.ಮಹೇಶ್ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿರುವ ಸರ್ಕಾರಿ ಯೂತ್ ಹಾಸ್ಟೆಲ್‌ನಲ್ಲಿ ಯುವ ವ್ಯವಹಾರಗಳು ಹಾಗೂ ಕ್ರೀಡಾ ಇಲಾಖೆ ಸಚಿವಾಲಯ, ಮೈ ಭಾರತ್ ನೆಹರು ಯುವ ಕೇಂದ್ರದ ವತಿಯಿಂದ ಅಂತರ ಜಿಲ್ಲಾ(ಮೈಸೂರು–ಧಾರವಾಡ) ಯುವ ವಿನಿಮಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿರುವ ಕಾರಾಗೃಹಗಳಲ್ಲಿ ಸುಮಾರು 54 ಸಾವಿರ ಯುವ ಕೈದಿಗಳಿದ್ದಾರೆ. ಇವರಲ್ಲಿ 25 ರಿಂದ 30 ವರ್ಷದೊಳಗಿನವರೇ ಹೆಚ್ಚು. ಜೊತೆಗೆ ಶೇ.42ರಷ್ಟು ಬಾಲ್ಯವಿವಾಹಗಳಾಗುತ್ತಿರುವುದು ಕೂಡ ಅದೇ ಲವ್, ಅಟ್ರಾಕ್ಷನ್, ಅಫೆಕ್ಷನ್‌ನಿಂದಾಗಿ ಎಂದು ಎಚ್ಚರಿಸಿದರು.

ಇವತ್ತು ಸಾಮಾಜಿಕ ಜಾಲತಾಣದ ಸೆಳೆತ ಹೇಗಿದೆ ಎಂದರೆ, ಎದ್ದಕೂಡಲೇ ದೇವರ ಫೋಟೋ ನೋಡೋ ಬದಲು ಮೊಬೈಲ್ ಹುಡುಕುತ್ತೇವೆ. ಯುವಕ–ಯುವತಿಯರು ಓದುವ ವಯಸ್ಸಿನಲ್ಲಿ ವಿದ್ಯಾಭ್ಯಾಸದತ್ತ ಸರಿಯಾಗಿ ಗಮನ ಕೊಡದೆ ಇರುವ ಪರಿಣಾಮದಿಂದ ಸಾಧನೆ ಮಾಡುವ ಕನಸು ಕಾಣಲು ಭಯಪಡುತ್ತಿದ್ದಾರೆ. ವಿದ್ಯಾವಂತರಾದರೂ ಬುದ್ಧಿವಂತರಾಗುತ್ತಿಲ್ಲ. ನನ್ನಿಂದ ಏನೂ ಆಗಲ್ಲ ಎಂಬ ಭಯದಲ್ಲಿ ಬದುಕುತ್ತಿದ್ದಾರೆ. ಬಾಳು ಬೇರೆ ಬದುಕು ಬೇರೆ, ವಿದ್ಯಾವಂತ ಆಗಬಹುದು. ಆದರೆ ಬುದ್ಧಿವಂತ ಎನಿಸಿಕೊಳ್ಳುವುದು ಮುಖ್ಯ. ನಮ್ಮಲ್ಲಿರುವ ಮಾಹಿತಿ ಕೊರತೆಯಿಂದಾಗಿ ನಮ್ಮ ದೇಶ ಇಂದಿಗೂ ಅಭಿವೃದ್ಧಿಶೀಲ ರಾಷ್ಟ್ರವಾಗಿಯೇ ಇದೆ ಎಂದರು.

ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಅಧ್ಯಕ್ಷ ಇಮ್ರಾನ್ ಅಹ್ಮದ್ ಬೇಗ್ ಮಾತನಾಡಿ, ಸ್ಥಳೀಯ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸ್ಥಿತಿ–ಗತಿಗಳ ಅರಿವಿನ ಜೊತೆಗೆ ಉನ್ನತ ಸ್ಥಾನಕ್ಕೆ ಕೊಂಡೊಯ್ಯಲು ಯುವ ವಿನಿಮಯ ಕಾರ್ಯಕ್ರಮಗಳು ಪ್ರೇರಣೆಯಾಗಿವೆ. ಕೇವಲ ಪ್ರವಾಸಕ್ಕೆ ಸೀಮಿತವಾಗಬಾರದು ಎಂದರು.



ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿರುವ ಸರ್ಕಾರಿ ಯೂತ್ ಹಾಸ್ಟೆಲ್‌ನಲ್ಲಿ ಅಂತರ ಜಿಲ್ಲಾ(ಮೈಸೂರು–ಧಾರವಾಡ) ಯುವ ವಿನಿಮಯ ಕಾರ್ಯಕ್ರಮ ನಡೆಯಿತು

ವಿಶ್ವದಲ್ಲೇ ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುವ ದೇಶ ನಮ್ಮದಾಗಿದ್ದು, ಸ್ವದೇಶಿ ಕಲೆ ಸಾಹಿತ್ಯ ಸಂಸ್ಕೃತಿಯ ಮೌಲ್ಯವನ್ನು ತಿಳಿಸಿ, ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿ ನಿಂತು, ಭಾರತೀಯ ಸಂಸ್ಕೃತಿ, ಪರಂಪರೆಯ ಬಗ್ಗೆ ವಿಶ್ವಕ್ಕೆ ತಿಳಿಸಿಕೊಟ್ಟಿದ್ದಾರೆ. ಅವರ ಆದರ್ಶಗಳಿಂದ ಇಂದು ವಿಶ್ವವೇ ಭಾರತದತ್ತ ನೋಡುತ್ತಿದೆ ಎಂದು ತಿಳಿಸಿದರು.

ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಅಭಿಷೇಕ್ ಚವರೆ ಮಾತನಾಡಿ, ಪರಸ್ಪರ ಸಾಂಸ್ಕೃತಿಕ, ಸಾಮಾಜಿಕ, ಬೌದ್ಧಿಕ ವಿನಿಮಯದ ಈ ವೇದಿಕೆ ವಿಶೇಷತೆಯಿಂದ ಕೂಡಿದ್ದು, ಧಾರವಾಡ ಜಿಲ್ಲೆಯಿಂದ 25 ಮಂದಿ ಯುವಕ–ಯುವತಿಯರು ಭಾಗವಹಿಸಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಪರಸ್ಪರ ಕಲಿಕೆ, ರಾಷ್ಟ್ರ ಮಟ್ಟದ ನಾಯಕತ್ವ ಬೆಳೆಸುವುದೇ ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಎಂದರು.

ಕರಾಟೆ ಶಿಕ್ಷಕ ಬಿ.ಎಸ್.ಗುರುಪ್ರಸಾದ್, ಸರ್ಕಾರಿ ಯೂತ್ ಹಾಸ್ಟೆಲ್ ವ್ಯವಸ್ಥಾಪಕ ಡಾ.ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಲೆಕ್ಕಾಧಿಕಾರಿ ಸಿ.ರವಿಚಂದ್ರನ್, ವಿದ್ಯಾರ್ಥಿ ಸಂಘಟಕರಾದ ಚಿರಂಜೀವಿ, ಅಮಿತ್, ತೇಜ ಮತ್ತಿತರರಿದ್ದರು.

> **ಶಾಲೆಯಲ್ಲಿ ಬಿಸಿಯೂಟ... ಜೈಲಲ್ಲಿ ಬಿಸಿ ಗೂಸಾ...!**
>
> ಇವಾಗ ಶಾಲೆ–ಕಾಲೇಜುಗಳಲ್ಲಿ ಮೊದಲಿನಂತೆ ಹೊಡೆಯುತ್ತಿಲ್ಲ. ಬಿಸಿಯೂಟ ನೀಡಿ, ಚೆನ್ನಾಗಿ ಓದಿ ಎಂದು ಪ್ರೋತ್ಸಾಹ ನೀಡುತ್ತಿದ್ದರೆ, ಬಿಸಿಯೂಟ ತಿಂದು ಅಡ್ಡದಾರಿ ತುಳಿಯುವ ಯುವಕರು ಪೊಲೀಸ್ ಠಾಣೆಯಲ್ಲಿ ಬಿಸಿ ಬಿಸಿ ಗೂಸಾ ತಿನ್ನುವಂತಾಗುತ್ತಿದೆ. ಪೋಕ್ಸೋ ಕಾಯ್ದೆಯಡಿ 25 ವರ್ಷದ ಯುವಕನಿಗೆ 20 ವರ್ಷ ಶಿಕ್ಷೆಯಾದರೆ, ಬಿಡುಗಡೆಯಾಗುವಷ್ಟರಲ್ಲಿ 45 ವರ್ಷ ವಯಸ್ಸಾಗಿರುತ್ತದೆ. ಅಷ್ಟರಲ್ಲಿ ಆತನ ಆಯಸ್ಸೇ ಮುಗಿದು ಹೋಗಿರುತ್ತದೆ. ಎಷ್ಟೋ ಜನ್ಮಗಳ ನಂತರ ಮನುಷ್ಯ ಜನ್ಮ ದೊರೆಯಲಿದೆ ಎನ್ನುತ್ತಾರೆ. ಆದ್ದರಿಂದ ಮನುಷ್ಯನಾಗಿ ಹುಟ್ಟಿದ ಮೇಲೆ ಸಮಾಜಕ್ಕೆ ಕೊಡುಗೆ ನೀಡುವಂತಹ ವ್ಯಕ್ತಿಗಳಾಗಿ ಬೆಳೆಯಬೇಕು. ಡೆವಲಪ್‌ಮೆಂಟ್ ಎಂಬುದು ನಿಮ್ಮ ವ್ಯಕ್ತಿತ್ವದ ವಿಕಸನದಲ್ಲಾಗಬೇಕು.
>
> – ಎನ್.ಮಹೇಶ್

ಕೆ.ಆರ್.ಕ್ಷೇತ್ರದ ವಸತಿ ಯೋಜನೆ ಸಂಬಂಧ ಇಂದು ವಿಧಾನಸೌಧದಲ್ಲಿ ಸಭೆ



ಮೈಸೂರು, ಮಾ.17(ಎಂಕೆ)– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪೌರಕಾರ್ಮಿಕ ವಸತಿ ಸಮುಚ್ಚಯ ನಿರ್ಮಾಣ, ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ರಾಜೀವ್ ಗಾಂಧಿ ವಸತಿ ಯೋಜನೆಗಳ ಕುರಿತು ವಸತಿ ಸಚಿವರ ಅಧ್ಯಕ್ಷತೆಯಲ್ಲಿ ನಾಳೆ(ಮಾ.18) ಮಧ್ಯಾಹ್ನ 2 ಗಂಟೆಗೆ ವಿಧಾನಸೌಧದಲ್ಲಿ ಸಭೆ ನಡೆಯಲಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ.

ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಭಾಗವಹಿಸಲಿದ್ದು, ಕ್ಷೇತ್ರದ ವ್ಯಾಪ್ತಿಯಲ್ಲಿ ಪೌರಕಾರ್ಮಿಕ ವಸತಿ ಸಮುಚ್ಚಯ ನಿರ್ಮಾಣ, ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ರಾಜೀವ್ ಗಾಂಧಿ ವಸತಿ ಯೋಜನೆಯಡಿ ನಿರ್ಮಾಣಗೊಳುತ್ತಿರುವ ಹಾಗೂ ಆಗಬೇಕಾಗಿರುವ ಕಾಮಗಾರಿಗಳ ಕುರಿತು ಚರ್ಚಿಸಲಾಗುವುದು ಎಂದು ತಿಳಿಸಿದ್ದಾರೆ.

ಮಾ.15ರಂದು ಸದನದಲ್ಲಿ ಪೌರಕಾರ್ಮಿಕರ ವಸತಿ ಸಮುಚ್ಚಯದ ಬಗ್ಗೆ ಪ್ರಶ್ನೆ ಕೇಳಿದ್ದು, ಪೌರಕಾರ್ಮಿಕರ ವಸತಿ ಸಮುಚ್ಚಯ ನಿರ್ವಹಣೆ, ದುರಸ್ತಿ ಕಾಮಗಾರಿಗಳನ್ನು ನಡೆಸುವ ಕುರಿತು ಪ್ರಶ್ನಿಸಲಾಗಿತ್ತು ಈ ಸಂಬಂಧ ಚರ್ಚಿಸಲು ಸಭೆ ಕರೆಯಲಾಗಿದೆ ಎಂದರು.

ಹಲ್ಲೆ ಆರೋಪ: ಬಸ್ ಚಾಲಕನ ವಿರುದ್ಧ ನಿರ್ವಾಹಕ ದೂರು ದಾಖಲು

ಮೈಸೂರು, ಮಾ.17(ಎಸ್‌ಬಿಡಿ)– ಸಾರಿಗೆ ಸಂಸ್ಥೆ ಬಸ್ ಚಾಲಕನ ವಿರುದ್ಧ ಜೊತೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನಿರ್ವಾಹಕನೇ ಪೊಲೀಸರಿಗೆ ದೂರು ನೀಡಿದ್ದಾರೆ.

ಕೆಎಸ್‌ಆರ್‌ಟಿಸಿ ಮಡಿಕೇರಿ ಡಿಪೋ ಸಿಬ್ಬಂದಿಗಳ ರಂಪಾಟ, ಲಷ್ಕರ್ ಪೊಲೀಸ್ ಠಾಣೆ ಮೆಟ್ಟಿಲೇರಿದೆ. ಚಾಲಕ ದಯಾನಂದ ಅವಾಚ್ಯವಾಗಿ ಬೈದು, ಹಲ್ಲೆ ನಡೆಸಿರುವುದಾಗಿ ನಿರ್ವಾಹಕ ಅಪ್ಪಯ್ಯ ದೂರು ದಾಖಲಿಸಿದ್ದಾರೆ.

ಮಾ.13ರಂದು ಮಡಿಕೇರಿ–ಮೈಸೂರು –ಬೆಂಗಳೂರು ಮಾರ್ಗದ ಬಸ್‌ನಲ್ಲಿ ಕಾರ್ಯ ನಿರ್ವಹಿಸಿದ ಇವರಿಬ್ಬರ ನಡುವೆ ಮೈಸೂರು ಸಬರ್ಬನ್ ಬಸ್ ನಿಲ್ದಾಣದಲ್ಲಿ ಕ್ಷುಲ್ಲಕ ಕಾರಣಕ್ಕೆ ಜಗಳವಾಗಿದೆ.

ಟಿಕೆಟ್ ವಿತರಣೆ ಮಾಡಿ, ಟಿಸಿ ಬಳಿ ಎಂಟ್ರಿ ಮಾಡಿಸಲು ಹೋಗಿ ಬರುವಷ್ಟರಲ್ಲಿ ಬಸ್ ಸ್ಟಾರ್ಟ್ ಮಾಡಿದ್ದ ಚಾಲಕ ದಯಾನಂದ್, ಎಂಟ್ರಿ ಹಾಕಿಸಲು ಇಷ್ಟೊತ್ತು ಬೇಕಾ ಎಂದು ಅವಾಚ್ಯವಾಗಿ ಬೈದರು. ಟಿಸಿಯವರಿಗೆ ಕಾರ್ಯದೊತ್ತಡ ಇದ್ದ ಕಾರಣ ಸ್ವಲ್ಪ ತಡವಾಯಿತು ಎಂದರೂ ಸುಮ್ಮನಾಗಲಿಲ್ಲ. ಫೈವ್‌ಲೈಟ್ ಜಂಕ್ಷನ್‌ನಲ್ಲಿ ಬಸ್ ನಿಲ್ಲಿಸಿ, ಟಿಕೆಟ್ ವಿತರಿಸಿದ ಬಳಿಕ ಬಾನೆಟ್ ಪಕ್ಕ ನಿಂತಿದ್ದಾಗ ಚಾಲಕ ಮತ್ತೆ ಜಗಳ ತೆಗೆದು, ಹಲ್ಲೆ ನಡೆಸಿದರು. ಘಟನೆ ಬಗ್ಗೆ ಅಧಿಕಾರಿಗಳಿಗೆ ಕರೆ ಮಾಡಿ ತಿಳಿಸಿ, ನೋವಿನ ಮಾತ್ರೆ ಸೇವಿಸಿ, ಅಂದಿನ ಕರ್ತವ್ಯ ಪೂರ್ಣಗೊಳಿಸಿದೆ. ಮರುದಿನ ಕೈ ಊದಿಕೊಂಡಿದ್ದರಿಂದ ಮಡಿಕೇರಿ ಜಿಲ್ಲಾಸ್ಪತ್ರೆಗೆ ತೆರಳಿ, ವೈದ್ಯರ ಸೂಚನೆಯಂತೆ ಒಂದು ದಿನ ದಾಖಲಾಗಿ ಚಿಕಿತ್ಸೆ ಪಡೆದಿರುವುದಾಗಿ ನಿರ್ವಾಹಕ ಅಪ್ಪಯ್ಯ, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಮಕ್ಕಳಿಗೆ ಶಿಕ್ಷಣ ಕೊಡಿಸುವಾಗ ಲಿಂಗ ತಾರತಮ್ಯ ಮಾಡದಿರಿ

ಸಮಾಜ ಕಾರ್ಯ ಪ್ರಾಧ್ಯಾಪಕಿ ಡಾ. ಜ್ಯೋತಿ ಪೋಷಕರಿಗೆ ಕಿವಿಮಾತು

ಮೈಸೂರು, ಮಾ.17(ಎಂಟಿವೈ)– ಪೋಷಕರು ಲಿಂಗತಾರತಮ್ಯ ಮಾಡದೆ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಮುಂದಾದರೆ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಸಾಧನೆ ಮಾಡುವುದರಿಂದ ಸಾಧ್ಯವಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಪ್ರಾಧ್ಯಾಪಕಿ ಡಾ.ಹೆಚ್.ಪಿ.ಜ್ಯೋತಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಾಗೂ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಸೋಮವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ಕರ್ನಾಟಕದಲ್ಲಿ ಬುಡಕಟ್ಟು ಮಹಿಳೆಯರ ಸ್ಥಾನಮಾನ, ಸಮಸ್ಯೆಗಳು, ಸವಾಲುಗಳು ಮತ್ತು ಸಬಲೀಕರಣದ ತಂತ್ರ' ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಎಲ್ಲೆಡೆ ಮಹಿಳಾ ದಿನಾಚರಣೆಯನ್ನು ಹಬ್ಬದಂತೆ ಆಚರಿಸುತ್ತಿದ್ದರೂ ಇದುವರೆಗೂ ಮಹಿಳೆಯರಿಗೆ ಸಮಾನತೆ ಸಿಕ್ಕಿಲ್ಲ. ಸಮಾನತೆ ಸಿಗಬೇಕಾದರೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡಬೇಕಾದರೆ ಮೊದಲು ಹೆಣ್ಣನ್ನು ಹೆಣ್ಣು ಗೌರವಿಸುವಂತಾಗಬೇಕು ಎಂದರು.

ಪ್ರತಿಯೊಂದು ಮನೆಯಲ್ಲೂ ಪೋಷಕರು ಮಕ್ಕಳನ್ನು ಲಿಂಗ ತಾರತಮ್ಯದಿಂದ ಕಾಣಬಾರದು. ಹೆಣ್ಣು–ಗಂಡು ಎಂಬ ಭೇದ ತೊಡೆದು ಹಾಕಿ, ಸರಿಸಮಾನರಾಗಿ ಶಿಕ್ಷಣ ಕೊಡಿಸಬೇಕು. ಲಿಂಗ ತಾರತಮ್ಯ ತೊಡೆದು ಹಾಕಬೇಕೆಂದರೆ ತಾಯಂದಿರ ಪಾತ್ರ ಬಹುಮುಖ್ಯ, ಹೆಣ್ಣು ಮಕ್ಕಳಿಗೆ ಶಿಕ್ಷಣದೊಂದಿಗೆ ಕೌಶಲ್ಯ ತರಬೇತಿ ಕೊಡಿಸಬೇಕು. ಪ್ರಶ್ನಿಸುವ ಗುಣವನ್ನು ಕಲಿಸಿ ಬಾಲ್ಯ ವಿವಾಹವನ್ನು ತಡೆಗಟ್ಟಲು ಬಾಲ್ಯದಲ್ಲಿಯೇ ಮಹಿಳೆಯರು ಪಣ ತೊಡಬೇಕು. ತಾಯಿಯ ಸಂಸ್ಕಾರ, ಗಂಡನ ಮನೆ ಸಹಕಾರವಿದ್ದರೆ ಮಹಿಳೆ ಸಾಧನೆ ಮಾಡಬಲ್ಲಳು. ಬುಡಕಟ್ಟು ಮಹಿಳೆಯರು ಸದೃಢರಾಗಿದ್ದು, ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಇಎಂಆರ್‌ಸಿ ನಿರ್ದೇಶಕರಾದ ಪ್ರೊ. ಸಪ್ನ ಎಂ.ಎಸ್. ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣದಿಂದ ಮಾತ್ರ ಜೀವನ ರೂಪಿಸಿಕೊಳ್ಳಲು ಸಾಧ್ಯ. ಮಹಿಳೆಯರು ಎದೆಗುಂದದೆ ಯಾರ ಮೇಲೂ ಅವಲಂಬಿತರಾಗದೆ, ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು. ಸಮಾಜದಲ್ಲಿ ಹೆಣ್ಣು ಮಕ್ಕಳೆಂದರೆ ಕೀಳರಿಮೆ ಇದೆ. ಅದನ್ನು ಮೆಟ್ಟಿ ನಿಲ್ಲಲು ಮಹಿಳೆಯರು ಸಿದ್ಧರಿರಬೇಕು. ಅಸ್ತಿತ್ವ ಕಾಪಾಡಿಕೊಂಡು ಸಮಾಜಕ್ಕೆ ಕೊಡುಗೆ ನೀಡಬೇಕು. ಮಹಿಳೆಯರು ಆರೋಗ್ಯದ ಕಡೆ ಹೆಚ್ಚು ಗಮನ ಕೊಡಬೇಕು. ಏನೇ ಕಷ್ಟ ಎದುರಾದರೂ ಮಾನಸಿಕವಾಗಿ ಸದೃಢರಾಗಿ, ಸ್ವಾವಲಂಬಿಗಳಾಗಿ ಬದುಕಬೇಕು ಎಂದು ಮನವಿ ಮಾಡಿದರು.



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಸಾಧನೆ ಮಾಡಿದ ಬುಡಕಟ್ಟು ಮಹಿಳೆಯರನ್ನು ಸನ್ಮಾನಿಸಲಾಯಿತು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಮಾತನಾಡಿ, ಮಹಿಳಾ ದಿನಾಚರಣೆಯ ಅಂಗವಾಗಿ ಬುಡಕಟ್ಟು ಸಮುದಾಯದಲ್ಲಿ ಸಾಧನೆ ಮಾಡಿರುವ ಡಾ. ದಿವ್ಯ ಎಸ್.ಆರ್., ಡಾ.ಕಲಾವತಿ, ಡಾ. ಸಬಿತಾ, ಸ್ರುಜನ್, ಮಾಸ್ತಮ್ಮ, ಕುಂಬಿಅಮ್ಮ, ಮಾದಮ್ಮ, ಜೆ.ಆರ್. ರಾಣಿಯವರನ್ನು ಅಭಿನಂದಿಸಿದ್ದೇವೆ. ಈ ಎಲ್ಲಾ ಸಾಧಕರು ಮುಂದಿನ ಪೀಳಿಗೆಗೆ ಮಾದರಿಯಾಗಬೇಕು. ಈ ಸಾಧಕಿಯರ ಬಗ್ಗೆ ಸಾಕ್ಷ್ಯಚಿತ್ರ ಮಾಡುವ ಯೋಜನೆ ರೂಪಿಸಲಾಗುವುದು. ಸಾಧನೆಗೆ ಪ್ರೋತ್ಸಾಹವಿದ್ದರೆ ಏನು ಬೇಕಾದರೂ ಸಾಧಿಸಬಹುದು. ವಿದ್ಯಾರ್ಥಿಗಳು ಸಾಧಕರನ್ನು ಆದರ್ಶವಾಗಿಟ್ಟುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಡಾ. ದೀಪಾಭಟ್, ಡಾ. ರತ್ನಮ್ಮ, ಡಾ. ಸಬಿತಾ ಕೊರಗರವರಿಂದ ವಿಚಾರಗೋಷ್ಠಿಗಳು ನಡೆದವು. ಈ ಸಂದರ್ಭದಲ್ಲಿ ಸಂಶೋಧನಾಧಿಕಾರಿ ಕೆ. ಶ್ರೀನಿವಾಸ, ಡಾ. ಮೋಹನ್ ಕುಮಾರ್, ಡಾ. ಮಂಜುನಾಥ್, ಡಾ. ರವಿಕುಮಾರ್, ಬಿ.ಆರ್. ಭವ್ಯ, ಗುಣಧರ್, ವೇಣುಕಾಂತ, ಹೇಮಚಂದ್ರ, ಗಂಗಾಧರಯ್ಯ, ಪುಷ್ಪಲತಾ, ದಾಕ್ಷಾಯಿಣಿ, ಪಿ. ಮಮತ, ಸರಸ್ವತಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಮಾರುತಿ 800 ಹರಾಜು ಹಾಕಲಾಗುತ್ತಿತ್ತು.
10 ಲಕ್ಷ, 20 ಲಕ್ಷ, 40 ಲಕ್ಷ ಅಂತ ಕೇಳಾಕತ್ತಿದ್ದರು.
ಬಶ್ಯಾ : ಈ ಗಾಡಿಗೆ ಇಷ್ಟೊಂದು ರೇಟ್ ಯಾಕೆ?
ಒಬ್ಬ : ಈ ಗಾಡಿದು 23 ಸಲ ಆಕ್ಸಿಡೆಂಟ್ ಆಗೈತಿ.
ಪ್ರತಿ ಸಲ ಹೆಂಡತಿನೇ ಸತ್ತಾಳ...!
ಅವನೌನ ನಂದು ಒಂದು ಕೋಟಿ.

ಮೈಸೂರು ಮಿತ್ರ

ಮಂಗಳವಾರ, 18 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನೋವು ಕಡಿಮೆ ಆಗಿಲ್ಲ, ತಾಳ್ಮೆ ಹೆಚ್ಚಾಗಿದೆ ಅಷ್ಟೆ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೆಣ್ಣಿಗೆ ಹಟವಿರಬಾರದು, ಗಂಡಿಗೆ ಚಟವಿರಬಾರದು.

ನಿಮ್ಮ ಪತ್ರಗಳು

ವಿದ್ಯಾರ್ಥಿಗಳೇ ಆತ್ಮವಿಶ್ವಾಸ; ಮನೋಬಲದಿಂದ ಪರೀಕ್ಷೆ ಎದುರಿಸಿ

ಮಾನ್ಯರೆ,

ಮಾರ್ಚ್ ಮತ್ತು ಏಪ್ರಿಲ್ ಮಾಸ ಬಂತೆಂದರೆ ವಿದ್ಯಾರ್ಥಿಗಳು ಒಂದು ರೀತಿಯಲ್ಲಿ ಆತಂಕಿತರಾಗುತ್ತಾರೆ. ಕೆಲವು ಮಕ್ಕಳಿಗೆ ಇವುಗಳು ಇಷ್ಟವಿಲ್ಲದ ಮಾಸಗಳೆನ್ನಬಹುದು. ಇದಕ್ಕೆ ಕಾರಣ ಏನೆಂದು ನೋಡಿದಾಗ ನಮಗೆ ತಿಳಿದು ಬರುವುದು ಈ ತಿಂಗಳಲ್ಲಿ ಬರುವ ಪರೀಕ್ಷೆಯೆಂಬ ಸವಾಲು ಎನ್ನಬಹುದು. ಕೆಲವು ಮಕ್ಕಳು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಬಿಡುತ್ತೇವೆಂದು ಹೆದರಿ ಜರ್ಝರಿತರಾಗಿ ಬಿಡುತ್ತಾರೆ. ಆದರೆ ಈ ಅಳಲನ್ನು ಅವರು ಯಾರಲ್ಲೂ ಹೇಳಿಕೊಳ್ಳಲಾಗದೇ ಮನದಲ್ಲೇ ಸಂಕಟಪಡುತ್ತಾರೆ.

ಅದರಲ್ಲೂ ಪಬ್ಲಿಕ್ ಪರೀಕ್ಷೆ ಎದುರಿಸುವ ವಿದ್ಯಾರ್ಥಿಗಳಂತೂ ಇನ್ನೂ ಖಿನ್ನರಾಗಿ ಬಿಡುತ್ತಾರೆ. ವಿದ್ಯಾರ್ಥಿಗಳು ತಾವು ಎಷ್ಟೇ ತಯಾರಾಗಿದ್ದರೂ ಪರೀಕ್ಷೆಯ ದಿನಗಳು ಹತ್ತಿರ ಬರುತ್ತಿದ್ದಂತೆ ಚಿಂತೆಗೀಡಾಗುತ್ತಾರೆ. ಇಂತಹ ಸಂದರ್ಭದ ದಿನಗಳಲ್ಲಿ ವಿದ್ಯಾರ್ಥಿಗಳು ಹೆದರಬಾರದು, ಚಿಂತೆಗೀಡಾಗಬಾರದು. ಇದರಿಂದ ಕಲಿತ ವಿಷಯಗಳು ಮರೆತು ಹೋಗಬಹುದು. ತಾಳ್ಮೆಯಿಂದ ಇರುವುದನ್ನು ಅರಿಯಬೇಕು. ಸರಿಯಾದ ಸಮಯಕ್ಕೆ ಆಹಾರವನ್ನು ಸೇವಿಸಬೇಕು. ಓದುವ ತರಾತುರಿಯಲ್ಲಿ ಸಮಯಕ್ಕೆ ಸರಿಯಾಗಿ ಊಟ, ನಿದ್ರೆ ಮಾಡದೇ ಹೋದರೆ ಅನಾರೋಗ್ಯ ಕಾಡಬಹುದು.

ಓದುವ ವಿಷಯ ಸಂಬಂಧ ಶಿಕ್ಷಕರ ಜೊತೆ ಸದಾ ಚರ್ಚೆ ನಡೆಸುತ್ತಾ ಇರಬೇಕು. ಶಾಲೆಯಲ್ಲಿ ಅಲ್ಲದೇ ಮನೆಗೆ ಬಂದಾಗಲೂ ಆ ವಿಷಯದಲ್ಲಿ ಶಿಕ್ಷಕರ ಜೊತೆ ಅವಿನಾಭಾವ ಸಂಬಂಧ ಹೊಂದಿರಬೇಕು. ಎಲ್ಲಕ್ಕಿಂತಲೂ ಮಿಗಿಲಾಗಿ ನಿಮ್ಮಲ್ಲಿ ಆತ್ಮಸ್ಥೈರ್ಯ ಮತ್ತು ಆತ್ಮವಿಶ್ವಾಸ ಅಧಿಕವಾಗಿರಬೇಕು. ಅದನ್ನು ಎಂದಿಗೂ ಕಳೆದುಕೊಳ್ಳಬಾರದು. ಆತ್ಮವಿಶ್ವಾಸವೇ ನಿಮಗೆ ಅರ್ಧಬಲವನ್ನು ನೀಡುತ್ತದೆ. ನಾನು ಪರೀಕ್ಷೆಯನ್ನು ಎದುರಿಸಬಲ್ಲೇ? ನಾನು ಅಧಿಕ ಅಂಕಗಳೊಂದಿಗೆ ಉತ್ತೀರ್ಣನಾಗಬಲ್ಲೇ? ಎಂಬ ಮನೋಬಲದೊಂದಿಗೆ ನೀವು ಸದಾ ಆಶಾವಾದಿಗಳಾಗಿರಬೇಕು. ಪರೀಕ್ಷೆ ಸಮಯದಲ್ಲಿ ಹಗಲು ಮತ್ತು ಇರುಳು ಹತ್ತು ನಿಮಿಷಗಳು ಧ್ಯಾನ ಮಾಡುವುದು ಉತ್ತಮ. ಕಲಿತ ವಿಷಯಗಳನ್ನು ಮನನ ಮಾಡಿಕೊಳ್ಳುತ್ತಿರಬೇಕು.

ಪರೀಕ್ಷೆಗೆ ಸಂಬಂಧಿಸಿದ ಕಾರ್ಯಾಗಾರಗಳು ನಿಮ್ಮ ಸುತ್ತಮುತ್ತಲಿನ ಸ್ಥಳಗಳಲ್ಲಿ ನಡೆದರೆ ಅವುಗಳಲ್ಲಿ ಭಾಗವಹಿಸಿ ಅಲ್ಲಿನ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯ ಆಲಿಸಿ ಅದನ್ನು ಅಳವಡಿಸಿಕೊಳ್ಳಬೇಕು. ಹಾಗೇ ದೂರದರ್ಶನ ಹಾಗೂ ರೇಡಿಯೋಗಳಲ್ಲಿ ಬರುವ ಪರೀಕ್ಷೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ತಪ್ಪದೇ ಆಲಿಸುವುದು ಸಹಕಾರಿ. ತಮ್ಮ ಶಾಲೆಗಳಲ್ಲಿ ನಡೆಸುವ ಎಲ್ಲಾ ಕಿರು ಪರೀಕ್ಷೆಗಳಲ್ಲಿ ಸಕಾರಾತ್ಮಕವಾಗಿ ಭಾಗವಹಿಸಬೇಕು. ತಮಗೆ ಬೇಕೆನಿಸಿದ ವಿಷಯಗಳ ಬಗ್ಗೆ ಯಾವುದೇ ಸಂಕೋಚವಿಲ್ಲದೆ ನಿಮ್ಮ ಶಿಕ್ಷಕರಲ್ಲಿ ಕೇಳಿ ಬಗೆಹರಿಸಿಕೊಳ್ಳುವುದು ಉತ್ತಮ. ಆತ್ಮವಿಶ್ವಾಸದಿಂದ ಮುನ್ನಡೆದರೆ ನಿಮಗೆ ಜಯ ಖಂಡಿತ.

– ಅನಿಲ್ ರಾಜ, ಸಹ ಶಿಕ್ಷಕ, ಗೀತಾ ಭಾರತಿ ಶಾಲೆ, ಮೈಸೂರು.

ಕೆಂಚಲಗೂಡು ರಸ್ತೆ ದುರಸ್ತಿಗೊಳಿಸಿ

ಮಾನ್ಯರೆ,


ಮೈಸೂರು ತಾಲೂಕು ಜಯಪುರ ಹೋಬಳಿ ಹೆಚ್.ಡಿ.ಕೋಟೆ ರಸ್ತೆಯ ಕೆಂಚಲಗೂಡು ಗೇಟ್‌ನಿಂದ ಮೈಸೂರಿಗೆ ಮಾರಮ್ಮನವರ ದೇವಸ್ಥಾನದ ಪಕ್ಕದಲ್ಲಿ ಹೋಗಿ ಬರಲು ಸುಮಾರು ಐದು ಕಿಲೋ ಮೀಟರ್ ಉದ್ದದ ರಸ್ತೆ ಇದೆ. ದಿನಂಪ್ರತಿ ಸಾವಿರಾರು ಜನರು ಈ ರಸ್ತೆಯಲ್ಲಿ ಪ್ರಯಾಣ ಮಾಡುತ್ತಾರೆ. ಆದರೆ, ಇತ್ತೀಚೆಗೆ ವಾಹನಗಳಲ್ಲಿ ಪ್ರಯಾಣ ಮಾಡಲಾಗದಷ್ಟು ರಸ್ತೆ ಗುಂಡಿಗಳಾಗಿ ಹಾಳಾಗಿರುತ್ತದೆ. ಈ ರಸ್ತೆಯಲ್ಲಿ ಪ್ರಯಾಸಪಟ್ಟು ಹಗಲಲ್ಲಿ ಮಾತ್ರ ಪ್ರಯಾಣಿಸಬಹುದಾಗಿದೆ. ಅಂದರೆ ಸಂಜೆಯ ನಂತರ ಪ್ರಯಾಣಿಸಲು ಆಗದು. ಈ ರಸ್ತೆ ಸುಮಾರು ಒಂದೂವರೆ ಕಿಲೋ ಮೀಟರ್ ತೀರಾ ಹಾಳಾಗಿದ್ದು, ದುರಸ್ತಿಯಾಗಬೇಕಾಗಿದೆ. ಕೆಲ ದಿನಗಳ ಹಿಂದೆ ಸುಮಾರು 150 ಮೀಟರಿನಷ್ಟು ತೇಪೆ ಹಾಕಲಾಗಿದೆ. ಈಗಲಾದರೂ ಪೂರ್ಣ ದುರಸ್ತಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ಕೆ.ಪಿ.ನಂಜುಂಡ ಸ್ವಾಮಿ, ಕೆಹೆಚ್‌ಬಿ ಬಡಾವಣೆ, ಕೆಂಚಲಗೂಡು.

ಹೆಚ್ಚಿನ ಸಂಖ್ಯೆಯಲ್ಲಿ ಸುಸಜ್ಜಿತ ಶೌಚಾಲಯ ನಿರ್ಮಿಸಿ

ಮಾನ್ಯರೆ,

ಸ್ವಚ್ಛ ಭಾರತ ಅಭಿಯಾನದ ಆಶಯದಂತೆ ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡಬೇಡಿ. ಶೌಚಾಲಯ ಬಳಸಿ ಸ್ವಚ್ಛತೆ ಕಾಪಾಡಿ ಎಂಬುದು ಸರ್ಕಾರದ ಅಂಬೋಣ. ಅದು ಸರಿ. ಆದರೆ, ಜನನಿಬಿಡ ಪ್ರದೇಶಗಳಲ್ಲಿ ಪ್ರಮುಖ ವೃತ್ತಗಳಲ್ಲಿ ಶೌಚಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಿದ್ದರೆ ಜನಗಳೇಕೆ ರಸ್ತೆಬದಿ, ಯಾವುದೋ ಖಾಲಿ ನಿವೇಶನ, ಯಾರದೋ



ಮನೆಯ ಕಾಂಪೌಂಡ್ ಮುಂದೆ, ಹೀಗೆ, ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದರು. ಇರುವ ಸಾರ್ವಜನಿಕ ಶೌಚಾಲಯಗಳು ಬೆರಳೆಣಿಕೆಯಷ್ಟು. ಅವುಗಳಲ್ಲಿ ಕೆಲವು ಶೌಚಾಲಯಗಳಿಗೆ ಸದಾ ಬೀಗ ಜಡಿದಿರುತ್ತಾರೆ. ಏಕೆ ಅನ್ನುವ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ! ಉಳಿದ ಶೌಚಾಲಯಗಳು ಸರಿಯಾದ ನಿರ್ವಹಣೆಯಿಲ್ಲದೆ ಸದಾ ದುರ್ನಾತ ಬೀರುತ್ತಿರುತ್ತವೆ. ಹೀಗಾಗಿ, ಅಲ್ಲಿಗೆ ಹೋದರೆ ಯಾವುದಾದರೊಂದು ಸೋಂಕು ಹರಡದೆ ಇರದು! ಇವೆಲ್ಲದರ ನಡುವೆ ವೈದ್ಯರು ಹೇಳುತ್ತಾರೆ ಆರೋಗ್ಯವಾಗಿರಲು ಪ್ರತಿದಿನ ನಾಲ್ಕೈದು ಲೀಟರ್ ನೀರು ಕುಡಿಯಿರಿ ಎಂದು. ಜೊತೆಗೆ, ಮೂತ್ರ ತಡೆಯಬಾರದು ತಡೆದರೆ ಕಿಡ್ನಿಯಲ್ಲಿ ಕಲ್ಲಾಗುತ್ತದೆ ಎಂದು. ವಿಷಯ ಹೀಗಿರುವಾಗ ಜನಗಳು ಸಹಜವಾಗಿಯೇ ಅವಸರವಾದಾಗ ಆ ಕಡೆ ಈ ಕಡೆ ಕಣ್ಣಾಯಿಸಿ ಎಲ್ಲೆಂದರಲ್ಲಿ ನಿಂತೋ, ಕುಳಿತೋ ತಮ್ಮ ತಮ್ಮ ನಿತ್ಯ ಕರ್ಮಗಳನ್ನು ಮುಗಿಸಿ ಹೋಗುತ್ತಾರೆ. ಆದ್ದರಿಂದ, ಸಾರ್ವಜನಿಕರದ್ದು ತಪ್ಪು ಎನ್ನುವ ಮೊದಲು ಸರ್ಕಾರಗಳು ಜನಸಂಖ್ಯೆಗನುಗುಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸುಸಜ್ಜಿತ ಶೌಚಾಲಯಗಳನ್ನು ನಿರ್ಮಿಸಿ ಉತ್ತಮ ನಿರ್ವಹಣೆ ಮಾಡಿದರೆ ಜನಗಳು ತಾವಾಗಿಯೇ ಶೌಚಾಲಯ ಬಳಸುತ್ತಾರೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಬೈದವನು ಬರಲು! ಬೈಸಿಕೊಂಡವನು ಕೊರಡು!!



> ಟೀಕೆಗಳಿರಬೇಕು ಬಾಳಿಗೆ, ಟೀಕೆಗಳಿರಬೇಕು ಬದುಕಿಗೆ, ಟೀಕೆಗಳಿಲ್ಲವಾದರೆ ಬದುಕು ಸೂತ್ರವಿಲ್ಲದ ಪಟವಾದೀತು, ಟೀಕೆಗಳು ಗುಟುಕು ನೀಡುವಂತಿರಬೇಕು–ಕುಟುಕುವಂತಿರಬಾರದು. ಗುಟುಕು ಅನಾರೋಗ್ಯದ ದೇಹಕ್ಕೆ ಔಷಧ–ಕುಟುಕು ಆರೋಗ್ಯ ಮನಸ್ಸುಗಳ ನಡುವೆ ತಂದಿಕ್ಕುವುದು ಭೇದ. ಇಂತಹ ಟೀಕಾಕಾರರ ಬಾಯಿ ಮುಚ್ಚಿಸಲು ಯಾರಿಂದಲೂ ಸಾಧ್ಯವಿಲ್ಲ. ಇವರ ಟೀಕೆಗಳಿಗೆ ನಿಖರವಾದ, ನಿರ್ದಿಷ್ಟವಾದ ಕಾರಣಗಳು ಏನೇ ಇಲ್ಲದಿದ್ದರೂ ಮಾತನಾಡಲೇಬೇಕು, ವ್ಯಕ್ತಿಯ ಮನಸ್ಸಿಗೆ ನೋವುಂಟು ಮಾಡಿ ವಿಚಿತ್ರವಾದ ಆನಂದವನ್ನು ಪಡೆಯಬೇಕೆಂಬ ತರಾತುರಿಯಲ್ಲಿ ಜೀವನ ನಡೆಸುತ್ತಾರೆ.

ಜನಮೆಚ್ಚಿ ನಡೆಯುವುದಕ್ಕಿಂತ ಮನ ಮೆಚ್ಚಿ ನಡೆದರೆ ಯಾವ ಟೀಕೆಗಳಿಗಾಗಲೀ, ಯಾರ ಅಂಕೆಯಲ್ಲಿಯಾಗಲೀ ಬದುಕಬೇಕಾದ ಅವಶ್ಯಕತೆ ಇಲ್ಲ. ಮತ್ತೊಬ್ಬರ ಕಣ್ಣಿನ ಸಿರಿವಂತಿಕೆಯ ತೃಪ್ತಿಗಾಗಿ ನಮ್ಮ ಪ್ರಯತ್ನಗಳಿದ್ದರೆ ನಮ್ಮ ಬದುಕು ಬಡವಾಗುತ್ತದೆ. ನಾವು ಹಾದು ಹೋಗುವ ಹಾದಿಯಲ್ಲಿ ಕೆಲವು ಮಂದಿ ಈ ಬಗೆಯವರು ಸಿಕ್ಕೇ ಸಿಗುತ್ತಾರೆ. ತಮ್ಮ ಮಿತಿಯನ್ನು ಅರಿಯಲಾರದೆ ಮತ್ತೊಬ್ಬರ ಅತಿಗಾಗಿ ಬದುಕಲು ತೊಡಗಿ ಬದುಕನ್ನು ಅತಂತ್ರಗೊಳಿಸಿಕೊಳ್ಳುವ, ಬದುಕನ್ನು ಸಪ್ಪೆ ಎನಿಸಿಕೊಳ್ಳುವ ಕೃತ್ಯಕ್ಕೆ ದಾರಿ ಮಾಡಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಕೆಲವು ಜನರಿಗೆ ಹೀಗೆ ಅನ್ನಿಸುತ್ತದೆ ! ನಮ್ಮ ಪಾಡಿಗೆ ನಾವು ಇದ್ದರೂ ಏನೇ ಮಾಡಿದರೂ, ಮಾಡದಿದ್ದರೂ ಒಂದಲ್ಲ ಒಂದು ವಿಷಯವನ್ನು ಮುಂದಿಟ್ಟುಕೊಂಡು ಮೊಸರಲ್ಲಿ ಕಲ್ಲು ಹುಡುಕುವ ಕೆಲಸವನ್ನು ಮಾಡುವರಲ್ಲ !! ಇಂತಹವರನ್ನು ಮೆಚ್ಚಿಸಲು ಹರಿಹರ ಬ್ರಹ್ಮಾದಿಗಳಿಂದಲೂ ಸಾಧ್ಯವಿಲ್ಲ ಎಂದೆನಿಸುತ್ತದೆ. ನಿರಂತರ ಟೀಕೆಗಳಿಂದ ಬೇಸತ್ತ ಗೆಳೆಯರೊಬ್ಬರು ಆಡಿದ ಮಾತುಗಳಿಗೆ ಕ್ಷಣ ಕಾಲ ಏನು ಉತ್ತರ ನೀಡಬೇಕೆಂದು ತಿಳಿಯದೇ ಮೌನವಾಗಿ ಕುಳಿತೆ. ಬಹಳ ವರ್ಷಗಳ ಹಿಂದೆ ಕೇಳಿದ್ದ ಸನ್ನಿವೇಶವೊಂದು ನೆನಪಾಯಿತು

ಸನ್ನಿವೇಶ : ದಂಪತಿಗಳಿಬ್ಬರು ನಡೆದುಕೊಂಡು ಬರುವಾಗ ತಮ್ಮೊಂದಿಗೆ ಕತ್ತೆಯೊಂದನ್ನು ನಡೆಸಿಕೊಂಡು ಬರುತ್ತಿದ್ದರಂತೆ. ಈ ದಂಪತಿಗಳನ್ನು ನೋಡಿ ದಾರಿಹೋಕನೊಬ್ಬ ಅಯ್ಯಾ ಕತ್ತೆ ಜೊತೆಗಿದ್ದರೂ ನಡೆದುಕೊಂಡು ಹೋಗುತ್ತ ಇರುವಿರಲ್ಲ, ಅದರ ಮೇಲೆ ಕುಳಿತು ಹೋಗಬಾರದೇನು ಎಂದು ಸಲಹೆ ನೀಡಿದನಂತೆ. ಸರಿ, ದಂಪತಿ ಕತ್ತೆ ಮೇಲೆ ಕುಳಿತು ಮುಂದೆ ಸಾಗುತ್ತಲಿದ್ದರು. ಸ್ವಲ್ಪ ದೂರದಲ್ಲಿ ಮತ್ತೊಬ್ಬ ಇವರನ್ನು ನೋಡಿ ಕೋಪ ಮಾಡಿಕೊಂಡು ಕತ್ತೆಯ ಮೇಲೆ ದಂಪತಿ ಕುಳಿತು ಹೋಗುತ್ತಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದಾಗ ಆ ದಂಪತಿ ಕತ್ತೆಯಿಂದ ಇಳಿದು ಕತ್ತೆಯನ್ನು ತಮ್ಮ ಹೆಗಲ ಮೇಲೆ ಹೊತ್ತು ಮುಂದೆ ಸಾಗಿದರಂತೆ.ಇನ್ನೂ ಸ್ವಲ್ಪ ದೂರ ಸಾಗುವಷ್ಟರಲ್ಲಿ ಇವರನ್ನು ನೋಡಿದ ಮಗದೊಬ್ಬ ಕತ್ತೆಯನ್ನು ಹೊತ್ತುಕೊಂಡು ಬರುತ್ತಿದ್ದ ಈ ದಂಪತಿಯನ್ನು ನೋಡಿ ನಕ್ಕು ಹೀಯ್ಯಾಳಿಸಿದ.

ಹೀಗೆ ಪ್ರತಿಯೊಂದರಲ್ಲಿಯೂ, ಪ್ರತಿಯೊಬ್ಬರಲ್ಲಿಯೂ ಕೊಂಕನ್ನು ಹುಡುಕಿ ಅವರಲ್ಲಿರುವ ಬಲಕ್ಕಿಂತ ಬಲಹೀನತೆಯನ್ನೇ ದೊಡ್ಡದಾಗಿ ಮಾಡಿ ಕಾಲ ಕಳೆಯುವ ಒಂದು ದೊಡ್ಡ ವರ್ಗವೇ ಸಮಾಜದಲ್ಲಿದೆ. ಇಂತಹವರ ನೋಡಿಯೇ ಏನೋ ನಮ್ಮ ಕನ್ನಡ ಸಾಹಿತ್ಯದ ಪ್ರೇಮಕವಿಗಳು ಎಂದು ಬಿರುದಾಂಕಿತರಾಗಿರುವ ಕೆ.ಎಸ್.ನರಸಿಂಹ ಸ್ವಾಮಿ ಅವರು ಇಕ್ಕಳ ಕವನವೊಂದನ್ನು ಬರೆದಿದ್ದಾರೆ.

ಚಳಿಗಾಲ ಬಂದಾಗ 'ಎಷ್ಟು ಚಳಿ? ಎಂದರು
ಬಂತಲ್ಲ ಬೇಸಿಗೆ, 'ಕೆಟ್ಟಬಿಸಿಲ್' ಎಂದರು
ಮಳೆ ಬಿತ್ತೊ, 'ಬಿಡದಲ್ಲ ಶನಿ!' ಎಂಬ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!

ಚಿಗುರ ಚಿನ್ನದ ನಡುವೆ ಹೂವ ಬಯಸುವರು
ಹೂಗಳ ಕಾಲದಲ್ಲಿ ಹಣ್ಣ ಹೊಗಳುವರು;
'ಹಣ್ಣಿನ ಗಾತ್ರ ಪೀಚು' ಎಂದಿವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ

ನಿಂತವರ ಕೇಳುವರು: ನೀನೇಕೆ ನಿಂತೆ ?
ಮಲಗಿದರೆ ಗೊಣಗುವರು: ನಿನಗಿಲ್ಲ ಚಿಂತೆ!
ಓಡಿದರೆ ಬೆನ್ನ ಹಿಂದೆಯೆ ಇವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ

ಓದಿದರೆ ಹೇಳುವರು: ಮತ್ತೊಮ್ಮೆ ಬರಿಯೊ
ಬರೆದಿಡಲು ಬೆದಕುವರು: ಬರವಣಿಗೆ ಸರಿಯೊ?
ಇವರ ಬಯಕೆಗಳೇನೊ! ಇವರದೇ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ !

ಮನುಷ್ಯ ಸಂಘಜೀವಿ. ಎಲ್ಲರೊಂದಿಗೆ ಬೆರೆತು ತಾನು ಸಹ ಸಂತೋಷದಿಂದ ಇರಬೇಕಾದದ್ದು ಅವನ ಕರ್ತವ್ಯ ಆದರೆ ಇತ್ತೀಚಿನ ದಿನಗಳಲ್ಲಿ ಒಬ್ಬರ ಮೇಲೆ ಮತ್ತೊಬ್ಬರು ಮಾತಿನ ಬಾಣಗಳನ್ನು ಶ್ರೀರಾಮ ಚಂದ್ರನ ಬಾಣದಂತೆಯೇ (ಗುರಿ ತಪ್ಪದ ಹಾಗೆ) ಪ್ರಹಾರ ಮಾಡುತ್ತಿರುತ್ತಾರೆ. ನನಗೆ ಅವರ ಮಾತಿಂದ ನೋವಾಗಿದೆ ನಾನು ಅವರಿಗೆ ನೋವನ್ನುಂಟು ಮಾಡುತ್ತೇನೆ. ಇದು ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿ ಕಾಣುತ್ತಿರುವ ಚಿತ್ರಣ. ನೀರಿನ ಮೇಲೆ ದೇಹ ಚೆಲ್ಲಿರುವ ಗುಳ್ಳೆ ಹಾಗೆ ಮನುಷ್ಯನ ಬದುಕು. ಇಂದು ಇದ್ದವರು ಇನ್ನೊಂದು ಗಳಿಗೆ, ಇನ್ನೊಂದು ಗಳಿಗೆ ಇದ್ದವರು ಮರುಗಳಿಗೆ, ಮರುಗಳಿಗೆ ಇದ್ದವರು ನಾಳೆ ಇರಲಾರರು. ಆಗಿದ್ದ ಮೇಲೆ ಒಬ್ಬರ ಮೇಲೆ ಮತ್ತೊಬ್ಬರು ಕತ್ತಿ ಮಸೆಯುತ್ತಾ ಹಗೆ ಸಾಧಿಸುತ್ತಾ, ಪ್ರತ್ಯಕ್ಷವಾಗಿ–ಪರೋಕ್ಷವಾಗಿ ನಿಂದಿಸುತ್ತಾ–ಹೀಯಾಳಿಸುತ್ತಾ ಮುಂದುವರೆಯುವುದರಲ್ಲಿ ಏನು ಖುಷಿ ಸಿಗುವುದೋ ನಾನರಿಯೆ !

ಹೌದು, ನಶ್ವರವಾದ ಈ ಬದುಕಿನ ಉದ್ದಕ್ಕೂ ನಾವು ನಮ್ಮತನವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಾ, ಶಾಶ್ವತವಾಗಿ ನೆಲೆಯೂರಿ ಬೇರುಗಳನ್ನು ಭದ್ರವಾಗಿ ಹರಡಿ ಇಲ್ಲಿಯೇ ನಿಂತಿರುತ್ತೇವೆ ಎಂಬ ಮತಿಭ್ರಮಣೆಯಲ್ಲಿ ನೆರೆ–ಹೊರೆಯವರೊಂದಿಗೆ–ಬಂಧುಗಳೊಂದಿಗೆ–ಸಹದ್ಯೋಗಿಗಳೊಂದಿಗೆ... ಹೀಗೆ ಬೇಕಾದವರೊಂದಿಗೆಲ್ಲಾ ಹೊಂದಾಣಿಕೆಯ ಕೊರತೆಯಿಂದಾಗಿ ಜಗಳವಾಡುತ್ತಾ ಮನಸ್ತಾಪ ಮಾಡಿಕೊಂಡು ದ್ವೇಷ, ಅಸೂಯೆ, ಮತ್ಸರದ ಭಾವನೆಗಳನ್ನೇ ಮೈಗೂಡಿಸಿಕೊಂಡು ಕಾಲ ಕಳೆಯುತ್ತೇವೆ. **'ಎಷ್ಟು ಕಷ್ಟವೋ ಹೊಂದಿಕೆ ಎಂಬುದು ನಾಲ್ಕು ದಿನದ ಈ ಬದುಕಿನಲ್ಲಿ'** ಎಂಬ ಕವಿವಾಣಿಯ ಮಾತು ಅಕ್ಷರಶಃ ಸತ್ಯವಾದುದು.

ಟೀಕೆಗಳಿರಬೇಕು ಬಾಳಿಗೆ, ಟೀಕೆಗಳಿರಬೇಕು ಬದುಕಿಗೆ, ಟೀಕೆಗಳಿಲ್ಲವಾದರೆ ಬದುಕು ಸೂತ್ರವಿಲ್ಲದ ಪಟವಾದೀತು, ಟೀಕೆಗಳು ಗುಟುಕು ನೀಡುವಂತಿರಬೇಕು–ಕುಟುಕುವಂತಿರಬಾರದು. ಗುಟುಕು ಅನಾರೋಗ್ಯದ ದೇಹಕ್ಕೆ ಔಷಧ–ಕುಟುಕು ಆರೋಗ್ಯ ಮನಸ್ಸುಗಳ ನಡುವೆ ತಂದಿಕ್ಕುವುದು ಭೇದ. ಇಂತಹ ಟೀಕಾಕಾರರ ಬಾಯಿ ಮುಚ್ಚಿಸಲು ಯಾರಿಂದಲೂ ಸಾಧ್ಯವಿಲ್ಲ. ಇವರ ಟೀಕೆಗಳಿಗೆ ನಿಖರವಾದ, ನಿರ್ದಿಷ್ಟವಾದ ಕಾರಣಗಳು ಏನೇ ಇಲ್ಲದಿದ್ದರೂ ಮಾತನಾಡಲೇಬೇಕು, ವ್ಯಕ್ತಿಯ ಮನಸ್ಸಿಗೆ ನೋವುಂಟು ಮಾಡಿ ವಿಚಿತ್ರವಾದ ಆನಂದವನ್ನು ಪಡೆಯಬೇಕೆಂಬ ತರಾತುರಿಯಲ್ಲಿ ಜೀವನ ನಡೆಸುತ್ತಾರೆ.

ಟೀಕೆಗಳಿಗೆ ನಿರ್ಲಕ್ಷ್ಯವೇ ಉತ್ತರ: ಟೀಕೆಗಳಿಗೆಲ್ಲ ತಕ್ಕ ಉತ್ತರ ಎಂದರೆ ಅವುಗಳನ್ನು ನಿರ್ಲಕ್ಷಿಸುವುದಾಗಿದೆ. ಅಹಂಕಾರಕ್ಕೆ ಉದಾಸೀನ ಮದ್ದು ಎಂಬ ಗಾದೆ ಮಾತಿನಂತೆ ಕಾರಣವಿಲ್ಲದೇ ಟೀಕಿಸುವವರ ಮಾತಿಗೆಲ್ಲ ತಲೆಕೆಡಿಸಿಕೊಳ್ಳದೇ ಅವರನ್ನು, ಅವರ ಮಾತುಗಳನ್ನು ನಿರ್ಲಕ್ಷಿಸಬೇಕು. ಟೀಕಾಕಾರರ ಮಾತಿಗೆಲ್ಲ ನಾವು ಪ್ರತಿಕ್ರಿಯಿಸುತ್ತಾ ಸರಿ – ತಪ್ಪುಗಳ ಚರ್ಚೆ ಮಾಡುತ್ತಾ ಸಮಯ ವ್ಯರ್ಥ ಮಾಡುವ ಬದಲು ಅವುಗಳನ್ನು ಕಡೆಗಣಿಸಿ ಮುಂದಕ್ಕೆ ಸಾಗಬೇಕು. ಟೀಕಾಕಾರರು ನಮ್ಮ ಚಾರಿತ್ರ್ಯ ವಧೆ ಮಾಡಿದರೂ, ಇಲ್ಲಸಲ್ಲದ ಸುಳ್ಳುಗಳನ್ನಾಡಿದರೂ ಸುಮ್ಮನಿರಬೇಕೆ ಎಂಬ ಪ್ರಶ್ನೆ ಉದ್ಭವವಾದರೂ ಮಾಡುವ ಕೆಲಸದಲ್ಲಿ ಶ್ರದ್ಧೆಯನ್ನಿಟ್ಟುಕೊಂಡವರು ಈ ತರಹದ ಸಣ್ಣಪುಟ್ಟ ಸಂಗತಿಗಳನ್ನೇ ದೊಡ್ಡದನ್ನಾಗಿ ಮಾಡಿಕೊಂಡು ಬೆಂಕಿ ಬಿದ್ದಲ್ಲಿ ಮೈ ಕಾಯಿಸಿಕೊಳ್ಳುವ ಮನೋಭಾವ ಉಳ್ಳ ಜನರನ್ನು ದೂರವಿಟ್ಟು ಮುಂದೆ ಸಾಗಲೇಬೇಕು. ಇದನ್ನು ಹೇಳುವಾಗ ಹಿಂದೊಮ್ಮೆ ಓದಿದ್ದ ಕಥೆಯೊಂದು ನೆನಪಿಗೆ ಬರುತ್ತದೆ.

ಒಮ್ಮೆ ಊರಿನ ಕಿರಿದಾದ ಹಾದಿಯಲ್ಲಿ ಹಂದಿಯೊಂದು ಆನೆಯ ಎದುರಾಗಿ ಬರುತ್ತಿತ್ತು. ಮೈಯೆಲ್ಲ ಕೆಸರಿನೊಂದಿಗೆ ಕೊಳಕಾಗಿದ್ದ ಆ ಹಂದಿ ಆನೆಯನ್ನು ಕುರಿತು– ನನಗೆ ಮೊದಲು ಹೋಗಲು ದಾರಿ ಬಿಡು ಇಲ್ಲದಿದ್ದರೆ ನಿನ್ನನ್ನು ಉಳಿಸುವುದಿಲ್ಲ ಎಂದು ಹೇಳಿತು. ಆನೆ ಮರು ಮಾತನಾಡದೇ ಹಂದಿ ಮೊದಲು ಹೋಗಲು ದಾರಿ ಮಾಡಿಕೊಟ್ಟಿತು. ತನ್ನ ಮಾತಿನಿಂದ ಆನೆಯಂತಹ ದೈತ್ಯ ಪ್ರಾಣಿಯೇ ಹೆದರಿಕೊಂಡು ನಾನು ಮೊದಲು ಹೋಗಲು ದಾರಿ ಮಾಡಿಕೊಟ್ಟದ್ದಕ್ಕೆ ಹಂದಿ ಅಹಂನಿಂದಲೇ ನರಿಯೊಂದಿಗೆ ಹೇಳಿಕೊಳ್ಳುತ್ತಾ ಬಡಾಯಿ ಕೊಚ್ಚಿಕೊಳ್ಳುತ್ತಿತ್ತು. ಹಂದಿಯ ಮಾತಿನಿಂದ ಆಶ್ಚರ್ಯಕ್ಕೊಳಗಾದ ನರಿ ಇದಕ್ಕೆ ಕಾರಣವೇನಿರಬಹುದೆಂಬ ಕುತೂಹಲದಿಂದ ಆನೆಯನ್ನೇ ಪ್ರಶ್ನಿಸಿತು. ನಿನ್ನ (ಆನೆಯ) ಬಲದ ಮುಂದೆ ಹಂದಿ ತೃಣ ಮಾತ್ರವೂ ಶಕ್ತಿಶಾಲಿಯಾದುದಲ್ಲ, ಆದರೆ ನೀನು ಅದರ ಮಾತು ಕೇಳಿ ದಾರಿ ಬಿಟ್ಟುಕೊಟ್ಟದ್ದು ಎಷ್ಟರ ಮಟ್ಟಿಗೆ ಸರಿ ಎಂದು ಕೇಳಿದಾಗ, ಆನೆ ನಸುನಗುತ್ತಾ ಉತ್ತರಿಸಿತು. ನಾನು ಒಂದು ವೇಳೆ ನನ್ನ ಬಲವನ್ನು ಪ್ರಯೋಗಿಸಿದ್ದರೆ ಅದು ಇನ್ನಿಲ್ಲದಂತೆ ಮಾಯವಾಗುತ್ತಲಿತ್ತು. ಆದರೆ ನನ್ನತನ ಹಾಳಾಗುತ್ತಿತ್ತು, ಕೊಳಕು ತುಂಬಿಕೊಂಡು ಬರುತ್ತಿದ್ದ ಹಂದಿಯ ಜೊತೆ ನಾನು ಸಂಘರ್ಷಕ್ಕೆ ನಿಂತಿದ್ದರೆ ಅದರ ಕೊಳಕು ನನಗೆ ಮೆತ್ತಿಕೊಳ್ಳುತ್ತಿತ್ತು. ಅದು ಅಲ್ಲದೇ ಅದು ಈ ರೀತಿ ಪ್ರಹಾರ ಮಾಡುತ್ತಿರುವುದರಿಂದ ನನಗೇನು ನಷ್ಟವಿಲ್ಲ, ವಿನಾ ಕಾರಣ ಕೆಸರನ್ನು ಮೈಗೆಲ್ಲಾ ಮೆತ್ತಿಕೊಳ್ಳುವ ಬದಲು ದೂರವಿರುವುದೇ ವಾಸಿ ಎಂದು ತನ್ನ ಘನತೆಗೆ ತಕ್ಕ ಕಾರಣವನ್ನೇ ಕೊಟ್ಟಿತು.

ಈ ಕಥೆಯಲ್ಲಿ ಅತಿಶಯೋಕ್ತಿ ಇದೆ ಎನಿಸಿದರೂ ಅದರ ತಾತ್ಪರ್ಯ ಪ್ರಮುಖವಾದುದು – ಯಾರೋ ಏನೋ ನಮ್ಮ ಬಗ್ಗೆ ಇಲ್ಲಸಲ್ಲದ್ದನ್ನು ಹೇಳಿ ಸಮಯ ದೂಡುತ್ತಿದ್ದಾರೆ ಎಂದ ಮಾತ್ರಕ್ಕೆ ಅದರ ಬಗ್ಗೆ ತಲೆಕೆಡಿಸಿಕೊಂಡು ಕೂರುವ ಅಗತ್ಯವಿಲ್ಲ. ಅನವಶ್ಯಕ ಟೀಕೆಗಳಿಗೆ ತಲೆಕೆಡಿಸಿಕೊಂಡರೆ ನಮ್ಮತನ ಹಾಳಾಗುತ್ತದೆ. ಶಕ್ತಿ, ಸಾಮರ್ಥ್ಯವಿದೆ ಎಂದು ಅದನ್ನು ಎಲ್ಲರ ಮುಂದೆ ತೋರ್ಪಡಿಸುವ ಅಗತ್ಯವಿಲ್ಲ ಎಂಬ ಸಾರ್ವಕಾಲಿಕ ಸತ್ಯವನ್ನು ಈ ಕಥೆ ಸಾರುತ್ತದೆ.

ಕಿವಿಮಾತು

- ಟೀಕಿಸುವವರೆಲ್ಲ ನಮ್ಮನ್ನು ನೋಡಿಕೊಳ್ಳುವುದಿಲ್ಲ. ಅವರಿಂದ ನಮಗೇನು ಆಗಬೇಕಿಲ್ಲ. ಹಾಗಾಗಿ ಅವರ ಮಾತಿಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ.
- ನಮಗೆ ಕೊಡಬೇಕಾದ ಪ್ರಮಾಣಪತ್ರಗಳನ್ನೆಲ್ಲ ಶಾಲೆ–ಕಾಲೇಜಿನವರೇ ಕೊಟ್ಟಿರುವುದರಿಂದ ಟೀಕಾಕಾರರಿಂದ ಸಿಗುವ ಪ್ರಮಾಣ ಪತ್ರಗಳಿಗೆ ಯಾವುದೇ ಮನ್ನಣೆ ಇಲ್ಲದ ಕಾರಣ ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಿಲ್ಲ
- ನಮ್ಮ ಬದುಕು,ನಾವು ಬಂದ ರೀತಿ ನಮಗೆ ತಿಳಿದಿರುವಷ್ಟು ಟೀಕಾಕಾರರಿಗೆ ತಿಳಿದಿರಲಾರದು. ಕೆಲವೊಮ್ಮೆ ತಿಳಿದುಕೊಂಡವರು ಸಹ ಟೀಕಿಸುವರು. ಅವುಗಳಿಗೆಲ್ಲ ಮಾನ್ಯತೆ ನೀಡಬೇಕಿಲ್ಲ
- ನಮ್ಮ ಬದುಕು ನಮಗಾಗಿ ಇರುವುದು, ತೋರ್ಪಡಿಕೆಗಾಗಿ, ಮೆಚ್ಚಿಸುವುದಕ್ಕಾಗಿ ಬದುಕುವ ಅಗತ್ಯ ನಮಗಿಲ್ಲ. ಹಾಗಾಗಿ ಟೀಕಾಕಾರರ ಮಾತಿಗೆ ಬೇಸರ ವ್ಯಕ್ತಪಡಿಸಬೇಕಿಲ್ಲ.
- ಯಾರೂ ಏನೇ ಟೀಕೆ ಮಾಡಿದರೂ ನಮ್ಮತನವನ್ನು ಹಾಳುಮಾಡಿಕೊಳ್ಳಬಾರದು, ಅವರಂತೆ ನಾವಾಗಬಾರದು. ನಮ್ಮಂತೆ ನಾವು ಬದುಕುವುದನ್ನು ಕಲಿತರೆ ಸುಂದರವಾದ ಜೀವನ ನಮ್ಮದಾಗುತ್ತದೆ.

ಟೀಕಿಸುವವರು ನಾವು ಹೇಗೆ ಇದ್ದರೂ ಟೀಕಿಸುತ್ತಲೇ ಇರುತ್ತಾರೆ. ಅವರಿಗೆ ವ್ಯಕ್ತಿ ಮುಖ್ಯವಾಗಿರುವುದಿಲ್ಲ, ಮಹಾನ್ ವ್ಯಕ್ತಿಗಳನ್ನೇ ಬಿಡದೇ 21ನೇ ಶತಮಾನದಲ್ಲಿ ನಿಂತು ಗತಕಾಲದಲ್ಲಿ ತಾವು ನೋಡಿರದ ವಿಷಯಗಳ ಬಗ್ಗೆ, ವಿಚಾರಗಳ ಬಗ್ಗೆ ಮಾತನಾಡುತ್ತಾ, ಮಹಾನ್ ವ್ಯಕ್ತಿಗಳ ಬಗ್ಗೆಯೇ ಟೀಕೆ ಮಾಡುತ್ತಾರೆ ಎಂದರೆ ನಮ್ಮನ್ನು – ನಿಮ್ಮನ್ನು ಬಿಡುತ್ತಾರೆಯೇ? ಇಂತಹವರ ಮಾತುಗಳಿಗೆಲ್ಲ ಸೊಪ್ಪು ಹಾಕದೇ ನಮ್ಮ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡಿಕೊಂಡು ಮುಂದೆ ಸಾಗಲೇಬೇಕು.

ಈ ಮೇಲಿನ ಎಲ್ಲಾ ವಿಚಾರಗಳಿಂದ ನಮ್ಮ ಅರಿವಿಗೆ ಎರಗುವ ಸಂಗತಿಯೆಂದರೆ ಕೊಂಕು ಮಾತುಗಳಿಗೆ ಮುಚ್ಚಿರಲಿ ಕಿವಿಗಳು, ಕೆಟ್ಟ ಮಾತುಗಳ ಪ್ರತ್ಯುತ್ತರಕ್ಕಾಗಿ ಸ್ಪಂದಿಸದೆ ಸತ್ತುಹೋಗಲಿ ನಾಲಿಗೆ, ಪರಚುವುದೇಕೆ ಕೈ ಮೊಂಡಾಗಲಿ, ಒದೆಯುವುದೇಕೆ ಕಾಲು ಸೋತು ಹೋಗಲಿ, ನಿಂದಕರ ಎದುರು ದೇಹವು ವಿನಮ್ರವಾಗಿ ಬಾಗಲಿ ಯಾವ ನಷ್ಟವಿಲ್ಲದೆ ಬದುಕಿನ ಬಲು ದೂರ ಯಾನ ಸಾಗಿ ಹೋಗುತ್ತದೆ ಇದು ನಿಶ್ಚಿತ–ಟೀಕೆಗಳು ಅನಿಶ್ಚಿತ..

ಮನದೊಂದಿಗೆ ಮಾತುಕತೆ

ಮರುಗದಿರು ಮನವೇ
ಇಲ್ಲಿ ಯಾರನ್ನು ಮೆಚ್ಚಿಸಿ ಬಾಳಲಾಗದು I
ಕೊರಗದಿರು ತನುವೆ
ಇಲ್ಲಿ ಎಲ್ಲರೂ ಅವರವರ ಭಾವ ಭಕುತಿಗೆ ತಕ್ಕಂತೆ ನಡೆವರುI
ಎಲ್ಲರ ಮನವ ಸಂತಸಗೊಳಿಸುವೆನೆಂಬ ಭ್ರಮೆಯ ಕಳಚಿಡು
ಸಕಲರೂ ಒಪ್ಪುವಂತೆ ಬಾಳುವೆನೆಂಬ ಮರೀಚಿಕೆಯ ಬೆನ್ನತ್ತದಿರುI
ನಿನಗಾಗಿ ಬಾಳು
ನಿನ್ನಿಚ್ಛೆಯನ್ನರಿತು ಬದುಕು, ಜೀವಿಸು ಈ ಕ್ಷಣದ ವಾಸ್ತವದ ನೆರಳಲ್ಲಿI
ತಪ್ಪು ಒಪ್ಪುಗಳ ಅಂತರಾತ್ಮದಿ ಕೇಳಿ
ಸರಿ ಎನಿಸುವುದ ಮಾಡುತ್ತಲಿ, ಸಾಗು ನೀ ಮುಂದೆ
ಜೀವನದ ಪಥದಲಿ ಮುನ್ನುಗ್ಗುತ್ತಿರು ಯಾರ ದವಡೆಗೂ ಸಿಗದೆ, ಅದೋ ಅಲ್ಲಿ ದಡವಿಹುದುI

ಮೈಸೂರಲ್ಲಿ ಶ್ರೀಯೋಗಿ ನಾರೇಯಣ ಯತೀಂದ್ರರ ಜಯಂತಿ ಆಚರಣೆ

ಶ್ರೀಯುತರು ನುಡಿದ ಭವಿಷ್ಯ ನಿಖರ, ನಿಶ್ಚಿತವಾಗಿದ್ದವು: ಗುಬ್ಬಿಗೂಡು

ಮೈಸೂರು, ಮಾ.17(ಎಂಟಿವೈ)– ಶ್ರೀ ಯೋಗಿನಾರೇಯಣ ಯತೀಂದ್ರರು (ಕೈವಾರ ತಾತಯ್ಯ) ಭೂಮಿ ಮೇಲಿನ ಸಕಲ ಜೀವರಾಶಿಯನ್ನು ಪ್ರೀತಿಸುತ್ತಿದ್ದ ಮಹಾನ್ ಗುಣವಂತರಾಗಿದ್ದರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯೋಗಿ ನಾರೇಯಣ ಯತೀಂದ್ರರು ಮನುಷ್ಯರು ಮಾತ್ರವಲ್ಲದೆ, ಸಕಲ ಜೀವ ರಾಶಿಯನ್ನು ಪ್ರೀತಿಸುತ್ತಿದ್ದರು. ಎಲ್ಲಾ ಸಮುದಾಯದ ಜನರಿಗೆ ಒಳಿತು ಬಯಸುತ್ತಿದ್ದರು. ಆ ಕಾರಣದಿಂದಲೇ ಯತೀಂದ್ರರು ಸರ್ವಕಾಲಿಕರಾಗಿದ್ದಾರೆ ಎಂದರು.

ರಾಜ್ಯ ಸರ್ಕಾರ ಕೈವಾರ ಪ್ರದೇಶವನ್ನು ಬಯೋಲಾಜಿಕಲ್ ರಿಸರ್ವ್ ಫಾರೆಸ್ಟ್ ಎಂದು ಘೋಷಿಸಿದೆ. ಇದರಿಂದ ಅಲ್ಲಿರುವ ಜಿಂಕೆ ಸೇರಿದಂತೆ ವನ್ಯಜೀವಿ, ಪಕ್ಷಿ ಸಂಕುಲದ ಸಂರಕ್ಷಣೆಗೆ ಆದ್ಯತೆ ನೀಡಿದಂತಾಗಿದೆ. ಇದು ಕೈವಾರ ತಾತಯ್ಯನವರ ಜೀವವೈವಿಧ್ಯದ ಮೇಲಿನ ಪ್ರೀತಿ ಸಾಕಾರಗೊಂಡಂತಾಗಿದೆ ಎಂದರು.



ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಶ್ರೀ ಯೋಗಿ ನಾರೇಯಣ ಯತೀಂದ್ರರ ಜಯಂತಿ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಯೋಗಿ ನಾರೇಯಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಅಂಕಣಕಾರ ಗುಬ್ಬಿಗೂಡು ರಮೇಶ್ ಮುಖ್ಯ ಭಾಷಣ ಮಾಡಿ, ಕೈವಾರ ತಾತಯ್ಯ ಯೋಗಿ ನಾರೇಯಣ ಯತೀಂದ್ರರು ತನ್ನ ಕೀರ್ತನೆ ಹಾಗೂ ತತ್ವ ಪದಗಳ ಮೂಲಕ ಮನೆ ಮಾತಾಗಿದ್ದರು. ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಸಾವಿರಾರು ಕೀರ್ತನೆಗಳನ್ನು ರಚಿಸಿ, ಸಾಮಾನ್ಯ ಜನರಿಗೂ ಅರ್ಥ ಆಗುವಂತೆ ವಚನ ಸಾಹಿತ್ಯವನ್ನು ಪರಿಚಯಿಸಿದರು. ಶ್ರೀಯುತರು ಕಾಲಜ್ಞಾನವನ್ನು ಹೇಳುವ ಮೂಲಕ ಎಲ್ಲರನ್ನು ಅಚ್ಚರಿಪಡಿಸಿದ್ದರು ಎಂದು ತಿಳಿಸಿದರು.

ಅವರ ಭವಿಷ್ಯಗಳಲ್ಲಿ ಬಹುತೇಕ ಸತ್ಯವಾಗಿವೆ. ಆಹಾರವಿದ್ದರು ಕೊಳ್ಳಲು ಆಗುವುದಿಲ್ಲ. ದುಬಾರಿ ಜಗತ್ತಿನಲ್ಲಿ ವಿಚಿತ್ರ ಬರಗಾಲ, ಪತಿ–ಪತ್ನಿ ಸಂಬಂಧಕ್ಕೆ ಧಕ್ಕೆ ಸೇರಿದಂತೆ ಸಮಾಜದ ಬಗ್ಗೆ ಅನೇಕ ಪ್ರಚಲಿತ ವಿಷಯಗಳ ಬಗ್ಗೆ ತಮ್ಮ ಕಾಲದಲ್ಲಿಯೇ ಉಲ್ಲೇಖಿಸಿದ್ದು, ಅಚ್ಚರಿ ಹಾಗೂ ಗಮನಾರ್ಹ. ಮೊದಲೇ ವರಕವಿಗಳಾಗಿದ್ದ ಶ್ರೀ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಅವರು ಬ್ರಹ್ಮಜ್ಞಾನಿಗಳಾದರು. ಅವರ ಜೀವನದಲ್ಲಿ ಘಟಿಸಿದ ಪವಾಡಗಳು ಅನೇಕ. ತ್ರಿಕಾಲ ಜ್ಞಾನಿಗಳಾಗಿದ್ದ ಅವರು ಇಚ್ಛಾಮರಣಿಯಾಗಿದ್ದರು ಮತ್ತು ಪರಾಕಾಯ ಪ್ರವೇಶದ ಸಿದ್ಧಿಯನ್ನು ಪಡೆದಿದ್ದರು ಎಂದು ಹೇಳಿದರು.

ಮೆರವಣಿಗೆ: ಇದಕ್ಕೂ ಮುನ್ನ ಯೋಗಿ ನಾರೇಯಣ ಯತಿಂದ್ರರ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಹೊರಟ ಮೆರವಣಿಗೆ ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆಯಲ್ಲಿ ಸಾಗಿ ಕಲಾಮಂದಿರ ತಲುಪಿತು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಗೊಂಬೆ ಕುಣಿತ, ಕೈವಾರ ತಾತಯ್ಯ ವೇಷಧಾರಿಗಳು ಸೇರಿದಂತೆ ಇನ್ನಿತರರು ಸಾಗಿ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಸಮುದಾಯದ ಮುಖಂಡರಾದ ಮೀನಾ ತೂಗುದೀಪ್, ಆರ್.ಮಂಜುನಾಥ್, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಕೃಷ್ಣಪ್ಪ ಹಾಗೂ ಸಮುದಾಯದ ಎಲ್ಲಾ ಮುಖಂಡರು ಉಪಸ್ಥಿತರಿದ್ದರು.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರಲ್ಲಿ ನಳನಳಿಸುವ ಪುಷ್ಪರಾಶಿ ನೋಟ

ವೃಕ್ಷದ ಮೈದುಂಬಿದ ಹೂ-ರಸ್ತೆಯೆಲ್ಲಾ ಪುಷ್ಪಮಯ ; ಇದು ಚಿನ್ನದ ಮರದ ಸೊಗಸು!



ಚಾಮರಾಜಪುರಂ ರಸ್ತೆಯೊಂದರಲ್ಲಿ ಹಳದಿ ಟ್ರಂಪೆಟ್ ಮರದಿಂದ ಬಿದ್ದಿರುವ ಹೂ ನೋಡಿ ಸಂಭ್ರಮಿಸುತ್ತಿರುವ ಚಿಣ್ಣರು



ಮೈಸೂರಿನ ವಿಜಯನಗರದ ರಸ್ತೆಗಳಲ್ಲಿ ಹೂವಿನಿಂದ ಕಂಗೊಳಿಸುತ್ತಿರುವ ಪಿಂಕ್ ಟ್ರಂಪೆಟ್ ಟ್ರೀ. ಚಿತ್ರ: ಲಕ್ಷ್ಮೀ ನಾರಾಯಣ ಯಾದವ್

ಮೈಸೂರು,ಮಾ.17(ಪಿಎಂ)– ಮೈಸೂರು ಪ್ರಾಕೃತಿಕ ಸೌಂದರ್ಯಕ್ಕೂ ಹೆಸರಾದ ನಗರ. ಇಲ್ಲೀಗ ಅನೇಕ ರಸ್ತೆಗಳಲ್ಲಿರುವ ಮರಗಳಲ್ಲಿ ನಳನಳಿಸುವ ಪುಷ್ಪರಾಶಿ ನೋಟ ನೋಡುವುದೇ ಒಂದು ಸೊಗಸು.

ಹೌದು, ವಿವಿಧ ಜಾತಿಗೆ ಸೇರಿದ ಮರಗಳಲ್ಲೀಗ ಪುಷ್ಪಕಾಂತಿ ಸೂಸುತ್ತಿದೆ. ಈ ಪೈಕಿ ಟಬೆಬುಯಾ ಅರ್ಜೆಂಟಿಯಾ ವರ್ಗಕ್ಕೆ ಸೇರಿದ ಮರಗಳು ಮೈಸೂರಿನ ರಸ್ತೆಬದಿಗಳಲ್ಲಿ ಸಾಕಷ್ಟು ಇದ್ದು, ಅವುಗಳಲ್ಲೀಗ ಕಾಂಡಗಳೇ ಕಾಣದಷ್ಟು ಹೂ ಅರಳಿ ಆಕರ್ಷಿಸುತ್ತಿವೆ

ಮೈಸೂರಿನ ಬೋಗಾದಿ ಮುಖ್ಯ ರಸ್ತೆಯ ವಿಶ್ವಮಾನವ ಜೋಡಿ ರಸ್ತೆ ಜಂಕ್ಷನ್ ಸೇರಿದಂತೆ ಅನೇಕ ರಸ್ತೆಗಳಲ್ಲಿ ಈ ವರ್ಗಕ್ಕೆ ಸೇರಿದ ಹಳದಿ ಹೂ ಬಿಡುವ ಮರಗಳು, ನೆಲಕ್ಕೂ ಹೂ ಹಾಸಿ, ಮೈಗೂ ಹೊಂದಿಕೊಂಡು ಕಣ್ಮನ ಸೆಳೆಯುತ್ತಿವೆ. ನೇರಳೆ, ಕೆಂಪು, ಗುಲಾಬಿ ಬಣ್ಣ ಸೇರಿದಂತೆ ವಿವಿಧ ವರ್ಣದ ಹೂಗಳನ್ನು ಬಿಡುವ ಮರಗಳ ಪೈಕಿ ಮೈಸೂರಿನಲ್ಲಿ ಹಳದಿ ಹೂ (ಚಿನ್ನದ ಮರ) ಬಿಡುವ ಮರಗಳು ಪುಷ್ಪ ಲೋಕವನ್ನೇ ಹೊತ್ತು ನಿಂತು ನೋಡುಗರನ್ನು ಆಕರ್ಷಿಸುತ್ತಿವೆ ಚಳಿಗಾಲ ಮತ್ತು ಬೇಸಿಗೆಯ ನಡುವಿನ ಮಧ್ಯಂತರ ಹಂತವಾದ 'ವಸಂತ ಋತು' ಮರಗಳಿಗೆ ಹೊಸ ಜೀವನದ ಕಾಲಘಟ್ಟ.

ಎಲೆಯುದಿರಿಸುವ ಅವು, ಬಹುತೇಕ ಎಲೆಗಳೇ ಇಲ್ಲದಂತೆ ಕೊಂಬೆಗಳಲ್ಲಿ ಹೂಗಳು ಆವರಿಸಿಕೊಳ್ಳುವುದು ವಿಶೇಷ. ಆ ಮೂಲಕ ಅದ್ಭುತವಾಗಿ ಹೂ ಮೈತುಂಬಿ ನೋಡುಗರ ಕಣ್ಮನ ಸೆಳೆಯುತ್ತವೆ. ಚಿನ್ನದ ಮರ ಅಂತಹ ಒಂದು ಮರಗಳ ಪೈಕಿ ಒಂದಾಗಿದೆ ಋತುವಿನ ಆರಂಭದಲ್ಲೇ ಹೂ ಬಿಟ್ಟು ನೋಡಲು ಅತ್ಯಂತ ಆನಂದಮಯ ಉಂಟು ಮಾಡುತ್ತದೆ ಇದು.

ಈ ಮರವು ದಕ್ಷಿಣ ಅಮೆರಿಕಾ ಮೂಲಕ್ಕೆ ಸೇರಿದ್ದಾಗಿದೆ. ಹಳದಿ ಟಬೆಬುಯಾ, ಚಿನ್ನದ ಗಂಟೆ, ಬೆಳ್ಳಿ ತುತ್ತೂರಿ ಮರ, ಹಳದಿ ಟ್ರಂಪೆಟ್ ಮರ ಎಂದೂ ಕರೆಯಲ್ಪಡುವ ಇದರ ವೈಜ್ಞಾನಿಕ ಹೆಸರು ಟಬೆಬುಯಾ ಔರಿಯಾ ಅಥವಾ ಟ್ಯಾಬೆಬುಯಾ ಅರ್ಜೆಂಟಿಯಾ. ಇದು ಬಿಗ್ನೋನಿಯೇಸಿ ಕುಟುಂಬಕ್ಕೆ ಸೇರಿದ ಸಸ್ಯವಾಗಿದೆ. ಈ ಮರ ಸಣ್ಣ ಅಥವಾ ಮಧ್ಯಮ ಗಾತ್ರದಲ್ಲಿ ಇರಲಿದ್ದು, ಬಾಗಿದ ಕಾಂಡಗಳು ಹಾಗೂ ಬಿರುಕು ಬಿಟ್ಟ ತೊಗಟೆಯನ್ನು ಹೊಂದಿರುವ ಮೃದು ಮರ ಇದು. ಸಾಮಾನ್ಯವಾಗಿ 15ರಿಂದ 25 ಅಡಿ ಎತ್ತರಕ್ಕೆ ಇವು ಬೆಳೆಯುತ್ತವೆ. ಜೊತೆಗೆ ಪಿಂಕ್ ಟ್ರಂಪೆಟ್ ಟ್ರೀ ಎಂಬ ಮರವೂ ಸಹ ಮೈಸೂರಿನ ವಿಜಯನಗರ ಸೇರಿದಂತೆ ವಿವಿಧೆಡೆ ಹೂಗಳ ರಾಶಿ ಹೊದ್ದು ಕೊಂಡು ನೋಡುಗರನ್ನು ಸೆಳೆಯುತ್ತಿದೆ. ಇದನ್ನು ಲ್ಯಾವೆಂಡರ್ ಟ್ರಂಪೆಟ್ ಟ್ರೀ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ.

ವಿದ್ಯುತ್ ವ್ಯತ್ಯಯ

ಮೈಸೂರು, ಮಾ. 17– ತುರ್ತು ನಿರ್ವಹಣಾ ಕೆಲಸದ ನಿಮಿತ್ತ ನಾಳೆ (ಮಂಗಳವಾರ) ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಕುವೆಂಪುನಗರದ ಕೆಹೆಚ್‌ಬಿ 1, 2, 3, 4ನೇ ಹಂತ, ಅರವಿಂದನಗರ, ಕೆಎಸ್‌ಆರ್‌ಟಿಸಿ ಡಿಪೋ ಸುತ್ತಮುತ್ತಲಿನ ಪ್ರದೇಶ, ಕಾಲಭೈರವೇಶ್ವರ ಛತ್ರ ಸುತ್ತಮುತ್ತಲಿನ ಪ್ರದೇಶ, ಐಶ್ವರ್ಯ ಲೇಔಟ್, ಕುವೆಂಪುನಗರ ಎನ್ ಮತ್ತು ಎಂ ಬ್ಲಾಕ್, ಆರ್‌ಎಂಪಿ ಕ್ವಾಟ್ರಸ್ ಹಾಗೂ ಸುತ್ತಮುತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಕಳೆದು ಹೋಗಿದ್ದ ಮೊಬೈಲ್‌ಗಳ ವಾರಸುದಾರರಿಗೆ ತಲುಪಿಸಿದ ಪೊಲೀಸರು



ಮೈಸೂರು, ಮಾ.17(ಎಂಕೆ)– ಕಳೆದುಹೋಗಿದ್ದ 37 ಮೊಬೈಲ್‌ಗಳನ್ನು ದೇವರಾಜ ಪೊಲೀಸರು ಸೋಮವಾರ ವಾರಸುದಾರರಿಗೆ ಮರಳಿಸಿದ್ದಾರೆ.

ಠಾಣೆ ವ್ಯಾಪ್ತಿಯಲ್ಲಿ ಮೊಬೈಲ್ ಕಳೆದುಕೊಂಡವರು ದಾಖಲಿಸಿದ್ದ ಪ್ರಕರಣಗಳ ಸಂಬಂಧ CEIR Portal ಮೂಲಕ ಮೊಬೈಲ್ ಫೋನ್‌ಗಳನ್ನು ಪತ್ತೆ ಮಾಡಿರುವ ಪೊಲೀಸರು, ವಾರಸುದಾರರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕೆ.ಆರ್.ರಘು, ಪಿಎಸ್‌ಐಗಳಾದ ಜಯಕೀರ್ತಿ, ಪ್ರಭು, ಅಪರಾಧ ವಿಭಾಗದ ಸಿಬ್ಬಂದಿಗಳಾದ ಮಂಜುನಾಥ್, ಸುನೀಲ್, ಮಧುಕೇಶ್ ಮಹೇಶ್, ಶಶಿಕಿರಣ್ ಉಪಸ್ಥಿತರಿದ್ದರು.

ಅಪ್ಪು ಜನ್ಮದಿನ...



ಮೈಸೂರಿನ ಇಟ್ಟಿಗೆಗೂಡು ಜ್ವಾಲಾಮುಖಿ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಪುನೀತ್ ರಾಜ್‌ಕುಮಾರ್ ಅವರ 50ನೇ ವರ್ಷದ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಅನ್ನ ಸಂತರ್ಪಣೆ...



ದಿವಂಗತ ಪುನೀತ್ ರಾಜ್‌ಕುಮಾರ್ ಅವರ 50ನೇ ಹುಟ್ಟು ಹಬ್ಬವನ್ನು ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಅದ್ದೂರಿಯಾಗಿ ಆಚರಿಸಿ, ಅನ್ನ ಸಂತರ್ಪಣೆ ನಡೆಸಲಾಯಿತು. ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್, ಖಜಾಂಚಿ ನಂಜುಂಡ, ಪ್ರಧಾನ ಕಾರ್ಯದರ್ಶಿ ಕುಮಾರ್, ಅಜಯ್ ಶೆಟ್ಟಿ, ಲೋಕೇಶ್, ಮನು, ಮೋಹನ್, ಚಂದ್ರು, ಲೋಕೇಶ್ ಮತ್ತಿತರರು ಪಾಲ್ಗೊಂಡಿದ್ದರು.

ಅಪ್ಪಾಜಪ್ಪ ನಿಧನ



ಹೆಚ್.ಡಿ.ಕೋಟೆ, ಮಾ.17– ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ ಗ್ರಾಮದ ನಿವಾಸಿ ಹಾಗೂ ಸದ್ಗುರು ಮಹಾದೇವ ತಾತಾ ದೇವಸ್ಥಾನ ಟ್ರಸ್ಟ್‌ನ ಮಾಜಿ ಖಜಾಂಚಿಗಳಾಗಿದ್ದ ಅಪ್ಪಾಜಪ್ಪ (84) ಇಂದು ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಾ. 18ರ ಮಂಗಳವಾರ ಗ್ರಾಮದ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಇವರ ನಿಧನಕ್ಕೆ ಸದ್ಗುರು ಮಹಾದೇವ ತಾತನವರ ದೇವಸ್ಥಾನ ಟ್ರಸ್ಟ್‌ನ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಶಿಕ್ಷಕಿ ದಾಕ್ಷಾಯಿಣಿ



ಮೈಸೂರು, ಮಾ.17– ಮೈಸೂರಿನ ಚಾಮುಂಡಿಪುರಂ ನಿವಾಸಿ, ಶಿಕ್ಷಕಿ ಬಿ.ಎಸ್.ದಾಕ್ಷಾಯಿಣಿ(59) ಅವರು ಮಾ.16ರಂದು ನಿಧನರಾದರು. ಇವರು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ನೇರಳೆಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿಯಾಗಿದ್ದರು. ಮೃತರು ಪತಿ ಎಂ.ಕೆ.ಸತೀಶ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಸಮಾವೇಶಕ್ಕೆ ಪ್ರಯಾಣ...



ಬೆಂಗಳೂರಲ್ಲಿ ನಡೆದ ಯುವ ಸಂಕಲ್ಪ ಸಮಾವೇಶ ಹಾಗೂ ನೂತನ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಅವರ ಪದಗ್ರಹಣ ಕಾರ್ಯಕ್ರಮಕ್ಕೆ ಮೈಸೂರು ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್ ನೇತೃತ್ವದಲ್ಲಿ ನಗರ ಪ್ರಧಾನ ಕಾರ್ಯದರ್ಶಿ ದಿಲೀಪ್, ಬ್ಲಾಕ್ ಅಧ್ಯಕ್ಷರಾದ ಪವನ್, ವಿನಯ್, ನಿತಿನ್ ಪುಟ್ಟಸ್ವಾಮಿ, ಚಂದ್ರು, ಪ್ರತಾಪ್, ಕಿರಣ್, ಸೋಮೇಶ, ರೋಹಿತ್ ರಾಮಣ್ಣ, ಮೋಹನ್ ಗಣಪತಿ, ಅಬ್ರಾರ್ ಸೇರಿದಂತೆ ಯುವ ಕಾಂಗ್ರೆಸ್ ಪದಾಧಿಕಾರಿಗಳು ಪ್ರಯಾಣ ಬೆಳೆಸಿದ ಸಂದರ್ಭ.

ಅತಿಥಿ ಶಿಕ್ಷಕರು, ಉಪನ್ಯಾಸಕರ ಗೌರವ ಸಂಭಾವನೆ ಬಾಕಿ ವಿಚಾರವಾಗಿ ಸರ್ಕಾರದ ಗಮನ ಸೆಳೆದ ವಿವೇಕಾನಂದ

ಬೆಂಗಳೂರು, ಮಾ.17– ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರು ಹಾಗೂ ಕೆಲ ತಾಲೂಕುಗಳ ಅತಿಥಿ ಶಿಕ್ಷಕರಿಗೆ ಫೆಬ್ರವರಿಯ ಗೌರವ ಸಂಭಾವನೆ ಬಾಕಿ ಇದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು, ಅತಿಥಿ ಶಿಕ್ಷಕರು ಹಾಗೂ ಅತಿಥಿ ಉಪನ್ಯಾಸಕರಿಗೆ ನಿಗಧಿಯಾಗಿರುವ ಗೌರವ ಸಂಭಾವನೆ ಹಾಗೂ ಅದನ್ನು ನೀಡುವುದರಲ್ಲಿನ ವಿಳಂಬದ ಬಗ್ಗೆ ಪ್ರಶ್ನಿಸಿದ ವೇಳೆ, ಸಚಿವರು ಈ ಬಗ್ಗೆ ವಿವರಣೆ ನೀಡಿದರು.

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 34,455 ಹಾಗೂ ಪ್ರೌಢ ಶಾಲೆಗಳಲ್ಲಿ 9098 ಅತಿಥಿ ಶಿಕ್ಷಕರು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ 4689 ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ.



ವಿವೇಕಾನಂದ

ಪ್ರಾಥಮಿಕ ಶಾಲಾ ಶಿಕ್ಷಕರಿಗೆ 10 ಸಾವಿರ, ಪ್ರೌಢಶಾಲೆ ಶಿಕ್ಷಕರಿಗೆ 10,500 ಹಾಗೂ ಪ.ಪೂ.ಉಪನ್ಯಾಸಕರಿಗೆ 12 ಸಾವಿರ ರೂ. ಗೌರವ ಸಂಭಾವನೆ ನೀಡಲಾಗುತ್ತಿದೆ ಸಂಭಾವನೆ ಮೊತ್ತವನ್ನು ಎರಡು ಕಂತುಗಳಲ್ಲಿ ಆರ್ಥಿಕ ಇಲಾಖೆಯಿಂದ ಸಂಬಂಧಪಟ್ಟ ತಾಲೂಕು ಪಂಚಾಯ್ತಿಗಳಿಗೆ ನೇರವಾಗಿ ಬಿಡುಗಡೆಯಾಗುತ್ತಿದೆ ಎಂದರು.

ಮಂಡ್ಯ ತಾಲೂಕು ಸೂನಗನಹಳ್ಳಿ ಸರ್ಕಾರಿ ಪ್ರೌಢಶಾಲೆ ಹಾಗೂ ಬೆಂಗಳೂರು ಸರ್ವಜ್ಞನಗರ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕರು ಫೆಬ್ರವರಿಯಲ್ಲಿ ನಿವೃತ್ತರಾಗಿದ್ದು, ಇದರಿಂದ ಉಂಟಾದ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿದ ಬಳಿಕ ಅತಿಥಿ ಶಿಕ್ಷಕರಿಗೆ ಗೌರವ ಸಂಭಾವನೆ ನೀಡಲಾಗುವುದು. ಸಿರಿವಾರ ತಾಲೂಕು ಹಾಗೂ ಶಿರಹಟ್ಟಿ ತಾಲೂಕುಗಳ ಶಾಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನೂ ಸರಿಪಡಿಸಲಾಗಿದ್ದು, ಶೀಘ್ರವೇ ವೇತನ ಬಿಡುಗಡೆ ಮಾಡಲಾಗುವುದು. ಉಳಿದೆಲ್ಲಾ ಶಾಲೆಗಳ ಅತಿಥಿ ಶಿಕ್ಷಕರಿಗೆ ಫೆಬ್ರವರಿವರೆಗೂ ಗೌರವ ಸಂಭಾವನೆ ಪಾವತಿಸಲಾಗಿದೆ. ಇನ್ನು ಸರ್ಕಾರಿ ಪ.ಪೂ. ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ಜನವರಿವರೆಗೆ ಗೌರವ ಸಂಭಾವನೆ ನೀಡಲಾಗಿದ್ದು, ಫೆಬ್ರವರಿ ಸಂಭಾವನೆ ಬಾಕಿ ಇದೆ ಎಂದು ತಿಳಿಸಿದ್ದಾರೆ.

ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಆಪ್ತನ ಕೊಲೆ ಪ್ರಕರಣ

ಸಿಬಿಐ ತನಿಖೆಗೆ ಹೈಕೋರ್ಟ್ ಆದೇಶ

ಬೆಂಗಳೂರು, ಮಾ.17– ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಆಪ್ತ ಹಾಗೂ ಕೋಲಾರ ಕಾಂಗ್ರೆಸ್ ಮುಖಂಡ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಶ್ರೀನಿವಾಸ್ ಕೊಲೆ ಪ್ರಕರಣದ ತನಿಖೆಯನ್ನು ಕರ್ನಾಟಕ ಹೈಕೋರ್ಟ್ ಸೋಮವಾರ ಸಿಬಿಐಗೆ ವಹಿಸಿದೆ.

ಸಿಬಿಐ ತನಿಖೆ ಕೋರಿ ಶ್ರೀನಿವಾಸ್ ಅವರ ಪತ್ನಿ ಡಾ.ಎಸ್.ಚಂದ್ರಕಲಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ, ಪ್ರಕರಣವನ್ನು ಸಿಬಿಐಗೆ ವಹಿಸಿ ಆದೇಶ ಹೊರಡಿಸಿದ್ದಾರೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಅವರ ಆಪ್ತ ಎಂ. ಶ್ರೀನಿವಾಸ್ ಅವರನ್ನು 2023 ಅಕ್ಟೋಬರ್ 23ರಂದು ಶ್ರೀನಿವಾಸಪುರ ಹೊರವಲಯದಲ್ಲಿ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿ, ಪರಾರಿಯಾಗಿದ್ದರು.

ಕೊಲೆಯ ಹಿಂದೆ ರಾಜಕೀಯ ಷಡ್ಯಂತ್ರವಿದೆ ಹೀಗಾಗಿ ಈ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಬೇಕೆಂದು ಶ್ರೀನಿವಾಸ್ ಅವರ ಪತ್ನಿ ಡಾ. ಎಸ್. ಚಂದ್ರಕಲಾ, ಹೈಕೋರ್ಟ್‌ಗೆ ಮನವಿ ಮಾಡಿದ್ದರು. ಹೀಗಾಗಿ ಸಿಬಿಐ ತನಿಖೆ ಅನಿವಾರ್ಯವೆಂದು ಹೈಕೋರ್ಟ್ ಅಭಿಪ್ರಾಯ ಪಟ್ಟಿದ್ದು, 3 ತಿಂಗಳಿನಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಲು ಸಿಬಿಐಗೆ ಸೂಚನೆ ನೀಡಿದೆ.

ಚಿನ್ನ ಕಳ್ಳಸಾಗಣೆ ಪ್ರಕರಣ

ನಟಿ ರನ್ಯಾ ರಾವ್ ಜಾಮೀನು ಅರ್ಜಿ ವಿಚಾರಣೆ ಮಾ. 19ಕ್ಕೆ ಮುಂದೂಡಿಕೆ!

ಬೆಂಗಳೂರು: ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಜೈಲು ಸೇರಿರುವ ಕನ್ನಡ ನಟಿ ರನ್ಯಾ ರಾವ್ ಅವರ ಜಾಮೀನು ಅರ್ಜಿಯನ್ನು ಮಾರ್ಚ್ 19ಕ್ಕೆ ಮುಂದೂಡಲಾಗಿದೆ. ಸಿಸಿಎಚ್ 64ನೇ ನ್ಯಾಯಾಲಯ ಇಂದು ಪ್ರಕರಣದ ವಿಚಾರಣೆ ನಡೆಸಿದ್ದು ಮುಂದಿನ ವಿಚಾರಣೆಗೂ ಮುನ್ನ ಕಂದಾಯ ಗುಪ್ತಚರ ನಿರ್ದೇಶನಾಲಯಕ್ಕೆ ತನ್ನ ಆಕ್ಷೇಪಣೆ ಸಲ್ಲಿಸಲು ನಿರ್ದೇಶಿಸಿದೆ. ಬಳಿಕ ಮುಂದಿನ ಪ್ರಕ್ರಿಯೆಗಳು ಮುಂದುವರಿಯುತ್ತವೆ.

ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು ಕಳೆದ ವಾರ ರನ್ಯಾ ರಾವ್ ಅವರ ಹಿಂದಿನ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು. ನಟಿಯ ವಿರುದ್ಧದ ಗಂಭೀರ ಆರೋಪಗಳನ್ನು ಉಲ್ಲೇಖಿಸಿ ಜಾಮೀನು ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿತ್ತು. ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟಿ ರನ್ಯಾ ರಾವ್ ಅವರ ಪತಿ ಜತಿನ್ ಹುಕ್ಕೇರಿ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ಕರ್ನಾಟಕ



ಹೈಕೋರ್ಟ್ ಈ ಹಿಂದೆ ನೀಡಿದ್ದ ತನ್ನ ಮಧ್ಯಂತರ ಆದೇಶವನ್ನು ವಿಸ್ತರಿಸಿದೆ.

ಏತನ್ಮಧ್ಯೆ, ಪ್ರಕರಣದ ಎರಡನೇ ಆರೋಪಿ ಹೋಟೆಲ್ ಉದ್ಯಮಿ ತರುಣ್ ರಾಜುಗೆ 15 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಲಾಗಿದೆ. ಭಾರತದೊಳಗೆ ಚಿನ್ನದ ಸಾಗಣೆ ಮತ್ತು ವಿತರಣೆಯ ಲಾಜಿಸ್ಟಿಕ್ಸ್ ಅನ್ನು ನಿರ್ವಹಿಸುವ ಮೂಲಕ ಕಳ್ಳಸಾಗಣೆ ಕಾರ್ಯಾಚರಣೆಯನ್ನು ಸುಗಮಗೊಳಿಸುವಲ್ಲಿ ರಾಜು ನಿರ್ಣಾಯಕ ಪಾತ್ರ ವಹಿಸಿದ್ದಾರೆ ಎಂದು ಅಧಿಕಾರಿಗಳು ಆರೋಪಿಸಿದ್ದಾರೆ.

ಕರ್ನಾಟಕದ ಹಿರಿಯ ಐಪಿಎಸ್ ಅಧಿಕಾರಿ ಡಿಜಿಪಿ ಕೆ. ರಾಮಚಂದ್ರ ರಾವ್ ಮಲಮಗಳು ರನ್ಯಾ ರಾವ್ ಪ್ರಸ್ತುತ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಮಾರ್ಚ್ 3ರಂದು ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಧಿಕಾರಿಗಳು ಅವರ ಬಳಿಯಿಂದ 12.56 ಕೋಟಿ ರೂ. ಮೌಲ್ಯದ 14.2 ಕೆಜಿ ವಿದೇಶಿ ಮೂಲದ ಚಿನ್ನದ ಗಟ್ಟಿಗಳನ್ನು ವಶಪಡಿಸಿಕೊಂಡ ನಂತರ ಆಕೆಯನ್ನು ಬಂಧಿಸಿದ್ದರು.

ನಟಿಯ ಬಂಧನದ ನಂತರ, ಅವರ ನಿವಾಸದ ಮೇಲೆ ದಾಳಿ ನಡೆಸಿದಾಗ 2.06 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು ಮತ್ತು 2.67 ಕೋಟಿ ರೂ. ನಗದು ಪತ್ತೆಯಾಗಿತ್ತು. ತನಿಖಾಧಿಕಾರಿಗಳು ನಟಿ ದೊಡ್ಡ ಕಳ್ಳಸಾಗಣೆ ಜಾಲದ ಭಾಗವಾಗಿದ್ದರು ಎಂದು ಶಂಕಿಸಿದ್ದಾರೆ. ರಾವ್ ಮತ್ತು ರಾಜು ಇಬ್ಬರ ಮೇಲೂ ಕಸ್ಟಮ್ಸ್ ಕಾಯ್ದೆ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಬಸ್‌ಗಳಲ್ಲಿ ಸರಗಳ್ಳರ ಹಾವಳಿ

ಕೆಲಸ ಮುಗಿಸಿಕೊಂಡು ಬಸ್ ಹತ್ತಿದ ಮಹಿಳೆಯ ಸರ ಕ್ಷಣಾರ್ಧದಲ್ಲಿ ಮಾಯ!

ಮೈಸೂರು, ಮಾ.17(ಎಸ್‌ಬಿಡಿ)– ಸಿಟಿ ಬಸ್‌ನಲ್ಲಿ ಮಹಿಳೆಯ ಮಾಂಗಲ್ಯ ಸರ ಕಳುವಾಗಿರುವ ಬಗ್ಗೆ ನಗರದ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿನಾಯಕನಗರ ನಿವಾಸಿ ಭಾಗ್ಯ(42) ಅವರು ಪ್ರಯಾಣದ ವೇಳೆ ಸುಮಾರು 2.20 ಲಕ್ಷ ರೂ. ಮೌಲ್ಯದ 35 ಗ್ರಾಂ ಚಿನ್ನದ ಮಾಂಗಲ್ಯ ಸರ ಕಳೆದುಕೊಂಡಿದ್ದಾರೆ.

ಕೂರ್ಗಳ್ಳಿಯಲ್ಲಿರುವ ಗಾರ್ಮೆಂಟ್ಸ್‌ವೊಂದರಲ್ಲಿ ಟೈಲರ್ ಆಗಿರುವ ಇವರು, ಶನಿವಾರ ಸಂಜೆ ಕೆಲಸ ಮುಗಿಸಿಕೊಂಡು ಲಿಂಗದೇವರಕೊಪ್ಪಲು ಬಳಿಯ ಪ್ರಯಾಣಿಕರ ತಂಗುದಾಣದಲ್ಲಿ ಸಿಟಿ ಬಸ್ ಹತ್ತಿದ್ದಾರೆ. ತುಂಬಾ ರಶ್ ಇದ್ದಿದ್ದರಿಂದ ಮಾರ್ಗ ಮಧ್ಯೆ ಅವರಿಗೆ ಸೀಟ್ ಸಿಕ್ಕಿದೆ. ಕುಳಿತು ಕುತ್ತಿಗೆ ನೋಡಿಕೊಂಡಾಗ ಮಾಂಗಲ್ಯ ಸರ ಕಳುವಾಗಿರುವುದು ತಿಳಿದಿದೆ. ಕೂಡಲೇ ಚಾಲಕನಿಗೆ ವಿಷಯ ತಿಳಿಸಿ, ಬಸ್‌ನಲ್ಲಿ ತಪಾಸಣೆ ನಡೆಸಿದರೂ ಸರ ಪತ್ತೆಯಾಗಿಲ್ಲ.

ಬಸ್ ಹತ್ತುವಾಗಲೇ ಯಾರೋ ಕಸಕಿತ್ತುಕೊಂಡಿರಬೇಕು. ಇಲ್ಲವೇ ರಶ್‌ನಲ್ಲಿ ಖದೀಮರು ಕೈಚಳಕ ತೋರಿಸಿ, ಯಾವುದೋ ನಿಲುಗಡೆ ಸ್ಥಳದಲ್ಲಿ ಇಳಿದು ಪರಾರಿಯಾಗಿರಬೇಕು ಎಂದು ಶಂಕಿಸಲಾಗಿದ್ದು, ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮಾ.26ಕ್ಕೆ 'ಅಗಸ್ತ್ಯ ದರ್ಶನ' ಪುಸ್ತಕ ಬಿಡುಗಡೆ

ಮೈಸೂರು, ಮಾ.17– ಡಾ.ಸುಧಾ ಎಂ.ಎನ್. ಹಾಗೂ ಓ.ಶಾಮ ಭಟ್ ರಚನೆಯ 'ಅಗಸ್ತ್ಯ ದರ್ಶನ' ಪುಸ್ತಕ ಮಾ.26ರಂದು ಬಿಡುಗಡೆಗೊಳ್ಳಲಿದೆ.

ಮೈಸೂರಿನ ಶ್ರೀ ಬ್ರಹ್ಮರ್ಷಿ ಅಗಸ್ತ್ಯ ಲೋಪಮುದ್ರಾ ಜ್ಞಾನಪೀಠ ಹಾಗೂ ಬೆಂಗಳೂರಿನ ಅಯೋಧ್ಯಾ ಪಬ್ಲಿಕೇಷನ್ಸ್ ಸಹಯೋಗದಲ್ಲಿ ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಅಂದು ಸಂಜೆ 6.15ಕ್ಕೆ ನಡೆಯಲಿರುವ ಸಮಾರಂಭದಲ್ಲಿ, ಶ್ರೀಗಳು ಹಾಗೂ ಗಣ್ಯರ ಸಮ್ಮುಖದಲ್ಲಿ ಪುಸ್ತಕ ಲೋಕಾರ್ಪಣೆಗೊಳ್ಳಲಿದೆ.

ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಮಾತಾ ಅಮೃತಮಯಿ ಮಠದ ಶ್ರೀ ಬ್ರಹ್ಮಚಾರಿ ಪ್ರಸಾದಾಂಮೃತ ಚೈತನ್ಯ ಅವರು ಸಾನಿಧ್ಯ ವಹಿಸಲಿದ್ದು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಹಾಗೂ ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ ಮತ್ತಿತರರು ಮುಖ್ಯ ಅತಿಥಿಗಳಾಗಿರುವರು.

ಮೈಸೂರಲ್ಲಿ 7 ಮಂದಿ ಅಪರಿಚಿತರ ಸಾವು

ಮೈಸೂರು, ಮಾ.17(ಎಸ್‌ಪಿಎನ್)– ಮೈಸೂರಿನಲ್ಲಿ ಆಶ್ರಯವಿಲ್ಲದ ನಿರಾಶ್ರಿತರ ಸಂಖ್ಯೆ ಹೆಚ್ಚಾಗುತ್ತಿದ್ದು, ಆರೋಗ್ಯ ಸಮಸ್ಯೆಯಿಂದ ಅಸ್ವಸ್ಥರಾಗಿ ಚಿಕಿತ್ಸೆ ಫಲಿಸದೆ ತಿಂಗಳಲ್ಲಿ 8ರಿಂದ 10 ಮಂದಿ ಸಾವನ್ನಪ್ಪುತ್ತಿದ್ದಾರೆ.

ಕಳೆದ ಮೂರು ತಿಂಗಳು ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 10 ಮಂದಿ ಭಿಕ್ಷುಕರು ಮೃತಪಟ್ಟಿದ್ದು, ಅವರಲ್ಲಿ ಬಹುತೇಕರು ಕೆ.ಆರ್.ಆಸ್ಪತ್ರೆಯ ಸುತ್ತಮುತ್ತಲಿನ ರಸ್ತೆ ಬದಿಯಲ್ಲಿ ಅಸ್ವಸ್ಥರಾಗಿ ಬಿದ್ದಿದ್ದವರಾಗಿದ್ದಾರೆ. ಅಸ್ವಸ್ಥರಾಗಿದ್ದವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪುತ್ತಿದ್ದಾರೆ.

ಮೃತಪಟ್ಟವರಲ್ಲಿ 7 ಮಂದಿ ಅಪರಿಚಿತ ವ್ಯಕ್ತಿಗಳಾಗಿದ್ದು, ಕೆ.ಆರ್.ಆಸ್ಪತ್ರೆ ಆವರಣದ ಜಯದೇವ ಬಿಲ್ಡಿಂಗ್ ಹತ್ತಿರ ಅಸ್ವಸ್ಥನಾಗಿ ಬಿದ್ದಿದ್ದ 50 ವರ್ಷದ ವ್ಯಕ್ತಿಯೊಬ್ಬ ಫೆ.14 ರಂದು ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದಾರೆ. ಹಾಗೆಯೇ ಜ.25 ಕಲ್ಲು ಬಿಲ್ಡಿಂಗ್ ಬಳಿ 70 ವರ್ಷದ ವ್ಯಕ್ತಿ ಮೃತಪಟ್ಟರೆ, ಜ.18ರಂದು ಕ್ಯಾಷುಯಾಲಿಟಿ ಬಳಿ ಮೃತಪಟ್ಟಿದ್ದಾರೆ. ಫೆ.5ರಂದು ಗಣೇಶ ಮಂದಿರ ಹಿಂಭಾಗದಲ್ಲಿ ಅಸ್ವಸ್ಥನಾಗಿ ಬಿದ್ದಿದ್ದ 40 ವರ್ಷದ ಅಪರಿಚಿತ ವ್ಯಕ್ತಿಯನ್ನು ಚಿಕಿತ್ಸೆ ಫಲಿಸದೇ ಫೆ.16 ರಂದು ಮೃತಪಟ್ಟಿದ್ದಾರೆ. ಫೆ.9ರಂದು ಅಕ್ಕಿ ಚೌಕದ ಸಮೀಪ ಅಸ್ವಸ್ಥರಾಗಿದ್ದ 35 ವರ್ಷದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ.

2024ರ ಆ.28 ರಂದು ಕೆ.ಆರ್.ಆಸ್ಪತ್ರೆ ಆವರಣದ ಕ್ಯಾಷುಯಾಲಟಿ ಬಳಿ ಅಸ್ವಸ್ಥನಾಗಿ ಬಿದ್ದಿದ್ದ 50 ವರ್ಷ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದರೆ, ಮಾ. 11ರಂದು ದೇವರಾಜ ಅರಸು ರಸ್ತೆ ಪಕ್ಕದಲ್ಲಿರುವ ಶಾರದಾ ಜ್ಯುವೆಲರ್ಸ್ ಬಳಿ ಮಲಗಿರುವ ಸ್ಥಿತಿಯಲ್ಲಿಯೇ 35 ವರ್ಷ ಅಪರಿಚಿತ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾರೆ.

100 ಪ್ರಕರಣಗಳು: 2024ರ ಜನವರಿಯಿಂದ ಡಿಸೆಂಬರ್‌ವರೆಗೆ 100 ಮಂದಿ ಅಪರಿಚಿತರ ಸಾವಿನ ಕುರಿತು ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಕೆ.ಆರ್.ಆಸ್ಪತ್ರೆ ಆವರಣ, ನ್ಯೂ ಸಯ್ಯಾಜೀರಾವ್ ರಸ್ತೆ ದಿವಾನ್ಸ್ ರಸ್ತೆ ಸೇರಿದಂತೆ ಭಿಕ್ಷುಕರ ಆವಾಸ ಸ್ಥಾನವಾಗಿದ್ದು, ಇವರಿಗೆ ಶಾಶ್ವತ ನೆಲೆ ಕಲ್ಪಿಸುವಲ್ಲಿ ಮೈಸೂರು ನಗರ ಪಾಲಿಕೆ ಅಧಿಕಾರಿಗಳು ವಿಫಲರಾಗಿದ್ದಾರೆ. ಮೃತರ ವಾರಸುದಾರರಿದ್ದಲ್ಲಿ ದೇವರಾಜ ಠಾಣೆ ದೂ.ಸಂ–0821–2418306/9480802231/9480709284 ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ದಾವೂದ್ ಸಹೋದರನ ಚಾಲಕನ ಹತ್ಯೆ ಪ್ರಕರಣ

ಭೂಗತ ಪಾತಕಿ ಛೋಟಾ ರಾಜನ್ ಖುಲಾಸೆ

ನವದೆಹಲಿ, ಮಾ. 17– 2011ರಲ್ಲಿ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಸಹೋದರ ಇಕ್ಬಾಲ್ ಕಸ್ಕರ್‌ನ ಚಾಲಕನ ಹತ್ಯೆ ಪ್ರಕರಣದಲ್ಲಿ ದರೋಡೆಕೋರ ಛೋಟಾ ರಾಜನ್‌ನನ್ನು ಇಂದು ಮುಂಬೈನ ವಿಶೇಷ ನ್ಯಾಯಾಲಯವು ಖುಲಾಸೆಗೊಳಿಸಿದೆ. ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಮೋಕಾ) ಅಡಿಯಲ್ಲಿ ಗೊತ್ತುಪಡಿಸಲಾದ ವಿಶೇಷ ನ್ಯಾಯಾಧೀಶ ಎ.ಎಂ. ಪಾಟೀಲ್, ಛೋಟಾ ರಾಜನ್ ಅವರನ್ನು ಖುಲಾಸೆಗೊಳಿಸಿದ್ದಾರೆ. ಪ್ರಸ್ತುತ ದೆಹಲಿಯ ತಿಹಾರ್ ಜೈಲಿನಲ್ಲಿರುವ ಛೋಟಾ ರಾಜನ್‌ನನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ಯಾವುದೇ ಅಪರಾಧ ಅಥವಾ ಪ್ರಕರಣದಲ್ಲಿ ಅವರ ಅಗತ್ಯವಿಲ್ಲದಿದ್ದರೆ ಛೋಟಾ ರಾಜನ್ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ನ್ಯಾಯಾಲಯ ಹೇಳಿದೆ. ಮೇ 17, 2011 ರಂದು ದಕ್ಷಿಣ ಮುಂಬೈನಲ್ಲಿ ಇಬ್ಬರು ವ್ಯಕ್ತಿಗಳು ಆರಿಫ್ ಅಬುಬಾಕರ್ ಸಯ್ಯದ್ ಎಂಬುವವರ ಮೇಲೆ ಗುಂಡು ಹಾರಿಸಿದರು. ಸಯ್ಯದ್ ಪರಾರಿಯಾಗಿರುವ ದರೋಡೆಕೋರ ದಾವೂದ್ ಇಬ್ರಾಹಿಂನ ಕಿರಿಯ ಸಹೋದರ ಇಕ್ಬಾಲ್ ಕಸ್ಕರ್‌ನ ಚಾಲಕ ಮತ್ತು ಅಂಗರಕ್ಷಕರಾಗಿದ್ದರು.

ಮಂಡ್ಯದ ವಿವಿಧೆಡೆ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಆಚರಣೆ

ಮಂಡ್ಯ,ಮಾ.17– ಮಂಡ್ಯ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಪವರ್ ಸ್ಟಾರ್ ದಿ.ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಸೋಮವಾರ ಆಚರಿಸಲಾಯಿತು.

ರಕ್ತದಾನ ಶಿಬಿರ: ನಗರದ ಕೇಂದ್ರ ಉಪ ಕಾರಾಗೃಹ ಬಳಿ ಪುನೀತ್ ರಾಜ್‌ಕುಮಾರ್ 50ನೇ ಜನ್ಮದಿನೋತ್ಸವದ ಅಂಗವಾಗಿ ರಕ್ತದಾನ ಶಿಬಿರ, ವಿದ್ಯಾರ್ಥಿಗಳಿಗೆ ನೋಟ್‌ಪುಸ್ತಕ ಮತ್ತು ಅನ್ನದಾಸೋಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ದೇವ ರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್.ಸಂದೇಶ್, ಸಿನಿಮಾ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮತ್ತು ನಿಜ ಜೀವನದಲ್ಲಿ ಸಹಜತೆ, ವಿನಯವಂತಿಕೆ ಹಾಗೂ ಹೃದಯವಂತಿಕೆಯನ್ನು ಮೈಗೂಡಿಸಿಕೊಂಡಿದ್ದ ಕರ್ನಾಟಕ ರತ್ನ ಪುನೀತ್‌ರಾಜ್‌ಕುಮಾರ್ ಬದುಕು ಆದರ್ಶನೀಯ ಎಂದು ಬಣ್ಣಿಸಿದರು.

ಡಿ.ದೇವರಾಜ ಅರಸು ವೇದಿಕೆ ಪ್ರಧಾನ ಕಾರ್ಯದರ್ಶಿ ಎಂ.ಕೃಷ್ಣ, ಸಮಾಜ ಸೇವಕರಾದ ಪ್ರದೀಪ್ ಯಲಿಯೂರು, ಸಿ. ಸಿದ್ದಶೆಟ್ಟಿ, ಅಪ್ಪು ಅಭಿಮಾನಿ ಬಳಗದ ಯಶವಂತ್, ಚವನ್, ಪ್ರಸನ್ನ, ನಿಶಾಂತ್, ಚಿರಂತ್, ಅಜಿತ್ ಮತ್ತಿತರರಿದ್ದರು.

ಕರವೇಯಿಂದ ಅಪ್ಪು ಸ್ಮರಣೆ: ನಗರದ ಜೆಸಿ ವೃತ್ತದಲ್ಲಿರುವ ಡಾ.ರಾಜ್ ಪ್ರತಿಮೆ ಬಳಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್



ಮಂಡ್ಯದ ಜೆಸಿ ವೃತ್ತದ ಡಾ.ರಾಜ್‌ಕುಮಾರ್ ಪ್ರತಿಮೆ ಬಳಿ ಜನ್ಮದಿನ ಕಾರ್ಯಕ್ರಮ ನಡೆಯಿತು.

ಶೆಟ್ಟಿ ಬಣ) ಜಿಲ್ಲಾ ಘಟಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿಹಿವಿತರಣೆ ಮಾಡಲಾಯಿತು.

ಬಳಿಕ ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ್‌ಶೆಟ್ಟಿಬಣ)ಜಿಲ್ಲಾಧ್ಯಕ್ಷ ಡಿ.ಅಶೋಕ್, ಕನ್ನಡ ಭಾಷೆ ಬೆಳವಣಿಗೆಗೆ ಡಾ.ರಾಜ್ ಕುಟುಂಬ ತಮ್ಮದೇ ಆದ ಕೊಡುಗೆ ನೀಡಿದೆ, ಸಿನಿಮಾ ಮಾಧ್ಯಮ ಮೂಲಕ ಕನ್ನಡತ ಜಾಗೃತಿಗೊಳಿಸಿದ್ದಾರೆ, ಭಾಷೆಯ ಶ್ರೇಯೋಭಿವೃದ್ಧಿಗೆ ಪ್ರೋತ್ಸಾಹ ನೀಡಿದ್ದಾರೆ ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ ವರನಟ ಡಾ. ರಾಜ್ ಪ್ರತಿಮೆಗೆ ವಿವಿಧ ಹೂಗಳಿಂದ ಅಲಂಕಾರ ಮಾಡಲಾಗಿತ್ತು, ಅಪ್ಪು ಅವರ ಆಳೆತ್ತರದ ಭಾವಚಿತ್ರದ ಕಟೌಟ್‌ಗಳಿಗೆ ಅಲಂಕಾರ ಮಾಡಲಾಗಿದ್ದು, ಸಿಹಿವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜಯಕರ್ನಾಟಕ ಜಿಲ್ಲಾಧ್ಯಕ್ಷ ಯೋಗಣ್ಣ, ಕರವೇ ಕೆ.ಟಿ.ಶಂಕರೇಗೌಡ, ರೈತಮುಖಂಡ ಹೆಮ್ಮಿಗೆ ಚಂದ್ರಶೇಖರ್, ವಕೀಲ ರಾಮಯ್ಯ ಮತ್ತಿತರರಿದ್ದರು.

ನಗರದ ಸ್ವರ್ಣಸಂದ್ರ ಬಡಾವಣೆಯಲ್ಲಿರುವ ಡಾ.ರಾಜಕುಮಾರ್ ಅಭಿಮಾನಿಗಳ ಸಂಘ ಹಾಗೂ ದೊಡ್ಡಮನೆ ಬಳಗ ಆಯೋಜಿಸಿದ್ದ ಸಿಹಿ ವಿತರಣಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಸ್ವರ್ಣಚಂದ್ರ ನಾಗರಾಜ್ ಮಾತನಾಡಿ, ಅಪ್ಪು ಅವರು ಕನ್ನಡ ಚಿತ್ರರಂಗದಲ್ಲಿ ಮೇರುನಟರಾಗಿದ್ದರೂ ಎಲೆಮರೆಕಾಯಿಯಂತೆ ಸಮಾಜ ಸೇವೆ ಮಾಡುತ್ತಿದ್ದು, ಅವರು ತೀರಿ ಹೋದ ನಂತರ ತಿಳಿಯಿತು. ಅವರು ನುಡಿದಂತೆ ನಡೆಯುತ್ತಿದ್ದರು, ನಡೆದಂತೆ ನುಡಿಯುತ್ತಿದ್ದ ನಾಯಕನ ಒಡೆಯರಾಗಿದ್ದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ರಘು, ಲೋಕೇಶ್, ಪುಟ್ಟೇಗೌಡ, ಬಸವೇಗೌಡ, ಬಸವರಾಜ್, ಸಿದ್ದೇಗೌಡ, ಚಿಕ್ಕಲಿಂಗೇಗೌಡ ಮತ್ತಿತರರು ಹಾಜರಿದ್ದರು.

ಅನ್ನಸಂತರ್ಪಣೆ: ಮಂಡ್ಯ ನಗರದ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಅಪ್ಪು ಅಭಿಮಾನಿ ದೇವು ಮತ್ತು ಸ್ನೇಹ ಬಳಗವು ಪೌಷ್ಠಿಕ ಆಹಾರ ವಿತರಿಸಿತು.

ಬಳಿಕ ಮಾತನಾಡಿದ ಅಪ್ಪು ಅಭಿಮಾನಿ, ಡಾ.ಪುನೀತ್ ರಾಜ್‌ಕುಮಾರ್ ಅವರು ನಮ್ಮ ಬಿರಿಯಾನಿ ಅಂಗಡಿಯಿಂದ ಸಾಕಷ್ಟು ಬಾರಿ ರುಚಿ ಸವಿದಿದ್ದಾರೆ. ಅದೊಂದೆ ನಮ್ಮ ಪುಣ್ಯ ಅವರೊಟ್ಟಿಗೆ ಕುಳಿತು ಊಟ ಮಾಡಿದ್ದು ನಮ್ಮ ಸೌಭಾಗ್ಯ ಎಂದು ಸ್ಮರಿಸಿದರು.

ಸರಳ ಮತ್ತು ಸಜ್ಜನಿಕೆಯ ವ್ಯಕ್ತಿತ್ವ ದೊಡ್ಡ ನಾಯಕನಟ ಎನ್ನುವ ಅಹಂಕಾರವಿಲ್ಲದೆ ಜನರ ಅಭಿಮಾನಿಯಾಗಿದ್ದರು, ಅವರ ಜನ್ಮದಿನ ಪ್ರಯುಕ್ತ ಅನ್ನದಾನ ಮಾಡಿ, ಸ್ಮರಿಸಿಕೊಳ್ಳುತ್ತಿದ್ದೇವೆ ಎಂದು ನುಡಿದರು.

ರೈತನ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ



ಶ್ರೀರಂಗಪಟ್ಟಣ: ರೈತರ ಜಮೀನುಗಳಿಗೆ ತೆರಳುವ ರಸ್ತೆ ಅಗಲೀಕರಣ, ನಾಲೆ ದುರಸ್ತಿ ಮಾಡದೆ ಇರುವ ಅಧಿಕಾರಿಗಳ ವಿರುದ್ಧ ಸತ್ಯಾಸತ್ಯತೆಯ ಬಗ್ಗೆ ನ್ಯಾಯಾಲಯದಲ್ಲಿ ಉನ್ನತ ಮಟ್ಟದ ತನಿಖೆ ಕೋರಿ ರೈತ ಪ್ರಭಾಕರ್, 3ನೇ ಬಾರಿಗೆ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ಪಟ್ಟಣದ ತಾಲೂಕು ಕಚೇರಿ ಎದುರು ಸತ್ಯಾಗ್ರಹ ಧರಣಿ ಆರಂಭಿಸಿರುವ ಅವರು, ತಾಲೂಕಿನ ಕೆ.ಶೆಟ್ಟಹಳ್ಳಿ ಹೋಬಳಿಯ ಕಿರಂಗೂರು ಗ್ರಾಮದ ಸರ್ವೆ ನಂ. 1078 /1ರಿಂದ 1078/4 ಹಾಗೂ 1073/1ಬಿ2 ತನಕ ಇರುವ ನಾಲಾ ಏರಿ ಹಾಗೂ ರಸ್ತೆ ಒತ್ತುವರಿ ತೆರವು ಮಾಡಿ ಸಾರ್ವಜನಿಕ ರಸ್ತೆಯನ್ನಾಗಿ ಕಲ್ಪಿಸುವಂತೆ 2004 ರಿಂದ ತಾಲೂಕು ಆಡಳಿತಕ್ಕೆ ದೂರು ನೀಡಿ ಮನವಿ ಮಾಡಿದ್ದರೂ. ಪ್ರಯೋಜನವಾಗದ ಹಿನ್ನೆಲೆಯಲ್ಲಿ ಈ ಬಾರಿಗೆ ಅನಿದಿಷ್ಟ ಧರಣಿ ನಡೆಸಲು ಮುಂದಾಗಿದ್ದಾರೆ.

ದಸರಗುಪ್ಪೆ ಗ್ರಾಮದ ರೈತ ಡಿ.ಪ್ರಭಾಕರ್ ಮಾತನಾಡಿ, 2004ನೇ ಸಾಲಿನಿಂದ 2025ನೇ ಸಾಲಿನ ವರೆಗೆ ರಸ್ತೆ ಒತ್ತುವರಿ ಹಾಗೂ ನಾಲಾ ಏರಿ ದುರಸ್ತಿಗಾಗಿ ಸಂಬಂಧಪಟ್ಟ ಅಧಿಕಾರಿಗಳನ್ನ ಒತ್ತಾಯಿಸುತ್ತಲೇ ಬಂದಿದ್ದೇನೆ. ನನ್ನ ಮೇಲೆ ಪ್ರಭಾವಿಗಳು ಹಲ್ಲೆ ಸಹ ನಡೆಸಿದ್ದರು. ಈ ಸಂಬಂಧ ಠಾಣೆಗೆ ದೂರು ದಾಖಲಿಸಿದ್ದರೂ ಸಹ ಪೊಲೀಸರು ಅವರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ. ಈಗಾಗಲೇ ಇದೇ ವಿಷಯವಾಗಿ ಎರಡು ಬಾರಿ ಉಪವಾಸ ಸತ್ಯಾಗ್ರಹ ನಡೆಸಿದ್ದು, ಇದೀಗ ಸತ್ಯಾ–ಸತ್ಯ ತೆಯ ಬಗ್ಗೆ ನ್ಯಾಯಾಲಯದಲ್ಲಿ ಉನ್ನತ ಮಟ್ಟದ ತನಿಖೆ ಕೋರಿ ಸೋಮವಾರದಿಂದ ತಾಲೂಕು ಕಚೇರಿ ಎದುರು ಧರಣಿ ಕುಳಿತು 3ನೇ ಬಾರಿಗೆ ದಾಖಲೆ ಪತ್ರಗಳ ಹಿಡಿದು ಸತ್ಯಾಗ್ರಹ ನಡೆಸುತ್ತಿದ್ದು, ಕೂಡಲೇ ಸ್ಥಳೀಯ ತಾಲೂಕು ಆಡಳಿತ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

ವಿಧಾನಸೌಧದಲ್ಲಿ ರಾಜ್ಯಪಾಲರ ಹಿಂದಿ ಭಾಷಣಕ್ಕೆ ವಾಟಾಳ್ ವಿರೋಧ

ಮಂಡ್ಯ, ಮಾ.17– ಕಳೆದ ಮೂರು ವರ್ಷಗಳಿಂದಲೂ ಸದನದಲ್ಲಿ ರಾಜ್ಯಪಾಲರು ಹಿಂದಿಯಲ್ಲಿ ಭಾಷಣ ಮಾಡುತ್ತಿದ್ದರೂ ಯಾವುದೇ ಶಾಸಕರು ಅಥವಾ ಸಚಿವರು ಪ್ರಶ್ನಿಸುವ ಮನೋಭಾವ ಬೆಳೆಸಿಕೊಂಡಿಲ್ಲ ಎಂದು ಕನ್ನಡ ಚಳುವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಅಸಮಾಧಾನ ವ್ಯಕ್ತಪಡಿಸಿದರು.



ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಕನ್ನಡ ಒಕ್ಕೂಟ–ಕರ್ನಾಟಕ ರಾಜ್ಯ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಮುಂದೆ ಬೆಳಗಾವಿ ಮೇಯರ್ ಆಗಿ ಮರಾಠಿಯವರನ್ನು ಆಯ್ಕೆ ಮಾಡಿರುವುದನ್ನು ಖಂಡಿಸಿ ಕಪ್ಪು ಬಾವುಟ ಪ್ರದರ್ಶಿಸಿ, ಮಾತನಾಡಿದರು.

ಕರ್ನಾಟಕ ರಾಜ್ಯ ಮತ್ತು ಕನ್ನಡಿಗರನ್ನು ಕೇಳುವವರೇ ಇಲ್ಲದಾಗಿದೆ. ಸದನದಲ್ಲಿ ಹಿಂದಿ ಮಾತನಾಡಿದರೂ ಪ್ರಶ್ನಿಸುವವರಿಲ್ಲ. ಜೆ.ಎಚ್.ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಖುರ್ಷಿದ್ ಆಲಂಖಾನ್ ಅವರು ಹಿಂದಿಯಲ್ಲಿ ಮಾತನಾಡುವಾಗ ನಾನು ವಿರೋಧಿಸಿದ್ದೆ. ನನ್ನ ಗದ್ದಲದಿಂದ ಬೇಸತ್ತು ರಾಜ್ಯಪಾಲರು ಭಾಷಣವನ್ನು ಅರ್ಧಕ್ಕೇ ಮೊಟಕುಗೊಳಿಸಿ ಹೊರ ನಡೆದಿದ್ದರು. ಆದರೆ ಇಂತಹ ಎದೆಗಾರಿಕೆಯನ್ನು ಇಂದಿನ ಜನಪ್ರತಿನಿಧಿಗಳು ಬೆಳೆಸಿಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯಪಾಲರಾದವರು ಇನ್ನು ಮುಂದೆ ಕನ್ನಡದಲ್ಲೇ ಮಾತನಾಡಬೇಕು. ಹಿಂದಿಯಲ್ಲಿ ಬರೆದುಕೊಂಡು ಸ್ವಲ್ಪವಾದರೂ ಕನ್ನಡದಲ್ಲಿ ಮಾತನಾಡಿ ಎಂದು ಸಲಹೆ ನೀಡಿದರು.

ಮರಾಠಿಗರ ಪುಂಡಾಟಿಕೆ, ಮರಾಠಿಗರ ಅಟ್ಟಹಾಸ, ಎಂಇಎಸ್ ನಿಷೇಧ ಮಾಡಬೇಕು. ಕಳಸಾ ಬಂಡೂರಿ ಮಹದಾಯಿ ಯೋಜನೆ ಕೂಡಲೇ ಆರಂಭ ಮಾಡಬೇಕು ಹಿಂದಿ ಹೇರಿಕೆ ಬೇಡ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಯಾಗಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಾ. 22ರಂದು ಅಖಂಡ ಕರ್ನಾಟಕ ಬಂದ್ ಮಾಡಲಾಗುವುದು ಎಂದು ತಿಳಿಸಿದರು.

ಕನ್ನಡ ಸೇನೆ ರಾಜ್ಯಾಧ್ಯಕ್ಷ ಕುಮಾರ್, ಮುಖಂಡರಾದ ಮಂಜುನಾಥ್, ಮಹಂತಪ್ಪ ಆನಂದ್, ಬೆಟ್ಟಹಳ್ಳಿ ಮಂಜುನಾಥ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪಾಂಡವಪುರದಲ್ಲಿ ಅಪ್ಪು ಹುಟ್ಟುಹಬ್ಬ



ಪಟ್ಟಣದ ಹಳೇಬಸ್ ನಿಲ್ದಾಣದಲ್ಲಿ ಉದ್ಯಮಿ ಚಂದ್ರಕಾಂತ್ ನೇತೃತ್ವದಲ್ಲಿ ಚಿತ್ರನಟ ದಿವಂಗತ ಡಾ.ಪುನೀತ್ ರಾಜ್ ಕುಮಾರ್ ಅವರ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಸೋಮವಾರ ಆಚರಣೆ ಮಾಡಲಾಯಿತು.

ಪಾಂಡವಪುರ: ಕರ್ನಾಟಕ ರತ್ನ ಪುನೀತ್ ರಾಜಕುಮಾರ ಅವರ ಹುಟ್ಟುಹಬ್ಬವನ್ನು ಪಟ್ಟಣದ ಹಳೇಬಸ್ ನಿಲ್ದಾಣದಲ್ಲಿ ಶ್ರೀನಿವಾಸ್ ಬಂಡಾರದ ಮಾಲೀಕರಾದ ಸುಧಾ ಜಯರಾಮು ಅವರ ಪುತ್ರ ಉದ್ಯಮಿ ಚಂದ್ರಕಾಂತ್ ನೇತೃತ್ವದಲ್ಲಿ ವಿಜೃಂಭಣೆಯಿಂದ ಸೋಮವಾರ ಆಚರಣೆ ಮಾಡಲಾಯಿತು.

ಅಭಿಮಾನಿಗಳು ಡಾ.ಪುನೀತ್ ರಾಜ್ ಕುಮಾರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಆಚರಣೆ ಮಾಡಿ ಅಭಿಮಾನಿಗಳಿಗೆ ಅನ್ನಸಂತರ್ಪಣೆ ಮಾಡಿದರು.

ಉದ್ಯಮಿ ಚಂದ್ರಕಾಂತ್ ಮಾತನಾಡಿ, ಡಾ.ಪುನೀತ್ ರಾಜ್ ಕುಮಾರ್ ಅವರು ದೊಡ್ಡ ನಟರ ಮಗನಾಗಿದ್ದರೂ ಎಂದಿಗೂ ಬೀಗಲಿಲ್ಲ. ಸ್ವಂತ ದುಡಿಮೆಯಿಂದ ಬದುಕಬೇಕೆಂಬ ಹಠದಿಂದ ಸಮಾಜದಲ್ಲಿ ಮಾದರಿಯಾಗಿ ಜೀವನ ನಡೆಸಿದರು. ಹಣೆಬರಹದಲ್ಲಿ ಜೀವನವಿಲ್ಲ ಹಣೆಯ ಬೆವರಿನಲ್ಲಿ ದುಡಿಮೆ ಇದೆ ಎಂಬ ಮಾತುಗಳಂತೆ ಸಮಾಜದಲ್ಲಿ ಬದುಕು ತೋರಿದ್ದಾರೆ. ಹತ್ತಾರು ಒಳ್ಳೆಯ ಕೆಲಸಮಾಡುವ ಮೂಲಕ ಮಾದರಿಯಾಗಿದ್ದಾರೆ. ಇಂದಿನ ಯುವಕರು ಪುನೀತ್ ರಾಜ್ ಕುಮಾರ್ ಅವರನ್ನು ಮಾದರಿಯಾಗಿ ತೆಗೆದುಕೊಂಡು ಜೀವನ ನಡೆಸಬೇಕು. ಇದುವರೆಗೂ ನಮ್ಮ ಎಲ್ಲಾ ಕೆಲಸ, ಕಾರ್ಯಕ್ರಮಗಳಿಗೆ ಜನರು ಬೆಂಬಲ ನೀಡಿ ಬೆಳೆಸಿದ್ದಾರೆ ಅದೇ ರೀತಿ ಜನರ ಬೆಂಬಲ ನಮಗೆ ಸದಾ ಇರಲಿ ಎಂದರು.

ಸಮಾರಂಭದಲ್ಲಿ ಪುರಸಭೆ ಸದಸ್ಯೆ, ಶ್ರೀನಿವಾಸ್ ಬಂಡಾರ ಮಾಲೀಕರಾದ ಸುಧಾ ಜಯರಾಮ್, ಉದ್ಯಮಿ ಚಂದ್ರಕಾಂತ್, ಶಿವಕುಮಾರ್, ಪರಮೇಶ್, ಉಮೇಶ್, ಉಪೇಂದ್ರ, ಚಂದ್ರೇಶ್, ರವಿ, ಕಿರಣ್, ರಾಜೇಶ್, ಗಣೇಶ ಸೇರಿದಂತೆ ಹಳೇಬಸ್ ನಿಲ್ದಾಣ ಎಲ್ಲಾ ಅಂಗಡಿ ಮಾಲೀಕರು ಹಾಜರಿದ್ದರು.

ಇಂದಿನಿಂದ ಕಿಕ್ಕೇರಿಯಲ್ಲಿ ಹೊನ್ನಾಳಮ್ಮ ದೇಗುಲ ಲೋಕಾರ್ಪಣೆ ಕಾರ್ಯಕ್ರಮ

ಕಿಕ್ಕೇರಿ: ಪಟ್ಟಣದ ಜನಾರ್ಧನಸ್ವಾಮಿ ಬೀದಿಯಲ್ಲಿರುವ ಹೊನ್ನಾಳಮ್ಮ ದೇಗುಲ ಹಾಗೂ ವೀರಭದ್ರಸ್ವಾಮಿ, ಲಕ್ಷ್ಮೀದೇವಿ ಅಮ್ಮನವರ ಮೂರ್ತಿ ಪ್ರತಿಷ್ಠಾಪನೆ ಇದೇ ಮಾ. 18ರಿಂದ 20ರವರೆಗೆ ವಿವಿಧ ಪೂಜಾ ಕೈಂಕರ್ಯಗಳೊಂದಿಗೆ ನಡೆಯಲಿದೆ. ಇಡೀ ಗ್ರಾಮ ವಿದ್ಯುತ್ ದೀಪಗಳ ಅಲಂಕಾರ, ತಳಿರು ತೋರಣಗಳಿಂದ ಶೃಂಗರಿಸಲಾಗಿದೆ.

18 ರಂದು ದೇವಿಯ ಪ್ರತಿಷ್ಠಾಪನಾ ಮಹೋತ್ಸವ, ಜೀವಕಳೆ ಸಮರ್ಪಣೆ, ಗೇಹ ಪರಿಗ್ರಹ, ಪಂಚಗವ್ಯ ಪುಣ್ಯಾಹ ವಾಚ, ಋತ್ವಿಗ್‌ವರಣ, ಸಪ್ತಶುದ್ಧಿ, ಪ್ರಸಾದ ಶುದ್ಧಿ, ವಾಸ್ತುಪೂಜೆ, ರಕ್ಷೋಘ್ನ, ವಾಸ್ತು, ಹೋಮ, ಬಿಂಬ ಶುದ್ಧಿ, ಶಯ್ಯಾನವಾಸ, ಶಯ್ಯಾಧಿವಾಸ ಹೋಮ, ನಿದ್ರಾಕಳಶ ಜರುಗಲಿದೆ.

19ರಂದು ಕುಕ್ಕೆ ಸುಬ್ರಹ್ಮಣ್ಯದ ವಿದ್ಯಾಪ್ರಸನ್ನ ತೀರ್ಥಸ್ವಾಮೀಜಿ ಅವರಿಂದ ದೇವರಿಗೆ ವಿಶೇಷ ಪೂಜೆ, ಹೊನ್ನಾಳಮ್ಮ ದೇವಿಯ ಮೆರವಣಿಗೆ ಜರುಗಲಿದೆ.

20 ರಂದು ಕಳಶ ಪ್ರತಿಷ್ಠಾಪನೆ ಮಹೋತ್ಸವ, ವಿವಿಧ ಹೋಮ ಹವನಾದಿ, ಪೂಜ್ಯರಿಂದ ಆಶೀರ್ವಚನ, ಮಹಾ ಮಂಗಳಾರತಿ, ತೀರ್ಥ ಪ್ರಸಾದ, ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಹೊನ್ನಾಳಮ್ಮ ದೇವಸ್ಥಾನ ಸೇವಾ



ಸಮಿತಿ ಟ್ರಸ್ಟ್ ಅಧ್ಯಕ್ಷ ಮೋಹನ್ ಕುಮಾರ್ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಆರ್‌ಎಸ್‌ಎಸ್, ಬಿಜೆಪಿಯವರು...!

ತಮ್ಮ ಹೇಳಿಕೆಯನ್ನು ಮತ್ತೊಮ್ಮೆ ಸಮರ್ಥಿಸಿಕೊಂಡು ನಿಮ್ಮದು ಬರೀ ಬೆಂಕಿ ಹಚ್ಚುವ ಕೆಲಸ, ನಾವು ಎಂದಿಗೂ ದ್ವೇಷ ರಾಜಕಾರಣವನ್ನು ಮಾಡಿಲ್ಲ.

ಆರ್‌ಎಸ್‌ಎಸ್‌ನವರು ನಿಮ್ಮನ್ನು ಎತ್ತಿಕಟ್ಟಿ ನಿಲ್ಲುವಂತೆ ಮಾಡಿದ್ದಾರೆ, ಆ ಸಂಘಟನೆಯ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿದ್ದೀರಿ, ದೇಶ ವಿಭಜನೆಯಲ್ಲಿ ಬ್ರಿಟಿಷರ ಜೊತೆ ಕೈಜೋಡಿಸಿದವರು ನೀವು ಎಂದು ದೂರಿದರು.

ಮುಖ್ಯಮಂತ್ರಿ ಅವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ ಬಿಜೆಪಿ ಸದಸ್ಯರು, ನೀವು ದಲಿತ ವಿರೋಧಿಗಳು, ನೀವು ಪಾಕಿಸ್ತಾನಿ ಏಜೆಂಟರು, ನಿಮ್ಮಿಂದ ನಾವು ರಾಷ್ಟ್ರಪ್ರೇಮ ಕಲಿಯಬೇಕಿಲ್ಲ ಎಂದು ಖಾರವಾಗಿ ನುಡಿದರು. ಈ ವೇಳೆ ಸಭಾಧ್ಯಕ್ಷ ಸ್ಥಾನದಲ್ಲಿ ಆಸೀನರಾಗಿದ್ದ ಹಿರಿಯ ಸದಸ್ಯ ಶಿವಲಿಂಗೇಗೌಡ, ಮುಖ್ಯಮಂತ್ರಿ ಬಳಸಿರುವ ಪದ ಅಸಂಸದೀಯವಲ್ಲ ಎಂದು ತೀರ್ಪು ನೀಡಿದ್ದಲ್ಲದೆ, ಬಿಜೆಪಿ ಸದಸ್ಯರ ಹೇಳಿಕೆಗಳನ್ನು ದಾಖಲಿಸದಂತೆ ಆದೇಶಿಸಿದರು. ಪೀಠಾಸೀನಾಧಿಕಾರಿಗಳು ಎಷ್ಟೇ ಮನವಿ ಮಾಡಿದರೂ ಆಡಳಿತ ಮತ್ತು ಪ್ರತಿಪಕ್ಷ ಬಿಜೆಪಿ ಸದಸ್ಯರು ಏರುಧ್ವನಿಯಲ್ಲಿ ವಾಕ್ ಸಮರ ಮುಂದುವರಿಸಿದಾಗ ಕಲಾಪವನ್ನು 10 ನಿಮಿಷ ಮುಂದೂಡಿದರು.

ಬಂದಿದ್ದೇವೆ; ಅಧಿಕಾರ ಮಾಡಲು ಅಲ್ಲ

ಈಗಲಾದರೂ ಸಕಾರಾತ್ಮಕವಾಗಿ ಟೀಕೆ ಮಾಡಬೇಕು ಎಂದು ಮನವಿ ಮಾಡಿದರು. ಸರ್ಕಾರದ ಖಜಾನೆಗೆ ತೊಂದರೆ ಆಗಿದ್ದರೆ, ಯೋಜನಾ ಅನುಷ್ಠಾನದಲ್ಲಿ ತಪ್ಪುಗಳಾಗಿದ್ದರೆ, ಅವನ್ನು ನಮ್ಮ ಗಮನಕ್ಕೆ ತನ್ನಿ, ಅದು ಬಿಟ್ಟು ರಾಜಕೀಯ ಉದ್ದೇಶಕ್ಕಾಗಿ ದಾಳಿ ಮಾಡಬೇಡಿ. ನಾವು ಆರ್ಥಿಕವಾಗಿ ಸುಭದ್ರವಾಗಿದ್ದೇವೆ, ಹಾಗಿರುವುದರಿಂದಲೇ ಗ್ಯಾರಂಟಿ ಯೋಜನೆಗಳಿಗೆ 76,509 ಕೋಟಿ ರೂ.ಗಳನ್ನು ಇದುವರೆಗೆ ನೀಡಿರುವುದಾಗಿ ತಿಳಿಸಿದರು.

ಲೋಕಸಭಾ ಚುನಾವಣೆ ನಂತರ ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ನಿಲ್ಲಿಸಿಬಿಡುತ್ತೆ ಎಂಬುದಾಗಿ ಸುಳ್ಳು ಆರೋಪ, ಅಪಪ್ರಚಾರ ಮಾಡಿದಿರಲ್ಲಾ, ನಿಂತೋಯ್ತಾ ಎಂದು ಪ್ರಶ್ನಿಸಿದರು.

ನಿಮ್ಮ ಟೀಕೆ, ಆಪಾದನೆಗಳ ನಂತರ ನಡೆದ ವಿಧಾನಸಭಾ ಉಪಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ಗೆದ್ದಿದ್ದ ಚನ್ನಪಟ್ಟಣ ಕ್ಷೇತ್ರದಲ್ಲಿ 25 ಸಾವಿರಕ್ಕೂ ಹೆಚ್ಚು ಅಂತರದಿಂದ ಗೆದ್ದಿದ್ದೇವೆ, ಶಿಗ್ಗಾಂವಿ ಕ್ಷೇತ್ರದಲ್ಲಿ 13 ಸಾವಿರ ಮತಗಳ ಅಂತರದಿಂದ ಹಾಗೂ ಸಂಡೂರು ಕ್ಷೇತ್ರದಲ್ಲಿ 9 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದೇವೆ, ಮೂರೂ ಕಡೆ ನೀವು ಮಕಾಡೆ ಮಲಗಿದ್ದೀರಿ. ಜನರನ್ನು ಮೂರ್ಖರನ್ನಾಗಿಸಲು ಪ್ರಯತ್ನಿಸಿದರೆ ಸಾಧ್ಯ ವಿಲ್ಲ. ಎರಡು ಬಾರಿ ಅಧಿಕಾರ ನಡೆಸಿದಾಗ, ಜನರ ಆಶೀರ್ವಾದದಿಂದ ಗೆದ್ದಿದ್ದೀರಾ, ಆಪರೇಶನ್ ಕಮಲ ಮಾಡಿ 18 ಕ್ಷೇತ್ರಗಳನ್ನು ಗೆದ್ದಿರಿ ಎಂದು ಬಿಜೆಪಿಯನ್ನು ಟೀಕಿಸಿದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುತ್ರನ ವಿರುದ್ಧ ಚುನಾವಣೆ ಗೆಲ್ಲಬೇಕಾದರೆ ಎಲ್ಲಾ ಜಾತಿ ಜನರು ಮತ ನೀಡಿದ್ದರಿಂದ ಸಾಧ್ಯವಾಯಿತು, ನಾವು ಅಪರೇಶನ್ ಕಾಂಗ್ರೆಸ್ ಮಾಡಿಲ್ಲ, ನಾವು ಗ್ಯಾರಂಟಿ ಕೊಡದೇ ಹೋಗಿದ್ದರೆ ಬಡವರು ಮತ ಹಾಕುತ್ತಿರಲಿಲ್ಲ, ಮಧ್ಯವರ್ತಿಗಳಿಲ್ಲದೇ ನೇರವಾಗಿ ಫಲಾನುಭವಿಗಳ ಖಾತೆಗೆ ತಲುಪುವ ಈ ಯೋಜನೆಗಳು ಬಡವರ ಬದುಕಿಗೆ ಭರವಸೆ ನೀಡಿವೆ ಎಂದರು.

ಸಂಪೂರ್ಣ ಹತ್ತಿಕ್ಕುವುದು ನಮ್ಮ ಗುರಿ

ನಮ್ಮ ಪೊಲೀಸರು ನಿವಾರಿಸಿದ್ದಾರೆ. ನಾವು ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೇ ಮಾದಕದ್ರವ್ಯ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಪಣತೊಟ್ಟು, ಡ್ರಗ್ಸ್ ಮಾರಾಟ ಮತ್ತು ಸೇವನೆಯ ವಿರುದ್ಧ ಸಮರ ಸಾರಿದ್ದೇವೆ. ಕೆಲವು ತಿಂಗಳ ಹಿಂದಷ್ಟೇ ಮಂಗಳೂರಿಗೆ ತಾವು ಭೇಟಿ ನೀಡಿದ್ದ ವೇಳೆ, ಡ್ರಗ್ಸ್ ಹಾವಳಿ ತಡೆಗಟ್ಟಿ ಸ್ವಸ್ಥ ಪರಿಸರ ಕಟ್ಟಿಕೊಡುವ ವಾಗ್ದಾನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ನೀಡಿದ್ದೆವು, ಇದರ ಪ್ರಯತ್ನದ ಭಾಗವಾಗಿ ಬಹುದೊಡ್ಡ ಡ್ರಗ್ಸ್ ಜಾಲವೊಂದನ್ನು ಪತ್ತೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಶೇ.90ರಷ್ಟು ಜನರ ನಿರ್ಲಕ್ಷಿಸಿದೆ

ಕೊಳ್ಳುವ ಶಕ್ತಿ ಹೆಚ್ಚು ಮಾಡುವ ಸಾರ್ವತ್ರಿಕ ಮೂಲ ಆದಾಯ ತತ್ವ ಅಗತ್ಯ. ಆರ್ಥಿಕ, ಸಾಮಾಜಿಕ ಶಕ್ತಿ ತುಂಬಿದರೆ ಜನರ ಹಾಗೂ ರಾಜ್ಯದ ಅಭಿವೃದ್ಧಿ ಸಾಧ್ಯ, ಗ್ಯಾರಂಟಿ ಯೋಜನೆಗಳಿಂದ ಬಡವರಲ್ಲಿ ಆತ್ಮವಿಶ್ವಾಸ, ಸ್ವಾಭಿಮಾನ ಹೆಚ್ಚುತ್ತಿದೆ. ಜನರ ಸಾಮಾಜಿಕ, ಆರ್ಥಿಕ ಬದುಕು ಸುಧಾರಣೆಯಾಗಿದೆ, ಸಮಾನತೆಯ ಭಾವ ಉಂಟಾಗುತ್ತಿದೆ ಎಂದರು. ಬಿಜೆಪಿ ಅಧಿಕಾರದಲ್ಲಿದ್ದಾಗ ಕ್ಯಾಪಿಟಲ್ ಹೂಡಿಕೆಗಳಿಗೆ 2,70,695 ಕೋಟಿ ರೂ. ಮೌಲ್ಯದ ಕಾಮಗಾರಿಗಳನ್ನು ಅನುದಾನ ಒದಗಿಸದೇ ತೆಗೆದುಕೊಂಡಿರಿ. ಮುಖ್ಯಮಂತ್ರಿಗಳ ವಿಶೇಷ ಅನುದಾನದ ಮೂಲಕ 1,66,426 ಕೋಟಿ ರೂ. ನೀಡಲಾಗಿದೆ, 36 ಸಾವಿರ ಕೋಟಿ ರೂ. ಬಾಕಿ ಬಿಲ್ ಬಿಜೆಪಿ ಬಳುವಳಿ ಎಂದು ಟೀಕಿಸಿದರು.

ಶೂಟ್; ಅನಾಹುತದ ಆತಂಕ



ಪೊಲೀಸರಿಗೆ ದೂರು ನೀಡಿ ಕ್ರಮ ಕೈಗೊಳ್ಳುತ್ತೇವೆ

ಯಾವುದೇ ಭದ್ರತೆ ಇಲ್ಲದೆ ವರುಣ ಕೆರೆಯಲ್ಲಿ ಪ್ರಿ ವೆಡ್ಡಿಂಗ್ ಶೂಟ್ ಮಾಡುತ್ತಿರುವ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಈ ಸಂಬಂಧ ನಮ್ಮ ಸಿಬ್ಬಂದಿ ಕಳುಹಿಸಿ ಮಾಹಿತಿ ಪಡೆದು, ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಜೊತೆಗೆ ಪೊಲೀಸರಿಗೂ ದೂರು ನೀಡುತ್ತೇವೆ.

- **ಕುಮಾರ್ ಆರಾಧ್ಯ,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ವರುಣ ಗ್ರಾಮ ಪಂಚಾಯಿತಿ

ಇನ್ನಿತರ ರಮಣೀಯ ಸ್ಥಳಗಳಿಗೆ ವ್ಯಾಪಿಸಿದೆ ಮುಂಜಾನೆ ಸೂರ್ಯೋದಯ ಹಾಗೂ ಸಂಜೆಯ ಸೂರ್ಯಾಸ್ತಮಾನದ ಹೊಂಗಿರಣದ ಹಿನ್ನೆಲೆಯಲ್ಲಿ ಜೋಡಿಗಳ ನಾನಾ ಭಂಗಿಯನ್ನು ಕ್ಯಾಮರಾ ಕಣ್ಣಿನಲ್ಲಿ ಸೆರೆ ಹಿಡಿಯಲಾಗುತ್ತಿದೆ. ವರುಣ ಕೆರೆಯ ಪ್ರಶಾಂತ ವಾತಾವರಣದಲ್ಲಿ ಸೂರ್ಯಾಸ್ತಮಾನದ ವೇಳೆ ಯುವ ಜೋಡಿ ಕೈ ಬೆರಳಿನಲ್ಲಿ ಹೃದಯದ ಚಿಹ್ನೆ ಪ್ರದರ್ಶಿಸುವ ದೃಶ್ಯವನ್ನು ಸಾಮಾನ್ಯವಾಗಿ ಸೆರೆ ಹಿಡಿದು ಜಾಲ ತಾಣದಲ್ಲಿ ಹಾಕಲಾಗುತ್ತಿದೆ.

ಜೆಎಸ್‌ಎಸ್ ಶಿಕ್ಷಕರ ನಗರಕ್ಕೆ ಹೋಗುವ ಮಾರ್ಗದ ವರುಣ ಕೆರೆ ಪಶ್ಚಿಮ ಹಾಗೂ ಪೂರ್ವ ಭಾಗದಲ್ಲಿ ಪ್ರೀ ವೆಡ್ಡಿಂಗ್ ಶೂಟಿಂಗ್ ನಿರಂತರವಾಗಿ ನಡೆಯುತ್ತಿದೆ ಯುವ ಜೋಡಿ, ದೋಣಿಯಲ್ಲಿ ವಿಹರಿಸುವ ದೃಶ್ಯಗಳ ಫೋಟೋ ಶೂಟ್ ನಿರಂತರವಾಗಿ ನಡೆಯುತ್ತಿದೆ.

ಪ್ರಮುಖ ಕೆರೆ, ನದಿಗಳಲ್ಲಿ ವಿಹರಿಸುವಾಗ ಲೈಫ್ ಜಾಕೆಟ್ ಧರಿಸುವುದು ಕಡ್ಡಾಯ. ಆದರೆ ಮದುವೆ ನಿಶ್ಚಯವಾದ ಜೋಡಿ ತಾವು ಧರಿಸಿರುವ ಅತ್ಯಾಕರ್ಷಕ ಡ್ರೆಸ್ ಮೇಲೆ ಲೈಫ್ ಜಾಕೆಟ್ ಧರಿಸಿದರೆ ಫೋಟೋ ಚೆನ್ನಾಗಿ ಬರುವುದಿಲ್ಲವೆಂದು, ಅದು ಇಲ್ಲದೆಯೇ ದೋಣಿಯಲ್ಲಿ ಸಾಗುತ್ತಾರೆ. ಇದೇ ರೀತಿ ತಲಕಾಡಲ್ಲಿ ನದಿಯಲ್ಲಿ ಫೋಟೋ ಶೂಟ್‌ಗೆ ಮುಂದಾದ ಕ್ಯಾತಮಾರನಹಳ್ಳಿ ಯುವ ಜೋಡಿ, ದೋಣಿ ಮುಳುಗಿ ಜಲಸಮಾಧಿಯಾದ ಪ್ರಕರಣ ಇನ್ನೂ ಜನರ ನೆನಪಲ್ಲಿದೆ.

ಒಳ್ಳೆಯ ದೃಶ್ಯ ಸೆರೆಯಾಗಲಿ ಎಂದು ವಿಡಿಯೋಗ್ರಾಫರ್/ಫೋಟೋಗ್ರಾಫರ್, ಜೋಡಿಯನ್ನು ನಾನಾ ಭಂಗಿಯಲ್ಲಿ ಪೋಸ್ ನೀಡುವಂತೆ ಹೇಳುವುದು ಸಾಮಾನ್ಯ ಆ ವೇಳೆ ದೋಣಿ ಮಗುಚಿದರೆ ರಕ್ಷಿಸುವವರು ಯಾರು? ಲೈಫ್ ಜಾಕೆಟ್ ಧರಿಸಿಯೂ ದೋಣಿಯಲ್ಲಿ ಹೋಗುವ ಸಂದರ್ಭದಲ್ಲಿ ಕೆರೆ ಮಧ್ಯೆ ಅನಾಹುತ ಸಂಭವಿಸಿದರೆ ಏನು ಗತಿ ಅಥವಾ ಕೆರೆ ಅಂಚಿನಲ್ಲೇ ಆಯತಪ್ಪಿ ಬಿದ್ದರೆ ಏನು ಮಾಡುವುದು ಎಂಬ ಹಲವು ಆತಂಕದ ಪ್ರಶ್ನೆಗಳು ಎದುರಾಗಿವೆ. ಇಂತಹ ಅನಾಹುತವಾಗುವ ಮುನ್ನ ಜಿಲ್ಲಾಡಳಿತ ಅಸುರಕ್ಷಿತ ದೋಣಿ ವಿಹಾರಕ್ಕೆ ಕಡಿವಾಣ ಹಾಕಬೇಕಿದೆ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಪ್ರತಿ ಜೋಡಿಗೆ 200 ರೂಪಾಯಿ ವಸೂಲಿ!

ವರುಣ ಕೆರೆಯಲ್ಲಿ ಪ್ರಿ ವೆಡ್ಡಿಂಗ್ ಶೂಟಿಂಗ್‌ಗೆ ಬರುವ ಜೋಡಿಗಳಿಂದ ಶಕ್ತಿ ಸ್ವರೂಪಿಣಿ ಹುಂಡಿ ಮಾರಮ್ಮನ ದೇವಸ್ಥಾನದವರು 200 ರೂಪಾಯಿ ವಸೂಲಿ ಮಾಡುತ್ತಿದ್ದಾರೆ. ಇದನ್ನು ದೇವಸ್ಥಾನದ ಅರ್ಚಕ ವಿ.ಎನ್.ಬಸವಣ್ಣ ಸ್ಪಷ್ಟಪಡಿಸಿದ್ದಾರೆ. ಆದರೆ, ವರುಣ ಗ್ರಾಮ ಪಂಚಾಯಿತಿ ಇಲ್ಲಿ ಅಗತ್ಯ ಎಲ್ಲಾ ಎಚ್ಚರಿಕಾ ಕ್ರಮ ಕೈಗೊಂಡು ಬೇಕಿದ್ದರೆ ಶುಲ್ಕ ಸಂಗ್ರಹಿಸಿ ಇಂತಿಷ್ಟು ಭಾಗವನ್ನು ದೇವಸ್ಥಾನಕ್ಕೆ ನೀಡಲಿ ಎಂಬುದು ವರುಣ ಪ್ರಶಾಂತ್ ಆಗ್ರಹ.

ಹೇಳಬೇಕೆಂದರೆ ವರುಣ ಕೆರೆಯಲ್ಲಿ ಶೂಟಿಂಗ್‌ಗೆ ಅವಕಾಶವನ್ನೇ ನೀಡಬಾರದು. ಚಿತ್ರೀಕರಣದ ಗುಂಗಿನಲ್ಲಿ ನೀರಿನಲ್ಲಿ ಬಿದ್ದರೆ ಏನು ಮಾಡುವುದು ಎಂದು ಅವರು ಪ್ರಶ್ನಿಸಿದ್ದಾರೆ. ಆದರೆ, ಗ್ರಾಮ ಪಂಚಾಯಿತಿ, ಪೊಲೀಸ್, ನೀರಾವರಿ ಇಲಾಖೆ ಇದರ ಬಗ್ಗೆ ತಮಗೇನು ತಿಳಿದೇ ಇಲ್ಲ ಎಂದು ಜಾಣ ಮೌನ ವಹಿಸಿದ್ದಾರೆ.

ಇಂದು ಭೂಮಿಗೆ ವಾಪಸ್

ಮಂಗಳವಾರ ಸಂಜೆ 5.57ಕ್ಕೆ (ಭಾರತೀಯ ಕಾಲಮಾನ ಬುಧವಾರ ಬೆಳಗ್ಗೆ 3.27) ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಭೂಮಿಗೆ ತಲುಪಲಿದ್ದಾರೆ ಎಂದು ನಾಸಾ ತಿಳಿಸಿದೆ. ಸುನಿತಾ ಮತ್ತು ಬುಚ್ ಕಳೆದ ವರ್ಷ ಜೂನ್ 5ರಂದು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿದ್ದರು. ಅದಾದ ಬಳಿಕ ಕೇವಲ ವಾರದ ನಂತರ ಅವರು ಭೂಮಿಗೆ ಮರಳ ಬೇಕಿತ್ತು ಆದರೆ ಬೋಯಿಂಗ್ ಸ್ಟಾರ್‌ಲೈನರ್ ನಲ್ಲಿನ ಅಸಮರ್ಪಕ ಕಾರ್ಯದಿಂದಾಗಿ ಇಬ್ಬರೂ ಅಲ್ಲಿಯೇ ಸಿಲುಕಿಕೊಂಡರು. ಈಗ ಅವರನ್ನು ಮರಳಿ ತರಲು ಸ್ಪೇಸ್ ಎಕ್ಸ್ ಡ್ರ್ಯಾಗನ್ ಅನ್ನು ಬಳಸಲಾಗುತ್ತಿದೆ. ಇಬ್ಬರು ಗಗನಯಾತ್ರಿಗಳು ಮಂಗಳವಾರ ಸಂಜೆ ಇತರ ಇಬ್ಬರು ಪ್ರಯಾಣಿಕರೊಂದಿಗೆ ಭೂಮಿಗೆ ಮರಳಲಿದ್ದಾರೆ.

ಹತ್ತು ವರ್ಷದಲ್ಲಿ ಬ್ಯಾಂಕ್‌ಗಳಲ್ಲಿ 16.35 ಲಕ್ಷ ಕೋಟಿ ರೈಟ್ ಆಫ್

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಗೆ ಮಾಹಿತಿ

ನವದೆಹಲಿ, ಮಾ.17– ಕಳೆದ ಹತ್ತು ಆರ್ಥಿಕ ವರ್ಷಗಳಲ್ಲಿ ಬ್ಯಾಂಕ್‌ಗಳು ರೈಟ್ ಆಫ್ ಮಾಡಿರುವ ವಸೂಲಾಗದ ಸಾಲದ (ಎನ್‌ಪಿಎ) ಒಟ್ಟು ಮೊತ್ತವು ರೂ.16.35 ಲಕ್ಷ ಕೋಟಿ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ತಿಳಿಸಿದ್ದಾರೆ.

2023–24ರಲ್ಲಿ ಬ್ಯಾಂಕ್‌ಗಳು ಒಟ್ಟು ರೂ.1.70 ಲಕ್ಷ ಕೋಟಿ ಮೊತ್ತದ ವಸೂಲಾಗದ ಸಾಲವನ್ನು ರೈಟ್ ಆಫ್ ಮಾಡಿವೆ, 2022–23ರಲ್ಲಿ ರೈಟ್ ಆಫ್ ಆದ ವಸೂಲಾಗದ ಸಾಲದ ಮೊತ್ತ ರೂ.2.16 ಲಕ್ಷ ಕೋಟಿ ಎಂದು ನಿರ್ಮಲಾ ಮಾಹಿತಿ ನೀಡಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾರ್ಗಸೂಚಿ ಹಾಗೂ ಆಡಳಿತ ಮಂಡಳಿ ಒಪ್ಪಿದ



ನೀತಿಗೆಅನುಗುಣವಾಗಿ ಬ್ಯಾಂಕ್‌ಗಳು ತಾವು ನೀಡಿದ ಸಾಲವು ವಸೂಲಾಗದ ಸಾಲ ಎಂದು ವರ್ಗೀಕರಣ ಆದ ನಾಲ್ಕು ವರ್ಷಗಳ ನಂತರ, ಆ ಸಾಲವನ್ನು ರೈಟ್ ಆಫ್ ಮಾಡುತ್ತವೆ ಎಂದು ಸಚಿವೆ ವಿವರಿಸಿದ್ದಾರೆ. ರೈಟ್ ಆಫ್ ಅಂದರೆ ಸಾಲ ಪಡೆದವನ ಹೊಣೆಯೇನೂ ತಗ್ಗುವುದಿಲ್ಲ. ಆತನಿಗೆ ಇದರಿಂದ ಲಾಭವೇನೂ ಆಗುವುದಿಲ್ಲ. ಬ್ಯಾಂಕ್‌ಗಳು ಸಾಲ ವಸೂಲಾತಿ ಪ್ರಕ್ರಿಯೆ ಯನ್ನು ವಿವಿಧ ಮಾರ್ಗಗಳ ಮೂಲಕ ಮುಂದುವರಿಸುತ್ತವೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಆರ್‌ಬಿಐ ನೀಡಿರುವ ಮಾಹಿತಿ ಪ್ರಕಾರ 2024ರ ಡಿಸೆಂಬರ್ 31ರವರೆಗೆ ವಾಣಿಜ್ಯ ಬ್ಯಾಂಕ್‌ಗಳಲ್ಲಿ ತಲಾ ರೂ.1,000 ಕೋಟಿಗಿಂತ ಹೆಚ್ಚು ಸಾಲ ಪಡೆದು ಅದನ್ನು ಸರಿಯಾಗಿ ಮರಳಿಸದ 29 ಕಂಪನಿಗಳು ದೇಶದಲ್ಲಿವೆ. ಈ ಕಂಪನಿಗಳ ಸಾಲ ಖಾತೆಯನ್ನು 'ವಸೂಲಾಗದ ಸಾಲ' ಎಂದು ವರ್ಗೀಕರಿಸಲಾಗಿದೆ. ಇಂತಹ ಕಂಪನಿಗಳಿಂದ ಮರುಪಾವತಿ ಆಗಬೇಕಿರುವ ಸಾಲದ ಒಟ್ಟು ಮೊತ್ತ ರೂ.61,027 ಕೋಟಿ.

'ವಸೂಲಾಗದ' ಎಂದು ವರ್ಗೀಕೃತ ಆಗಿರುವ ಸಾಲ ಖಾತೆಗಳ ವಿಚಾರದಲ್ಲಿ ಬ್ಯಾಂಕ್‌ಗಳು ತಮ್ಮ ಆಡಳಿತ ಮಂಡಳಿಯ ಅನುಮೋದನೆ ಇರುವ ನೀತಿಗಳಿಗೆ ಅನುಗುಣವಾಗಿ ವಸೂಲಿ ಕ್ರಮ ಜರುಗಿಸುತ್ತವೆ. ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡುವುದು, ಸಾಲ ವಸೂಲಾತಿ ನ್ಯಾಯಮಂಡಳಿಯ ಮೊರೆ ಹೋಗುವುದು ಸೇರಿದಂತೆ ವಿವಿಧ ಆಯ್ಕೆಗಳು ಬ್ಯಾಂಕ್‌ಗಳಿಗೆ ಇರುತ್ತವೆ ಎಂದು ನಿರ್ಮಲಾ ಅವರು ಹೇಳಿದ್ದಾರೆ.

ಸ್ವಚ್ಛತಾ ಕಾರ್ಯ ಆರಂಭ

ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಇಂಜಿನಿಯರ್ಸ್ ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ಹೆಬ್ಬಾಳು ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ತಕ್ಷಣ ಸ್ವಚ್ಛತಾ ಕಾರ್ಯ ಕೈಗೊಳ್ಳುವಂತೆ ಸೂಚಿಸಿದ್ದರು. ಅದೇ ರೀತಿ ಮಲಿನ ನೀರು ಕೆರೆಗೆ ಹಾದು ಹೋಗದಂತೆ ತಡೆಯಲು ಕ್ರಿಯಾ ಯೋಜನೆ ಸಿದ್ಧಪಡಿಸಲು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದ ಜಿಲ್ಲಾಧಿಕಾರಿಗಳು, ಒಳಚರಂಡಿ ನೀರು ಸರಾಗವಾಗಿ ಹರಿದು ಹೋಗಲು ಅಗತ್ಯ ಪರ್ಯಾಯ ಕ್ರಮ ವಹಿಸುವಂತೆಯೂ ನಿರ್ದೇಶನ ನೀಡಿದರು.

ಫ್ಲೋಟಿಂಗ್ ಟ್ರ್ಯಾಷ್ ಬ್ಯಾರಿಯರ್: ಹೆಬ್ಬಾಳು ಕೆರೆಯನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಿರುವ ಹೂಟಗಳ್ಳಿ ನಗರಸಭೆ ಆಯುಕ್ತ ಬಿ.ಎನ್.ಚಂದ್ರಶೇಖರ್, ನಿತ್ಯ ಮೋಟಾರ್ ಬೋಟ್ ಮತ್ತು ಫ್ಲೋಟಿಂಗ್ ಟ್ರ್ಯಾಷ್ ಬ್ಯಾರಿಯರ್ ಬಳಸಿ ನೀರಿನಲ್ಲಿರುವ ವಾಟರ್ ಪ್ಲಾಂಟ್, ನಾನಾ ರೀತಿಯ ಬಾಟಲಿಗಳು, ಮೆಟಲ್ ತ್ಯಾಜ್ಯವನ್ನು ತೆರವುಗೊಳಿಸುತ್ತಿದ್ದಾರೆ.

ಪ್ರತೀದಿನ ಬೆಳಗ್ಗೆಯಿಂದ ಸಂಜೆವರೆಗೂ 10ರಿಂದ 15 ಮಂದಿ ಕೆರೆ ಸ್ವಚ್ಛಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದು, ಒಂದು ವಾರದೊಳಗೆ ಅಲ್ಲಿನ ವಾಟರ್ ಪ್ಲಾಂಟ್ಸ್ ಹಾಗೂ ಇತರ ತ್ಯಾಜ್ಯಗಳನ್ನು ತೆರವುಗೊಳಿಸಲಾಗುವುದು ಎಂದು ಆಯುಕ್ತರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅದೇ ರೀತಿ ತಮ್ಮ ನಗರಸಭಾ ವ್ಯಾಪ್ತಿಯ ಕೈಗಾರಿಕೆಗಳಲ್ಲಿ ಉತ್ಪತ್ತಿ ಯಾಗುವ ರಾಸಾಯನಿಕ ತ್ಯಾಜ್ಯ ಕೆರೆಗೆ ಸೇರದಂತೆ ಬಂದ್ ಮಾಡಿ ಬದಲಿ ಪರ್ಯಾಯ ವ್ಯವಸ್ಥೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಸಾರಾ ಕನ್‌ವೆನ್ಷನ್ ಹಾಲ್ ಸಂಬಂಧ ತನಿಖೆಗೆ ಆದೇಶ

ಮೈಸೂರು, ಮಾ.17– ಇಲ್ಲಿನ ದಟ್ಟಗಳ್ಳಿಯಲ್ಲಿರುವ ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷ, ಮಾಜಿ ಸಚಿವ ಸಾ.ರಾ.ಮಹೇಶ್ ಕುಟುಂಬದ ಒಡೆತನದ 'ಸಾರಾ ಕನ್‌ವೆನ್ಷನ್ ಹಾಲ್' ನಿರ್ಮಾಣದ ಕುರಿತು ತನಿಖೆಗೆ ಸರ್ಕಾರವು ಆದೇಶಿಸಿದೆ.



ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಕೆ. ಲತಾ, ಅಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತರಿಗೆ ಮಾರ್ಚ್ 10ರಂದು ಪತ್ರ ಬರೆದಿದ್ದಾರೆ.

ದಟ್ಟಗಳ್ಳಿಯ ಸರ್ವೆ ಸಂಖ್ಯೆ 130/3ರಲ್ಲಿ 2 ಎಕರೆ 15 ಗುಂಟೆ ಜಾಗದಲ್ಲಿ ಮಾಲೀಕರು ಕಾನೂನು ಬಾಹಿರವಾಗಿ ಕಟ್ಟಡ ನಿರ್ಮಿಸಿದ್ದು, ಇದಕ್ಕೆ ಅಧಿಕಾರಿಗಳು ಸಹಕರಿಸಿದ್ದಾರೆ ಎಂದು ಗಂಗರಾಜು ಎಂಬುವರು ಮುಖ್ಯಮಂತ್ರಿಗಳಿಗೆ ದೂರು ಸಲ್ಲಿಸಿದ್ದಾರೆ. ಈ ದೂರಿನ ಕುರಿತು ಆಯುಕ್ತರ ಮಟ್ಟದಲ್ಲಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಪತ್ರದಲ್ಲಿ ಸೂಚಿಸಿದ್ದಾರೆ.

ದೂರು: ಸಾ.ರಾ. ಮಹೇಶ್ ಪತ್ನಿ ಅನಿತಾ ಮಹೇಶ್ ಅವರು ಕಾನೂನುಬಾಹಿರವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಷ್ಟ ಉಂಟು ಮಾಡಿ, ದಟ್ಟಗಳ್ಳಿಯಲ್ಲಿ ಅಕ್ರಮವಾಗಿ ವಾಣಿಜ್ಯ ಕಟ್ಟಡವನ್ನು ನಿರ್ಮಿಸಿದ್ದಾರೆ. ನಿರ್ಮಾಣದ ವೇಳೆ ನಿಯಮಗಳನ್ನು ಉಲ್ಲಂಘಿಸಿದ್ದು, ಮುಡಾ ಆಸ್ತಿ ಅತಿಕ್ರಮಿಸಲಾಗಿದೆ. ಇದಕ್ಕೆ ಜಿಲ್ಲಾಡಳಿತ ಹಾಗೂ ಮುಡಾದ ಹಿರಿಯ ಅಧಿಕಾರಿಗಳು ಸಹಕರಿಸಿದ್ದಾರೆ. ಒತ್ತುವರಿ ಕುರಿತು ತನಿಖೆ ನಡೆಸಬೇಕು. ಅಕ್ರಮಕ್ಕೆ ಸಹಕರಿಸಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಎನ್. ಗಂಗರಾಜು ಕಳೆದ ಫೆ.9ರಂದು ಮುಖ್ಯಮಂತ್ರಿ ಕಚೇರಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದರು.

ಮಾನವನ ಬಹುದೊಡ್ಡ ನಿಧಿ ಆಧ್ಯಾತ್ಮ



ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಭಾರತೀಯ ವಿದ್ಯಾ ಭವನದ ಮುಂಭಾಗ ಏರ್ಪಡಿಸಿದ್ದ ಜ್ಞಾನವಿಜ್ಞಾನ ದಿವ್ಯ ದರ್ಶನ ಮೇಳದಲ್ಲಿ ಭಾರತ ಯುವಕರು ಆಧ್ಯಾತ್ಮ ಮತ್ತು ರಾಷ್ಟ್ರೀಯ ಮೌಲ್ಯಗಳು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಸಂಸ್ಕೃತಿ ಚಿಂತಕ ಸುರೇಶ್ ಎನ್.ಋಗ್ವೇದಿ ಉದ್ಘಾಟಿಸಿದರು.

ಮೈಸೂರು, ಮಾ. 17– ಮಾನವನ ಬಹುದೊಡ್ಡ ನಿಧಿ ಆಧ್ಯಾತ್ಮ. ಮಾನವ ಆಧ್ಯಾತ್ಮ ಜೀವನದಿಂದ ಮಾತ್ರ ಉನ್ನತ ಶ್ರೇಯಸ್ಸು, ಶಾಂತಿ ನೆಮ್ಮದಿ ಹಾಗೂ ಜೀವನ ಮೌಲ್ಯವನ್ನು ಆನಂದಿಸ ಬಹುದು ಎಂದು ಸಂಸ್ಕೃತಿ ಚಿಂತಕ ಯುವ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು 89ನೇ ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಅಂಗವಾಗಿ ಹುಣಸೂರು ರಸ್ತೆಯಲ್ಲಿರುವ ಭಾರತೀಯ ವಿದ್ಯಾ ಭವನದ ಮುಂಭಾಗ ಏರ್ಪಡಿಸಿದ್ದ ಜ್ಞಾನವಿಜ್ಞಾನ ದಿವ್ಯ ದರ್ಶನ ಮೇಳದಲ್ಲಿ ಭಾರತ ಯುವಕರು ಆಧ್ಯಾತ್ಮ ಮತ್ತು ರಾಷ್ಟ್ರೀಯ ಮೌಲ್ಯಗಳು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಹೆಣ್ಣು ಹೊನ್ನು ಮಣ್ಣು ಆಸೆ ಪಡದೆ ದುರಾಸೆಯಿಂದ ನಮ್ಮ ಜೀವನವನ್ನು ನಿಶ್ಯಕ್ತವಾಗಿ ಮಾಡಿಕೊಳ್ಳಬಾರದು. ಯುವಕರು ವ್ಯಸನಗಳಿಗೆ ದಾಸರಾಗದೆ ಶ್ರೇಷ್ಠ ಪರಂಪರೆಯಾದ ಸಂಸ್ಕೃತಿ ಆಧ್ಯಾತ್ಮ, ಪರಂಪರೆ ದೇಶದ ನಿಜವಾದ ಇತಿಹಾಸವನ್ನು ಅರಿಯುವ ಮೂಲಕ ಆತ್ಮ ಗೌರವದ ಭಾರತವನ್ನು ಹೆಮ್ಮೆಯ ಭಾರತವನ್ನಾಗಿ ರೂಪಿಸಿ ಜಗತ್ತಿಗೆ ಹಾಗೂ ವಿಶ್ವ ಸಮಾಜಕ್ಕೆ ಕೊಡುಗೆ ನೀಡುವ ಅನಿವಾರ್ಯವಿದೆ. ಭಾರತದ ಯುವಶಕ್ತಿ ಆ ಕಾರ್ಯದಲ್ಲಿ ಸಾಗಬೇಕಿದೆ ಎಂದು ತಿಳಿಸಿದರು.

ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಂಗನಾಥಣ್ಣ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿವಿ ಮುಖ್ಯಸ್ಥರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಶಾರದಕ್ಕನವರು, ಬಿಕೆ ಆರಾಧ್ಯ ಮುಂತಾದವರು ಉಪಸ್ಥಿತರಿದ್ದರು.

ಅಯೋಧ್ಯೆ ರಾಮಮಂದಿರದಿಂದ 400 ಕೋಟಿ ರೂ. ತೆರಿಗೆ ಪಾವತಿ

ಅಯೋಧ್ಯೆ, ಮಾ.17– ದೇಶದ ಧಾರ್ಮಿಕ ಪ್ರವಾಸೋದ್ಯಮ ಆದಾಯದಲ್ಲಿ ಭಾರಿ ಏರಿಕೆ ಕಂಡುಬಂದಿದ್ದು, ಕಳೆದ ಐದು ವರ್ಷಗಳ ಅವಧಿಯಲ್ಲಿ ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಸರ್ಕಾರಕ್ಕೆ ಸುಮಾರು 400 ಕೋಟಿ ರೂ. ತೆರಿಗೆ ಪಾವತಿಸಿದೆ.

ಈ ಬಗ್ಗೆ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಕಾರ್ಯದರ್ಶಿ ಚಂಪತ್ ರೈ ಮಾಹಿತಿ ನೀಡಿದ್ದು, ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಕಳೆದ ಐದು ವರ್ಷಗಳಲ್ಲಿ ಸರ್ಕಾರಕ್ಕೆ ಸುಮಾರು 400 ಕೋಟಿ ರೂಪಾಯಿ ತೆರಿಗೆ ಪಾವತಿಸಿದೆ ಎಂದು ಹೇಳಿದರು.

ಇದರಲ್ಲಿ 270 ಕೋಟಿ ರೂಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಆಗಿ ಪಾವತಿಸಲಾಗಿದ್ದು, ಉಳಿದ 130 ಕೋಟಿ ರೂಗಳನ್ನು ವಿವಿಧ ತೆರಿಗೆ ವರ್ಗಗಳ ಅಡಿಯಲ್ಲಿ ಪಾವತಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.



ಟ್ರಸ್ಟ್‌ನ ಹಣಕಾಸು ದಾಖಲೆಗಳನ್ನು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅಧಿಕಾರಿಗಳು ನಿಯಮಿತವಾಗಿ ಲೆಕ್ಕಪರಿಶೋಧಿಸುತ್ತಾರೆ ಎಂದು ಚಂಪತ್ ರೈ ಹೇಳಿದರು.

ಅಯೋಧ್ಯೆ ಯಾತ್ರಾರ್ಥಿಗಳ ಸಂಖ್ಯೆ 10 ಪಟ್ಟು ಹೆಚ್ಚಳ: ಇದೇ ವೇಳೆ ಅಯೋಧ್ಯೆಯ ಭಕ್ತರು ಮತ್ತು ಪ್ರವಾಸಿಗರಲ್ಲಿ ಹತ್ತು ಪಟ್ಟು ಹೆಚ್ಚಳ ಕಂಡಿದ್ದು, ಇದು ಪ್ರಮುಖ ಧಾರ್ಮಿಕ ಪ್ರವಾಸೋದ್ಯಮ ಕೇಂದ್ರವಾಗಿ ಮಾರ್ಪಟ್ಟಿದೆ. ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ ಎಂದು ಚಂಪತ್ ರೈ ಅವರು ಹೇಳಿದರು. ಅಂತೆಯೇ ಮಹಾಕುಂಭದ ಸಮಯದಲ್ಲಿ 1.26 ಕೋಟಿ ಭಕ್ತರು ಅಯೋಧ್ಯೆಗೆ ಭೇಟಿ ನೀಡಿದ್ದಾರೆ ಎಂದು ಚಂಪತ್ ರೈ ಹೇಳಿದರು.

ಕಳೆದ ವರ್ಷ, ಅಯೋಧ್ಯೆಗೆ 16 ಕೋಟಿ ಭಕ್ತರು ಆಗಮಿಸಿದ್ದು, 5 ಕೋಟಿ ಜನರು ರಾಮ ದೇವಾಲಯಕ್ಕೆ ಭೇಟಿ ನೀಡಿ ದರ್ಶನ ಪಡೆದಿದ್ದಾರೆ ಎಂದು ಟ್ರಸ್ಟ್‌ನ ಮೂಲಗಳು ತಿಳಿಸಿವೆ.

ಚಿಕ್ಕಮಗಳೂರಲ್ಲಿ ಮಂಗನ ಕಾಯಿಲೆಗೆ ಮಹಿಳೆ ಸಾವು

ಚಿಕ್ಕಮಗಳೂರು, ಮಾ.17– ರಾಜ್ಯದಲ್ಲಿ ಮಂಗನ ಕಾಯಿಲೆ ಭೀತಿ ಹೆಚ್ಚಾಗಿದ್ದು, ಮಂಗನ ಕಾಯಿಲೆಯಿಂದಾಗಿ ಚಿಕ್ಕಮಗಳೂರಿನಲ್ಲಿ ಸೋಮವಾರ 65 ವರ್ಷದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಎನ್.ಆರ್.ಪುರ ತಾಲೂಕಿನ ಕಟ್ಟಿನಮನೆ ಗ್ರಾಮದ ನಿವಾಸಿ ಕಮಲಾ ಮೃತ ದುರ್ದೈವಿಯಾಗಿದ್ದು, ಇವರು ಮೇಲ್ಪಾಲ್ ಗ್ರಾಮದ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಮಂಗನ ಕಾಯಿಲೆಯಿಂದ ಬಳಲುತ್ತಿದ್ದ ಕಮಲಾ ಅವರು ಕೊಪ್ಪ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಮಂಗನ ಕಾಯಿಲೆ ಜತೆಗೆ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಇದ್ದ ಹಿನ್ನೆಲೆ ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಮೃತಪಟ್ಟಿದ್ದಾರೆ.

ಮಲೆನಾಡು ಭಾಗದಲ್ಲಿ ಮಂಗನ ಕಾಯಿಲ್ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದ್ದು, ಈ ವರ್ಷ ಮೊದಲ ಬಲಿ ಪಡೆದುಕೊಂಡಿದೆ.

ಮಂಗನ ಕಾಯಿಲೆ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದ್ದು, ಕಾಫಿ ತೋಟದ ಕಾರ್ಮಿಕರಲ್ಲೇ ಹೆಚ್ಚಾಗಿ ಕಾಣಿಸುತ್ತಿದೆ. ಕಾಫಿನಾಡು ಚಿಕ್ಕಮಗಳೂರು ಜಿಲ್ಲೆಯಲ್ಲಿ 51 ಜನರಿಗೆ ಮಂಗನ ಕಾಯಿಲೆ ದೃಢವಾಗಿದೆ. ಕೊಪ್ಪ, ಎನ್.ಆರ್.ಪುರ ತಾಲೂಕಿನಲ್ಲಿ ಮಂಗನ ಕಾಯಿಲೆ ಹೆಚ್ಚುತ್ತಿದೆ. ಹೀಗಾಗಿ, ಮಲೆನಾಡು ತಾಲೂಕುಗಳಲ್ಲಿ ಅಲರ್ಟ್ ಘೋಷಿಸಲಾಗಿದೆ. ಮಂಗನ ಕಾಯಿಲೆಗೆ ಚಿಕಿತ್ಸೆ ನೀಡಲು ಆರೋಗ್ಯ ಇಲಾಖೆ ಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತ್ಯೇಕ ವಾರ್ಡ್ ತೆರೆದಿದೆ.

ದ್ವೇಷ ಭಾಷಣ ಆರೋಪ; ಚಕ್ರವರ್ತಿ ಸೂಲಿಬೆಲೆ ವಿರುದ್ಧ ಎಫ್‌ಐಆರ್

ಮಂಗಳೂರು. ಮಾ.17– ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕಾಂಗ್ರೆಸ್ ನಾಯಕರೊಬ್ಬರು ನೀಡಿದ ದೂರಿನ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಧರ್ಮ–ಧರ್ಮಗಳ ನಡುವೆ ದ್ವೇಷ ಪ್ರಚೋದನೆ ಆರೋಪದಡಿ ಸೂಲಿಬೆಲೆ ವಿರುದ್ಧ ದೂರು ದಾಖಲಾಗಿದೆ. ಮಾರ್ಚ್ 9ರಂದು ವಿಹೆಚ್‌ಪಿ ಆಯೋಜಿಸಿದ್ದ ಕೊರಗಜ್ಜನ ಆದಿಕ್ಷೇತ್ರಕ್ಕೆ ನಮ್ಮನಡೆ



ಪಾದಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ್ದ ಸೂಲಿಬೆಲೆ ಅವರು, ಅನ್ಯ ಧರ್ಮಿಯರನ್ನು ಪ್ರೀತಿಸಿ ಮದುವೆಯಾಗಿ ಎಂದು ಕರೆ ನೀಡಿದ್ದರು. ಇದು ಭಾರಿ ವಿವಾದ ಸೃಷ್ಟಿಸಿತ್ತು. ಈ ಸಂಬಂಧ ಇದೀಗ ಪ್ರಚೋದನಕಾರಿ ಭಾಷಣ ಮಾಡಿ, ಕೋಮು ದ್ವೇಷಕ್ಕೆ ಕಾರಣರಾಗಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡ ರಶೀದ್ ಉಳ್ಳಾಲ ಠಾಣೆಗೆ ದೂರು ನೀಡಿದ್ದು, ಈ ದೂರಿನ ಮೇರೆಗೆ ಉಳ್ಳಾಲ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮಾ.31ರವರೆಗೆ ಅಂಚೆ ಜೀವವಿಮೆ ಪ್ರೀಮಿಯಂ ರಿಯಾಯಿತಿ ಅಭಿಯಾನ

ಮೈಸೂರು, ಮಾ. 17– ಸ್ಥಗಿತಗೊಂಡಿರುವ ಅಂಚೆ ಜೀವ ವಿಮೆ ಮತ್ತು ಗ್ರಾಮೀಣ ಅಂಚೆ ಜೀವ ವಿಮಾ ಪಾಲಿಸಿಗಳನ್ನು ಪುನರುಜ್ಜೀವನ (ರಿವೈವಲ್) ವನ್ನು ಉತ್ತೇಜಿಸುವ ಸಲುವಾಗಿ ಅಂಚೆ ಇಲಾಖೆಯು ಮಾ.31ರವರೆಗೂ ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿದೆ ಎಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ.ಹರೀಶ್ ತಿಳಿಸಿದ್ದಾರೆ.

ಸಾರ್ವಜನಿಕರು ತಮ್ಮ ಸ್ಥಗಿತಗೊಂಡ ಪಿಎಲ್‌ಐ ಮತ್ತು ಆರ್‌ಪಿಎಲ್‌ಐ ಪಾಲಿಸಿಗಳನ್ನು ಈ ಅವಧಿಯಲ್ಲಿ ಪುನರುಜ್ಜೀವನ ಮಾಡಿಸಿಕೊಂಡರೆ ನಿಯೋಜಿತ ಶುಲ್ಕದ ಮೇಲೆ ಭಾರಿ ಪ್ರಮಾಣದ ವಿನಾಯಿತಿ ಘೋಷಿಸಲಾಗಿದೆ. ಸ್ಥಗಿತಗೊಂಡಿರುವ ಪಾಲಿಸಿಗಳ ಪ್ರೀಮಿಯಂ ಅನ್ನು ಒಂದೇ ಕಂತಿನಲ್ಲಿ ಪಾವತಿಸುವವರಿಗೆ ಮಾತ್ರ ಈ ರಿಯಾಯಿತಿ ಲಭ್ಯವಾಗಲಿದೆ ಎಂದಿದ್ದಾರೆ.

ಒಟ್ಟು ಪ್ರೀಮಿಯಂ ಮೊತ್ತ ಒಂದು ಲಕ್ಷ ರೂ.ಗಳವರೆಗೆ ಬಾಕಿ ಇದ್ದರೆ ನಿಯೋಜಿತ ಶುಲ್ಕದ ಮೇಲೆ ಶೇ.25ರಷ್ಟು ಅಂದರೆ ರೂ.2500 ರೂ.ಗಳ ರಿಯಾಯಿತಿ, 1 ಲಕ್ಷದಿಂದ 3 ಲಕ್ಷದವರೆಗೂ ಪ್ರೀಮಿಯಂ ಪಾವತಿಸಿದರೆ ನಿಯೋಜಿತ ಶುಲ್ಕದ ಮೇಲೆ ಶೇ.25ರಷ್ಟು, ಅಂದರೆ ರೂ. 3000 ರಿಯಾಯಿತಿ ಹಾಗೂ 3 ಲಕ್ಷಕ್ಕೂ ಮೇಲ್ಪಟ್ಟು ಪ್ರೀಮಿಯಂ ಅನ್ನು ಪಾವತಿಸಿದರೆ ನಿಯೋಜಿತ ಶುಲ್ಕದ ಮೇಲೆ ಶೇ.30 ರಷ್ಟು ರಿಯಾಯಿತಿ ದೊರೆಯಲಿದೆ. ವಿವರಗಳಿಗೆ ಸಮೀಪದ ಅಂಚೆ ಕಚೇರಿಗೆ ಭೇಟಿ ನೀಡಿ, ಅಭಿಯಾನದ ಪ್ರಯೋಜನ ಪಡೆದುಕೊಳ್ಳಬಹುದೆಂದು ತಿಳಿಸಿದ್ದಾರೆ.

ಮಂಕುತಿಮ್ಮನ ಕಗ್ಗ ಬದುಕಿಗೆ ದಾರಿದೀಪ



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನ ಮುಂಭಾಗದ ಉದ್ಯಾನವನದಲ್ಲಿ ಕನ್ನಡದ ಆಧುನಿಕ ಸರ್ವಜ್ಞ ಡಿ.ವಿ.ಗುಂಡಪ್ಪ ಅವರ 138ನೇ ಜನ್ಮದಿನವನ್ನು ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಆಚರಿಸಲಾಯಿತು.

ಮೈಸೂರು,ಮಾ.17–ಡಿವಿಜಿಯವರ ಮೇರುಕೃತಿಗಳಲ್ಲೊಂದಾದ ಮಂಕುತಿಮ್ಮನ ಕಗ್ಗವು ಆಧುನಿಕ ಭಗವದ್ಗೀತೆಯೆಂದೇ ಜನಪ್ರಿಯವಾಗಿದ್ದು, ಅದರಲ್ಲಿರುವ ಪ್ರತಿಯೊಂದು ಮುಕ್ತಕಗಳೂ ಬದುಕಿಗೆ ದಾರಿದೀಪದಂತಿವೆ ಎಂದು ಹಿರಿಯ ಸಮಾಜ ಸೇವಕರಾದ ಕೆ. ರಘುರಾಮ್ ವಾಜಪೇಯಿ ಹೇಳಿದರು.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನದ ಮುಂಭಾಗದ ಉದ್ಯಾನವನದಲ್ಲಿ ಅಪೂರ್ವ ಸ್ನೇಹ ಬಳಗದ ವತಿಯಿಂದ ಮಂಕುತಿಮ್ಮನ ಕಗ್ಗ ಕಾವ್ಯದಿಂದ ಲೋಕ ವಿಖ್ಯಾತರಾದ ಕನ್ನಡದ ಆಧುನಿಕ ಸರ್ವಜ್ಞ ಡಿ.ವಿ.ಗುಂಡಪ್ಪ (ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ) 138 ನೇ ಜನ್ಮ ದಿನಾಚರಣೆಯಲ್ಲಿ ವಿವಿಧ ಜಾತಿಯ ಗಿಡಗಳನ್ನು ನೆಟ್ಟು, ನೀರು ಹಾಕಿ ಮಾತನಾಡಿದ ಅವರು, ಡಿ.ವಿ.ಗುಂಡಪ್ಪನವರು ಮಹಾನ್ ದಾರ್ಶನಿಕರಾಗಿದ್ದರು. ಕವಿ, ಸಾಹಿತಿ, ಪತ್ರಕರ್ತರಾಗಿ ಅವರ ಕೊಡುಗೆಗಳು ಅಪಾರವಾದುದು. ಮಂಕುತಿಮ್ಮನ ಕಗ್ಗವಂತೂ ಅತ್ಯಂತ ಜನಪ್ರಿಯ ಕೃತಿಯಾಗಿದ್ದು, ಇಂದಿಗೂ ಎಲ್ಲೆಲ್ಲೂ ಅದರ ಮುಕ್ತಕಗಳು ಕೇಳಿಬರುತ್ತಿವೆ. ಬದುಕಿಗೆ ಸ್ಫೂರ್ತಿ ತುಂಬುವ ಕಗ್ಗವನ್ನು ಮತ್ತಷ್ಟು ಪ್ರಚಾರ ಮಾಡಬೇಕು ಎಂದರು.

ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮ್‌ಪ್ರಸಾದ್ 'ಮಂಕುತಿಮ್ಮನ ಕಗ್ಗ' ಕೃತಿಯ ಮೂಲಕ ಜೀವನದ ಮೌಲ್ಯಗಳನ್ನು ಸಾರಿದ ಶ್ರೀಯುತರು, ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳು ಅವಿಸ್ಮರಣೀಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಜಗದೀಶ್, ಕಾ.ಪು. ರಾಜಣ್ಣ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಮಿರ್ಲೆ ಪಣೀಶ್, ಜತ್ತಿ ಪ್ರಸಾದ್, ಶಿವಲಿಂಗ ಸ್ವಾಮಿ, ಪುಟ್ಟಣ್ಣ, ಮಹಾನ್ ಶ್ರೇಯಸ್, ಶಿವು, ಪ್ರಕಾಶ್, ನಿವೃತ್ತ ಶಿಕ್ಷಕ ಮಹಾದೇವಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವ ಮಹಿಳಾ ದಿನಾಚರಣೆ...



ಮೈಸೂರಿನ ಜೆ.ಪಿ.ನಗರದ ಶ್ರೀ ಪುಟ್ಟರಾಜ ಗವಾಯಿ ಕ್ರೀಡಾಂಗಣದ ಆವರಣದಲ್ಲಿ ಪತಂಜಲಿ ಯೋಗ ಶಿಕ್ಷಣ ಕೇಂದ್ರದ ವತಿಯಿಂದ ವಿಶ್ವ ಮಹಿಳಾ ದಿನ ಆಚರಿಸಲಾಯಿತು. ಯೋಗ ಶಿಕ್ಷಕರಾದ ರತ್ನ, ಶಿವಮ್ಮ, ಸುನಂದ, ವಾಸಂತಿ, ಚಂದ್ರಕಲಾ ಹಾಗೂ ಯೋಗ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ರಾಜ್ಯಮಟ್ಟದಲ್ಲಿ ಆಯ್ಕೆಯಾದ ಪುಸ್ತಕಗಳ ಪ್ರಕಟ

ಮೈಸೂರು,ಮಾ.17–ಸಾರ್ವಜನಿಕ ಗಂಥಾಲಯ ಇಲಾಖೆ ವತಿಯಿಂದ 2021 ರಲ್ಲಿ ಮುದ್ರಣಗೊಂಡು ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸ್ವೀಕರಿಸಿದ ಕನ್ನಡ, ಆಂಗ್ಲ, ಹಿಂದಿ ಮತ್ತು ಭಾರತೀಯ ಇತರ ಭಾಷಾ ಪುಸ್ತಕಗಳನ್ನು ಆಯ್ಕೆ ಸಮಿತಿ ಮುಂದೆ ಮಂಡಿಸಲಾಗಿದ್ದು, ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿರುವುದರಿಂದ ಆಯ್ಕೆಯಾದ ಪುಸ್ತಕಗಳನ್ನು dpl.Kar nataka. gov.inರಲ್ಲಿ ಪ್ರಕಟಿಸಲಾಗಿದೆ. ಲೇಖಕರು, ಲೇಖಕ ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಸರಬರಾಜುದಾರರು ಸಲ್ಲಿಸಿದ ಪುಸ್ತಕಗಳ ಹೆಸರು, ಪ್ರಕಾಶಕರ ಹೆಸರು, ಸರಬರಾಜುದಾರರ ಹೆಸರು, ಲೇಖಕರ ಹೆಸರು, ಪುಟ ಸಂಖ್ಯೆ, ಮುಖ ಬೆಲೆ, ನಿಗದಿತ ಬೆಲೆ, ಪುಸ್ತಕದ ಅಳತೆ ಹಾಗೂ ಇತರೆ ತಾಂತ್ರಿಕ ವ್ಯತ್ಯಾಸಗಳಿದ್ದಲ್ಲಿ ಮಾರ್ಚ್ 18ರ ಒಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ ಡಾ.ಅಂಬೇಡ್ಕರ್ ಬೀದಿ ಇಲ್ಲಿಗೆ ಲಿಖಿತವಾಗಿ ಅಥವಾ ಇಮೇಲ್ dpl dir acts@yahoo.co.in ಮೂಲಕ ಮನವಿ ಸಲ್ಲಿಸಬಹುದು.

ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ



ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ವತಿಯಿಂದ 56ನೇ ವಾರ್ಡ್‌ನಲ್ಲಿ ಸಾಧನೆ ಮಾಡಿದ ಹಿರಿಯರು, ಮಕ್ಕಳನ್ನು ಗೌರವಿಸಲಾಯಿತು. ಮಾಜಿ ಮೇಯರ್ ಪುರುಷೋತ್ತಮ್, ಪಲ್ಲವಿ ಬೇಗಂ, ಡಾ. ಶಿವಸ್ವಾಮಿ, ಸಿದ್ದಸ್ವಾಮಿ, ಚಂದ್ರಶೇಖರಯ್ಯ, ಪುಟ್ಟಮ್ಮಣ್ಣಿ, ಚಂದ್ರಶೇಖರ್, ವಿಷ್ಣುಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಎಳೆಯರ ಮೇಳಕ್ಕೆ ಅರ್ಜಿ ಆಹ್ವಾನ

ಮೈಸೂರು,ಮಾ.17–ಬೇಸಿಗೆ ರಜಾ ದಿನಗಳಲ್ಲಿ ಮಕ್ಕಳಿಗೆ ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ "ಎಳೆಯರ ಮೇಳ–2025" ಬೇಸಿಗೆ ಶಿಬಿರವನ್ನು ಏಪ್ರಿಲ್ 1ರಿಂದ 21ರವರೆಗೆ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. 8 ವರ್ಷದಿಂದ 14 ವರ್ಷ ವಯೋಮಾನದ ಮಕ್ಕಳಿಗೆ ಭಾಗವಹಿಸಲು ಅವಕಾಶವಿರುತ್ತದೆ. ಇದೇ ತಿಂಗಳ 20ನೇ ತಾರೀಖಿನಿಂದ ಅರ್ಜಿಗಳನ್ನು ವಿತರಿಸಲಾಗುತ್ತದೆ. ವಿವರಗಳಿಗೆ ಚಂದ್ರಶೇಖರಾಚಾರ್ (94487 39365), ಎಂ.ಗುರುಸ್ವಾಮಿ (9945472541), ಮಂಜುನಾಥ (ಕಾಚಕ್ಕಿ) (91649 91992), ಶಕುಂತಲಾ ಹೆಗಡೆ (86607 50218), ಬಿ.ಜೀವನ್‌ಕುಮಾರ್ (98801 01305) ಹಾಗೂ ಬಿ. ಪ್ರಶಾಂತ್ (97314 26011) ಅವರನ್ನು ಸಂಪರ್ಕಿಸಬಹುದು.

ಮಹಿಳಾ ದಿನಾಚರಣೆ, ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ

ಮೈಸೂರು, ಮಾ.17–ಅನೇಕ ಮಹಿಳೆಯರು ಸಾಧನೆಯ ಮೆಟ್ಟಿಲನ್ನೇರಿದ್ದರೂ ಹೊರ ಪ್ರಪಂಚಕ್ಕೆ ತಮ್ಮ ಸಾಧನೆಯ ಬಗ್ಗೆ ತೋರಿಸಿಕೊಳ್ಳುವಲ್ಲಿ ಹಿಂಜರಿಯುತ್ತಾರೆ. ಅಂತಹ ಸಾಧಕ ಸಖಿಯರನ್ನು ಗುರುತಿಸಿ, ಗೌರವಿಸುವ ಜವಾಬ್ದಾರಿ ನಮ್ಮಂತಹ ಸಂಘಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ ಎಂದು ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಅಭಿಪ್ರಾಯಿಸಿದರು.

ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜಿನ ಋತ್ವಿಕ್ ವೇದಿಕೆಯಲ್ಲಿ ತಮ್ಮ ಸಂಸ್ಥೆಯ ಆಯೋಜಿಸಿದ್ದ ಸಖಿ ಸಂಭ್ರಮ – ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ವೈದ್ಯಕೀಯ ಸಾಹಿತಿ ಹಾಗೂ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಹೆಚ್ಚು ಹೆಚ್ಚು ಆರೋಗ್ಯದ ಬಗ್ಗೆ ಕಾಳಜಿ ವಹಿಸಿದಲ್ಲಿ ಸಮಾಜಕ್ಕೆ ಮಹಿಳೆಯರಿಂದ ಮತ್ತಷ್ಟು ಉತ್ತಮ ಕೊಡುಗೆ ಸಾಧ್ಯ, ತಮ್ಮ ವೈಯಕ್ತಿಕ ಆರೋಗ್ಯದ ಬಗ್ಗೆ ಗಮನ ಹರಿಸುವ ಜವಾಬ್ದಾರಿ ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ನಂತರ ಮಾತನಾಡಿದ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಶ್ರೀಗಂಧ ವಲಯ ಪ್ರಮುಖ್ ಡಾ.ವಿ.ರಂಗನಾಥ್, ಮಹಿಳೆಯು ತಮ್ಮ ಕೆಲಸ ಕಾರ್ಯಗಳ ನಡುವೆ ಸಾಹಿತ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಾಗ ಮತ್ತಷ್ಟು ಕ್ರಿಯಾಶೀಲ ವ್ಯಕ್ತಿತ್ವ ಅವರದಾಗುತ್ತದೆ, ಮಹಿಳೆಯರು ಸಂಯಮಶೀಲರಾಗಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮನೋಭಾವ ಬೆಳಸಿಕೊಳ್ಳಬೇಕು ಎಂದರು.



ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರಿನ ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜಿನ ಋತ್ವಿಕ್ ವೇದಿಕೆಯಲ್ಲಿ ಸಖಿ ಸಂಭ್ರಮ – ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ಸಾಮಾಜಿಕ ಸೇವೆ ಹಾಗೂ ಉದ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಶ್ರೀಮತಿ ಅನಿತಾ ರೀಟಾ, ರಂಗಭೂಮಿ ಮತ್ತು ಚೆಂಡೆ ಕಲಾವಿದೆ ಶ್ರೀಮತಿ ಅರುಣ್‌ಕುಮಾರ್ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಸಲ್ಲಿಸಿರುವ ಶ್ರೀಮತಿ ಬಿ.ಆರ್.ನಾಗರತ್ನ ಅವರಿಗೆ ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇಂದು, ನಾಳೆ ವಿದ್ಯುತ್ ಸರಬರಾಜು ಮಾಹಿತಿ

ಮೈಸೂರು,ಮಾ.17–ಮಾ.18 ಹಾಗೂ 19ರಂದು ಎಫ್–4 ಹೊಸಕೋಟೆ 11 ಕೆವಿ ಮಾರ್ಗಗಳಿಗೆ ಬೆಳಗ್ಗೆ 6ರಿಂದ 10 ರವರೆಗೆ, ಎಫ್–7 ಹನುಮಂತಪುರ 11 ಕೆವಿ ಮಾರ್ಗಗಳಿಗೆ ಬೆಳಗ್ಗೆ 10 ಗಂಟೆಯಿಂದ 2 ಗಂಟೆವರೆಗೆ, ಎಫ್–9 ರಾಮೇನಹಳ್ಳಿ 11 ಕೆ ವಿ ಮಾರ್ಗಗಳಿಗೆ ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆಯವರೆಗೆ, ಎಫ್ 3–ದಡದಕಲ್ಲಹಳ್ಳಿ 11 ಕೆ ವಿ ಮಾರ್ಗಗಳಿಗೆ ಸಂಜೆ 6 ಗಂಟೆಯಿಂದ 10 ಗಂಟೆಯವರೆಗೆ, ಎಫ್–4 ಹೊಸಕೋಟೆ 11 ಕೆ ವಿ ಮಾರ್ಗಗಳಿಗೆ ರಾತ್ರಿ 10 ಗಂಟೆಯಿಂದ 12 ಗಂಟೆವರೆಗೆ, ಎಫ್–7 ಹನುಮಂತಪುರ 11 ಕೆ ವಿ ಮಾರ್ಗಗಳಿಗೆ ರಾತ್ರಿ 12 ಗಂಟೆಯಿಂದ 2 ಗಂಟೆಯವರೆಗೆ, ಎಫ್–9 ರಾಮೇನಹಳ್ಳಿ 11 ಕೆ ವಿ ಮಾರ್ಗಗಳಿಗೆ ರಾತ್ರಿ 2 ಗಂಟೆಯಿಂದ 4 ಗಂಟೆಯವರೆಗೆ, ಎಫ್–3 ದಡದಕಲ್ಲಹಳ್ಳಿ 11 ಕೆವಿ ಮಾರ್ಗಗಳಿಗೆ ರಾತ್ರಿ 4 ಗಂಟೆಯಿಂದ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ದೇಶ – ವಿದೇಶ

ಪಾಕಿಸ್ತಾನದಲ್ಲಿ ಚೀನಾ ಕಾಲ್ ಸೆಂಟರ್ ಲೂಟಿ



ಇಸ್ಲಾಮಾಬಾದ್: ಇಸ್ಲಾಮಾಬಾದ್‌ನ ಸೆಕ್ಟರ್ ಎಫ್–11ನಲ್ಲಿರುವ ಚೀನಾ ಮೂಲದ ಕಾಲ್ ಸೆಂಟರ್‌ಗೆ ನುಗ್ಗಿದ ನೂರಾರು ಪಾಕಿಗಳು ಕಚೇರಿಯಲ್ಲಿದ್ದ ಕಂಪ್ಯೂಟರ್‌ಗಳು ಮತ್ತು ಕೇಬಲ್, ಇತರೆ ವಸ್ತುಗಳನ್ನು ದೋಚಿ ಪರಾರಿಯಾಗಿದ್ದಾರೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗಷ್ಟೇ ಈ ಕಚೇರಿಗೆ ಪಾಕಿಸ್ತಾನದ ಫೆಡರಲ್ ತನಿಖಾ ಸಂಸ್ಥೆ (ಎಫ್‌ಐಎ) ಮತ್ತು ಗುಪ್ತಚರ ಸಂಸ್ಥೆಗಳು ದಾಳಿ ನಡೆಸಿದ್ದವು. ದಾಳಿ ಪೂರ್ಣಗೊಳಿಸಿ ಅಧಿಕಾರಿಗಳು ಅಲ್ಲಿಂದ ಹೊರಹೋಗುತ್ತಲೇ ಸ್ಥಳೀಯರು ಕಚೇರಿಗೆ ನುಗ್ಗಿ ಕೈಗೆ ಸಿಕ್ಕ ವಸ್ತುಗಳನ್ನು ದೋಚಿ ಪರಾರಿಯಾಗಿದ್ದಾರೆ. ಕೆಲವರು ಕಂಪ್ಯೂಟರ್‌ಗಳನ್ನು ತೆಗೆದುಕೊಂಡು ಹೋದರೆ, ಮತ್ತೆ ಕೆಲವರು ಮಾನಿಟರ್, ಕೀಬೋರ್ಡ್ ಮೌಸ್, ಸಿಪಿಯು, ಅದರ ಕೇಬಲ್ ಸೇರಿದಂತೆ ಕೈಗೆ ಸಿಕ್ಕ ವಸ್ತುಗಳನ್ನು ಲೂಟಿ ಮಾಡುತ್ತಿರುವುದನ್ನು ತೋರಿಸುವ ಹಲವಾರು ವೀಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗುತ್ತಿವೆ. ಈ ದಾಳಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ತನಿಖೆ ನಡೆಸಿದ್ದಾರೆ.

ವೈಷ್ಣೋದೇವಿ ಮಂದಿರದ ಬಳಿ ಮದ್ಯ ಸೇವನೆ: ಕೇಸ್

ಶ್ರೀನಗರ: ಮಾತಾ ವೈಷ್ಣೋದೇವಿ ದೇಗುಲಕ್ಕೆ ತೀರ್ಥಯಾತ್ರೆಗೆ ಮೂಲ ಶಿಬಿರವಾದ ಕತ್ರಾದಲ್ಲಿರುವ ಹೋಟೆಲ್‌ನಲ್ಲಿ ಮದ್ಯ ಸೇವಿಸಿದ್ದಕ್ಕಾಗಿ ಎಂಟು ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಸಾಮಾಜಿಕ ಮಾಧ್ಯಮ ಪ್ರಭಾವಿ ಓರ್ಹಾನ್ ಅವತ್ರಮಣಿ ಸೇರಿ 8 ಮಂದಿ ಮದ್ಯ ಸೇವಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾನೂನನ್ನು ಉಲ್ಲಂಘಿಸಿದ್ದಕ್ಕಾಗಿ' ಎಂಟು ಜನರ ವಿರುದ್ಧ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಲಾಗಿದೆ. ಜನರ ಭಾವನೆಗಳಿಗೆ ನೋವುಂಟು ಮಾಡಿದ್ದಕ್ಕಾಗಿ ಅವರನ್ನು ಬಂಧಿಸಲು ತಂಡವನ್ನು ರಚಿಸಲಾಗಿದೆ ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೋಟೆಲ್‌ನಲ್ಲಿ ತಂಗಿದ್ದ ಕೆಲವು ಅತಿಥಿಗಳು ನಿಯಮಗಳನ್ನು ಉಲ್ಲಂಘಿಸಿ, ಆವರಣದಲ್ಲಿ ಮದ್ಯ ಸೇವಿಸುತ್ತಿರುವುದು ಕಂಡುಬಂದಿದೆ. ಮಾತಾ ವೈಷ್ಣೋದೇವಿ ದೇಗುಲದ ಸಾಮೀಪ್ಯದಿಂದಾಗಿ ಹೋಟೆಲ್ ಒಳಗೆ ಮದ್ಯ ಮತ್ತು ಮಾಂಸಾಹಾರ ನಿಷೇಧಿಸಲಾಗಿದೆ ಎಂದು ಹೇಳಿದ್ದರೂ, ಎಂಟು ಮಂದಿ ಹೋಟೆಲ್ ಆವರಣದಲ್ಲಿ ಮದ್ಯ ಸೇವಿಸಿದ್ದಾರೆ.

ಪಾಕ್‌ನಲ್ಲಿ ದಂಗೆಕೋರರಿಂದ 48 ಗಂಟೆಯಲ್ಲಿ ಬರೋಬ್ಬರಿ 57 ದಾಳಿ

ಇಸ್ಲಾಮಾಬಾದ್: ಕಳೆದ ಕೆಲವು ದಿನಗಳಿಂದ ಪಾಕಿಸ್ತಾನದಲ್ಲಿ ಭದ್ರತಾ ವಿಚಾರದಲ್ಲಿ ಸರ್ಕಾರದ ಹಿಡಿತ ಕೈತಪ್ಪಿ ಹೋಗಿದ್ದು, ಗಂಭೀರ ಪರಿಸ್ಥಿತಿ ಉದ್ಭವಿಸಿದೆ. ದಿನದಿಂದ ದಿನಕ್ಕೆ ಪಾಕಿಸ್ತಾನದ ಅವ್ಯವಸ್ಥೆ ಎದ್ದು ಕಂಡುಬರುತ್ತಿದ್ದು, ದಂಗೆಕೋರರ ಸತತ ದಾಳಿಗಳಿಂದ ಭದ್ರತಾ ಪರಿಸ್ಥಿತಿಯು ಪ್ರಶ್ನೆಗೊಳಗಾಗಿದೆ.



ಕಳೆದ 48 ಗಂಟೆಗಳಲ್ಲಿ ಪಾಕಿಸ್ತಾನದಲ್ಲಿ 57 ದಾಳಿಗಳು ನಡೆದಿವೆ ಎಂದು ತಿಳಿದು ಬಂದಿದ್ದು, ಇದರಲ್ಲಿ ಬಲೂಚಿಸ್ತಾನದಲ್ಲಿ ನಡೆದ ರೈಲು ಅಪಹರಣ ಘಟನೆ ಸೇರಿಲ್ಲ ಎಂಬುದು ಗಮನಾರ್ಹ. ಈ ದಾಳಿಗಳಲ್ಲಿ ಹೆಚ್ಚಿನವು ಟಿಟಿಪಿ ಮತ್ತು ಬಿಎಲ್‌ಎಗಳಿಂದ ನಡೆಸಲ್ಪಟ್ಟಿವೆ ಎಂದು ವರದಿಯಾಗಿದೆ. ದಂಗೆಕೋರರು ಸ್ನೈಪರ್ ಹೊಡೆತಗಳು, ಗ್ರೆನೇಡ್ ದಾಳಿಗಳು ಮತ್ತು ಐಇಡಿ ಸ್ಫೋಟಗಳಿಂದ ಪಾಕಿಸ್ತಾನವನ್ನು ನಡುಗಿಸಿದ್ದಾರೆ. ಅಧಿಕೃತ ಅಂಕಿ–ಅಂಶಗಳ ಪ್ರಕಾರ, ಈ ದಾಳಿಗಳಲ್ಲಿ 16 ಜನರು ಸಾವನ್ನಪ್ಪಿದ್ದಾರೆ ಮತ್ತು 46 ಜನರು ಗಾಯಗೊಂಡಿದ್ದಾರೆ. ಆದರೆ ಬಿಎಲ್‌ಎ ಹೇಳಿಕೆಯ ಪ್ರಕಾರ, ಗಾಯಗೊಂಡವರ ಸಂಖ್ಯೆ 100 ಕ್ಕಿಂತ ಹೆಚ್ಚಾಗಿದೆ.

ಅಮೃತಸರ ದೇವಾಲಯದ ಬಳಿ ಗ್ರೆನೇಡ್ ಸ್ಫೋಟ; ಆರೋಪಿ ಎನ್ಕೌಂಟರ್‌ನಲ್ಲಿ ಬಲಿ


ಚಂಡೀಗಢ: ಅಮೃತಸರದ ಠಾಕೂರ್ ದ್ವಾರ್ ದೇವಾಲಯದ ಮೇಲೆ ಗ್ರೆನೇಡ್ ಸ್ಫೋಟಿಸಿದ್ದ ಪ್ರಮುಖ ಆರೋಪಿ ಎನ್‌ಕೌಂಟರ್‌ನಲ್ಲಿ ಸಾವನ್ನಪ್ಪಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಮೃತನನ್ನು ಅಮೃತಸರದ ಬಾಲ್ ಗ್ರಾಮದ ನಿವಾಸಿ ಜಗ್ಜಿತ್ ಸಿಂಗ್ ಅವರ ಪುತ್ರ ಗುರ್ಸಿದಕ್ ಎಂದು ಗುರುತಿಸಲಾಗಿದೆ. ಶುಕ್ರವಾರ ಮಧ್ಯರಾತ್ರಿ ಅಮೃತಸರದಲ್ಲಿ ಬೈಕ್‌ನಲ್ಲಿ ಬಂದ ಅಪರಿಚಿತ ದಾಳಿಕೋರನೊಬ್ಬ ಸ್ಫೋಟಕ ಸಾಧನವನ್ನು ಕಟ್ಟಡದ ಕೆಳಗೆ ಎಸೆದಿದ್ದ. ಬಳಿಕ ಸ್ಫೋಟ ಸಂಭವಿಸಿತ್ತು. ಘಟನೆ ಸಂಬಂಧ ಪೊಲೀಸರು ತನಿಖೆ ಆರಂಭಿಸಿದ್ದರು. ಗ್ರೆನೇಡ್ ದಾಳಿಯಲ್ಲಿ ಭಾಗಿಯಾಗಿರುವ ಶಂಕಿತರು ರಾಜಸಾನ್ಸಿ ಪ್ರದೇಶದಲ್ಲಿರುವ ಕುರಿತು ಪೊಲೀಸರಿಗೆ ಮಾಹಿತಿ ಸಿಕ್ಕಿದೆ. ಪೊಲೀಸರು ಶಂಕಿತರು ಹೋಗುತ್ತಿದ್ದ ಬೈಕನ್ನು ತಡೆಯಲು ಪ್ರಯತ್ನಿಸಿದಾಗ, ಆರೋಪಿಗಳು ತಮ್ಮ ವಾಹನವನ್ನು ಬಿಟ್ಟು ಪೊಲೀಸರ ಮೇಲೆ ಗುಂಡು ಹಾರಿಸಿದರು. ಬಳಿಕ ಆತ್ಮರಕ್ಷಣೆಗಾಗಿ, ಇನ್ಸ್‌ಪೆಕ್ಟರ್ ವಿನೋದ್‌ಕುಮಾರ್ ಗುಂಡು ಹಾರಿಸಿ ಪ್ರಮುಖ ಆರೋಪಿಯನ್ನು ಗಾಯಗೊಳಿಸಿದರು. ಕೂಡಲೇ ಆತನನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ.

ನೈಟ್‌ಕ್ಲಬ್‌ನಲ್ಲಿ ಭಾರಿ ಅಗ್ನಿ ಅವಘಡ: 59 ಮಂದಿ ಸಜೀವ ದಹನ

ಕೊಕಾನಿ: ಉತ್ತರ ಮೆಕೆಡೊನಿಯಾದ ಪೂರ್ವ ಪಟ್ಟಣವಾದ ಕೊಕಾನಿಯದಲ್ಲಿರುವ ನೈಟ್‌ಕ್ಲಬ್‌ನಲ್ಲಿ ಭಾನುವಾರ ಭಾರಿ ಅಗ್ನಿ ಅವಘಡ ಸಂಭವಿಸಿದ್ದು, ಘಟನೆಯಲ್ಲಿ 59 ಜನ ಸಾವನ್ನಪ್ಪಿದ್ದಾರೆ ಮತ್ತು 155 ಜನ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಕ್ಲಬ್ ಪಲ್ಸ್‌ನಲ್ಲಿ ಸ್ಥಳೀಯ ಪಾಪ್ ಗುಂಪಿನ ಸಂಗೀತ ಕಚೇರಿಯ ಸಮಯದಲ್ಲಿ ಬೆಳಗಿನ ಜಾವ 2.30 ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ ಎಂದು ಆಂತರಿಕ ಸಚಿವ ಪಂಚೆ ತೋಷ್ಕೋವ್ಸ್ಕಿ ವರದಿಗಾರರಿಗೆ ತಿಳಿಸಿದ್ದಾರೆ. ಒಟ್ಟು 59 ಮಂದಿ ಸಜೀವ ದಹನವಾಗಿದ್ದು, ಇದುವರೆಗೆ ಮೃತಪಟ್ಟವರ ಪೈಕಿ 39 ಜನರನ್ನು ಗುರುತಿಸಲಾಗಿದೆ ಎಂದು ಹೇಳಿದ್ದಾರೆ. ಗಾಯಾಳುಗಳನ್ನು ರಾಜಧಾನಿ ಸ್ಕೋಪ್ಜೆ ಸೇರಿದಂತೆ ದೇಶಾದ್ಯಂತದ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ. ಅವರಲ್ಲಿ ಹಲವರು ತೀವ್ರ ಸುಟ್ಟಗಾಯಗಳಿಂದ ಬಳಲುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 118 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅಲ್ಬೇನಿಯಾ, ಬಲ್ಗೇರಿಯಾ, ಗ್ರೀಸ್ ಮತ್ತು ಸೆರ್ಬಿಯಾ ಸೇರಿದಂತೆ ನೆರೆಯ ದೇಶಗಳು ನೆರವಿನ ಹಸ್ತ ಚಾಚಿವೆ ಎಂದು ಆರೋಗ್ಯ ಸಚಿವ ಅರ್ಬೆನ್ ತಾರಾವರಿ ಹೇಳಿದ್ದಾರೆ.

ಸ್ಮಶಾನದಲ್ಲಿ ಗಾಂಜಾ ಬೆಳೆದವನ ಬಂಧನ

ಮಡಿಕೇರಿ,ಮಾ.17– ಕುಶಾಲನಗರದ ಶೈಲಜಾ ಬಡಾವಣೆಯ ಸ್ಮಶಾನದ ಜಾಗದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿದ್ದ ಆರೋಪಿಯನ್ನು ಕುಶಾಲನಗರ ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹೇರೂರು ಗ್ರಾಮ ನಿವಾಸಿ ಪ್ರಶಾಂತ್(29) ಎಂಬಾತನೇ ಬಂಧಿತ ಆರೋಪಿಯಾಗಿದ್ದು, 19 ಹಸಿ ಗಾಂಜಾ ಗಿಡಗಳನ್ನು ವಶಕ್ಕೆ ಪಡೆಯಲಾಗಿದೆ.



ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು 1 ಕೆ.ಜಿ. 730 ಗ್ರಾಂ ತೂಕದ 19 ಹಸಿ ಗಾಂಜಾ ಗಿಡಗಳನ್ನು ವಶಕ್ಕೆ ಪಡೆದು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ಕುಶಾಲನಗರ ಪಟ್ಟಣ ಠಾಣೆ ವೃತ್ತ ನಿರೀಕ್ಷಕ ಪ್ರಕಾಶ್ ಬಿ.ಬಿ, ಠಾಣಾಧಿಕಾರಿ ಗೀತಾ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಬೈಕ್ ಮೇಲೆ ಕಾಡಾನೆ ದಾಳಿ; ಸವಾರ ಪಾರು

ಸಿದ್ದಾಪುರ, ಮಾ.17– ಬೈಕ್‌ನಲ್ಲಿ ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕನ ಮೇಲೆ ಕಾಡಾನೆ ದಾಳಿ ಮಾಡಿದ ಪರಿಣಾಮ ಬೈಕ್ ಸಂಪೂರ್ಣ ಜಖಂಗೊಂಡಿದ್ದು, ಸವಾರ ಪ್ರಾಣಾಪಾಯದಿಂದ ಪಾರಾದ ಘಟನೆ ಮಾಲ್ದಾರೆ ಬಳಿಯ ಮುಖ್ಯ ರಸ್ತೆಯಲ್ಲಿ ನಡೆದಿದೆ. ಸೋಮವಾರ ಬೆಳಿಗ್ಗೆ ತಟ್ಟಳ್ಳಿಯಿಂದ ಮಾಲ್ದಾರೆ ಮಾರ್ಗವಾಗಿ ವಾಲ್ನೂರು ಗ್ರಾಮಕ್ಕೆ ಬೈಕಿನಲ್ಲಿ ತೆರಳುತ್ತಿದ್ದ ಅಯ್ಯಪ್ಪ ಎಂಬುವರು ಮಾಲ್ದಾರೆ –ಸಿದ್ದಾಪುರ ಮುಖ್ಯ ರಸ್ತೆಯ ಕೆರೆಯ ಬಳಿ ಬಂದಾಗ ಕಾಡಾನೆಯೊಂದು ಕಾಫಿ ತೋಟದಿಂದ ನೇರವಾಗಿ ರಸ್ತೆಗೆ ಬಂದಿದೆ.



ಬೈಕ್‌ನಲ್ಲಿ ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕನ ಮೇಲೆ ಕಾಡಾನೆ ದಾಳಿ ಮಾಡಿದ ಪರಿಣಾಮ ಬೈಕ್ ಜಖಂ ಗೊಂಡಿರುವುದು.

ಆನೆಯನ್ನು ಕಂಡು ಭಯಭೀತರಾದ ಸವಾರ ಅಯ್ಯಪ್ಪ ಬೈಕ್ ಅನ್ನು ಹಿಂಬದಿಗೆ ತಿರುಗಿಸುವಷ್ಟರಲ್ಲಿ ಕಾಡಾನೆ ಏಕಾಏಕಿ ದಾಳಿಗೆ ಯತ್ನಿಸಿದೆ. ಅಯ್ಯಪ್ಪ ಅವರು ತಕ್ಷಣ ಬೈಕ್ ಅನ್ನು ಬಿಟ್ಟು ಓಡಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆಕ್ರೋಶಿತ ಕಾಡಾನೆ ಬೈಕ್ ಅನ್ನು ಸಂಪೂರ್ಣ ಜಖಂಗೊಳಿಸಿದ್ದಲ್ಲದೇ, ಮುಖ್ಯ ರಸ್ತೆಯಿಂದ ಆನೆ ಕಂದಕಕ್ಕೆ ಬೈಕ್ ಎಸೆದಿದೆ. ಕಾಡಾನೆ ಘೀಳಿಟ್ಟ ಶಬ್ದ ಕೇಳಿ ಸಮೀಪದಲ್ಲೇ ಗಸ್ತಿನಲ್ಲಿದ್ದ ಅರಣ್ಯ ಇಲಾಖೆ ಹಾಗೂ ಆರ್‌ಆರ್‌ಟಿ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಆನೆಯನ್ನು ಕಾಡಿಗಟ್ಟಿದ್ದಾರೆ.

ವಲಯ ಅರಣ್ಯಾಧಿಕಾರಿ ರತನ್‌ಕುಮಾರ್ ಅವರ ನಿರ್ದೇಶನದಂತೆ ಉಪ ವಲಯ ಅರಣ್ಯ ಅಧಿಕಾರಿಗಳಾದ ಹಂಸ, ಶಶಿ, ಅರಣ್ಯ ರಕ್ಷಕರುಗಳಾದ ಸಂಪತ್ ಕುಮಾರ್, ತಿಮ್ಮಣ್ಣ, ಆರ್‌ಆರ್‌ಟಿ ಸಿಬ್ಬಂದಿಗಳಾದ ರಾಜಪ್ಪ, ಚೇತನ್, ಶಶಿ ಸೇರಿದಂತೆ ಮತ್ತಿತರರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಬೈಕ್ ಸವಾರ ಅಯ್ಯಪ್ಪ ಅವರು ಅರಣ್ಯ ಇಲಾಖೆ ಹಾಗೂ ಪೊಲೀಸರಿಗೆ ದೂರು ನೀಡಿದ್ದಾರೆ. ವರ್ಷದ ಹಿಂದೆಯಷ್ಟೆ ಹೊಸ ಬೈಕ್ ಖರೀದಿ ಮಾಡಲಾಗಿತ್ತು. ಕಾಡಾನೆ ದಾಳಿಯಿಂದ ಬೈಕ್ ಸಂಪೂರ್ಣ ಜಖಂಗೊಂಡಿದ್ದು ಅಂದಾಜು 70 ಸಾವಿರ ನಷ್ಟ ಉಂಟಾಗಿದೆ ಎಂದು ಇಲಾಖೆ ಅಧಿಕಾರಿಗಳಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನಾಳೆ ಅಂಚೆ ಅದಾಲತ್

ಮಡಿಕೇರಿ, ಮಾ.17– ಅಂಚೆ ಅದಾಲತ್ ಸಭೆಯು ಮಾ.19 ರಂದು ಬೆಳಗ್ಗೆ 11 ಗಂಟೆಗೆ ಕೊಡಗು ಅಂಚೆ ವಿಭಾಗದ ವಿಭಾಗೀಯ ಕಚೇರಿ ವತಿಯಿಂದ ಸಿದ್ದಾಪುರ ರಸ್ತೆಯಲ್ಲಿರುವ ಅಶೋಕ್‌ಪುರದಲ್ಲಿ ನಡೆಯಲಿದೆ. ಸಭೆಯಲ್ಲಿ ಕೊಡಗು ಅಂಚೆ ವಿಭಾಗದ ಅಂಚೆ ಸೇವೆಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ ಚರ್ಚಿಸಲಾಗುತ್ತದೆ. ದೂರುಗಳಿದ್ದಲ್ಲಿ 'ಅಂಚೆ ಅದಾಲತ್' ಎಂದು ಬರೆದು ಅಂಚೆ ಅಧೀಕ್ಷಕರು, ಕೊಡಗು ಅಂಚೆ ವಿಭಾಗ, ಮಡಿಕೇರಿ ಇವರಿಗೆ ಮಾ.18 ರೊಳಗೆ ತಲುಪುವಂತೆ ಕಳುಹಿಸಲು ಈ ಮೂಲಕ ಕೋರಲಾಗಿದೆ ಎಂದು ಕೊಡಗು ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

ಕೊಡಗಿನಿಂದ ಹೊರ ಜಿಲ್ಲೆಗಳಿಗೆ ರಸಗೊಬ್ಬರ ಸಾಗಾಣಿಕೆ ತಡೆಯಲು ಅಧಿಕಾರಿಗಳಿಗೆ ಡಿಸಿ ಸೂಚನೆ

ಮಡಿಕೇರಿ, ಮಾ.17–ಜಿಲ್ಲೆಯ ರಸಗೊಬ್ಬರ ಕಂಪನಿ ಪ್ರತಿನಿಧಿಗಳು, ಸಹಕಾರ ಸಂಘಗಳು, ಕೃಷಿ ಪರಿಕರ ಮಾರಾಟ ಸಹಕಾರ ಸಂಘ ಪ್ರತಿನಿಧಿಗಳು ಮತ್ತಿತರರ ಜೊತೆ ಮುಂಗಾರು ಸಂದರ್ಭದಲ್ಲಿ ರಸಗೊಬ್ಬರ ದಾಸ್ತಾನು ಸಂಬಂಧ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಪೂರ್ವಭಾವಿ ಸಭೆ ನಡೆಯಿತು.

ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಗೆ ಪೂರೈಕೆಯಾಗುವ ರಸಗೊಬ್ಬರ ದಾಸ್ತಾನು ಮಾಡುವುದರ ಜೊತೆಗೆ, ಹೊರ ಜಿಲ್ಲೆಗೆ ರಸಗೊಬ್ಬರ ಸಾಗಾಣಿಕೆ ಮಾಡದಂತೆ ಚೆಕ್‌ಪೋಸ್ಟ್‌ಗಳಲ್ಲಿ ಅಗತ್ಯ ತಪಾಸಣೆ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಸಲಹೆ ಮಾಡಿದರು.

ಮಾರುಕಟ್ಟೆ ಫೆಡರೇಷನ್ ಮತ್ತು ಬೀಜ ನಿಗಮದಿಂದ ರಸಗೊಬ್ಬರ ಹಾಗೂ ಬಿತ್ತನೆ ಬೀಜವನ್ನು ದಾಸ್ತಾನು ಮಾಡಿಕೊಳ್ಳುವುದು. ಪ್ರಮುಖವಾಗಿ ಯೂರಿಯಾ ಮತ್ತು ಡಿಎಪಿ ರಸಗೊಬ್ಬರವನ್ನು ಬೇಡಿಕೆಯಂತೆ ದಾಸ್ತಾನು ಮಾಡಿಕೊಳ್ಳುವುದು, ಪ್ರತೀ ತಿಂಗಳು ಪೂರೈಕೆಯಾಗುವ ರಸಗೊಬ್ಬರ ಸಂಬಂಧ ಕಾಲ ಕಾಲಕ್ಕೆ ರಸಗೊಬ್ಬರ ಮಾರಾಟಗಾರರು ಹಾಗೂ ಕಂಪನಿ ಮತ್ತು ಸಹಕಾರ ಸೊಸೈಟಿಯವರು ಕೃಷಿ ಇಲಾಖೆ ಜಂಟಿ ನಿರ್ದೇಶಕರಿಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಅವರು ಸೂಚಿಸಿದರು.



ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಸುತ್ತಿರುವುದು.

ರೈತರಿಗೆ ಯಾವುದೇ ರೀತಿಯ ಕಳಪೆ ರಸಗೊಬ್ಬರ ಸರಬರಾಜು ಆಗದಂತೆ ಎಲ್ಲಾ ರಸಗೊಬ್ಬರ ತಯಾರಿಕ ಸಂಸ್ಥೆ ಹಾಗೂ ಎಲ್ಲಾ ಖಾಸಗಿ ಮತ್ತು ಸಹಕಾರ ಸಂಘಗಳು ಎಚ್ಚರ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ರೈತರಿಗೆ ಸಬ್ಸಿಡಿ ದರದಲ್ಲಿ ನೀಡಲಾಗುತ್ತಿರುವ ರಸಗೊಬ್ಬರಗಳನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆ ಮಾಡುವುದನ್ನ ಪರಿಣಾಮಕಾರಿಯಾಗಿ ತಡೆಯುವ ಸಂಬಂಧ ಜಿಲ್ಲೆಯ ಗಡಿ ಭಾಗಗಳ ಚೆಕ್ ಪೋಸ್ಟ್‌ಗಳಲ್ಲಿ ಸೂಕ್ತ ತಪಾಸಣೆ ಕೈಗೊಳ್ಳಲು ಕ್ರಮವಹಿಸಬೇಕು. ಆ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯ ಸಹಕಾರ ಪಡೆದುಕೊಳ್ಳಲು ಸಹ ಸೂಚಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಚಂದ್ರಶೇಖರ್ ಮಾತನಾಡಿ, ರೈತರಿಗೆ ಸಬ್ಸಿಡಿ ದರದಲ್ಲಿ ನೀಡಲಾಗುತ್ತಿರುವ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆ ಮಾಡುತ್ತಿರುವುದನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲೆಯ ಸಹಾಯಕ ಕೃಷಿ ನಿರ್ದೇಶಕರು(ಜಾರಿದಳ) ಮತ್ತು ಎಲ್ಲಾ ರಸಗೊಬ್ಬರ ಪರಿವೀಕ್ಷಕರುಗಳಿಗೆ ಕಾಲಕಾಲಕ್ಕೆ ಪರಿಶೀಲನೆ ಮಾಡುವಂತೆ ಹಾಗೂ ಅಂತಹ ಪ್ರಕರಣಗಳು ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮಕೈಗೊಳ್ಳಲು ಕ್ರಮವಹಿಸಲು ಸೂಚಿಸಲಾಗಿರುವುದಾಗಿ ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು.

ಜಿಲ್ಲಾ ಕೃಷಿ ಪರಿಕರ ಮಾರಾಟಗಾರರ ಸಹಕಾರ ಸಂಘ ಅಧ್ಯಕ್ಷರು ಮಾತನಾಡಿ, ಕಾಪು ದಾಸ್ತಾನೀಕರಿಸಿದ ರಸಗೊಬ್ಬರಗಳನ್ನು ಸಹಕಾರ ಸಂಘಗಳಿಗೆ ಹಂಚಿಕೆ ಮಾಡುವುದರ ಜೊತೆಗೆ ಖಾಸಗಿ ರಸಗೊಬ್ಬರ ಮಾರಾಟಗಾರರಿಗೂ ಹಂಚಿಕೆ ಮಾಡಿದರೆ ಸೂಕ್ತವೆಂದು ಕೋರಿದರು.

ಇಂದು ವಿಶ್ವ ಗ್ರಾಹಕರ ದಿನಾಚರಣೆ

ಮಡಿಕೇರಿ ಮಾ.17– ಜಿಲ್ಲಾಡಳಿತ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ ಕುಶಾಲನಗರ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯು ಮಾ.18 ರಂದು ಬೆಳಗ್ಗೆ 11 ಗಂಟೆಗೆ ಕುಶಾಲನಗರ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆಯಲಿದೆ.

ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಗೌರಮ್ಮಣ್ಣಿ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಕುಶಾಲನಗರದ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರದ ಅಧ್ಯಕ್ಷರಾದ ಎ.ಎ.ಚಂಗಪ್ಪ, ಕುಶಾಲನಗರ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಸತೀಶ್ ಕಾಳೇಗೌಡ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಮಾರುತಿ ವಡ್ಡರ್ ಇತರರು ಪಾಲ್ಗೊಳ್ಳಲಿದ್ದಾರೆ.

ಕೊಡಗು ವಿವಿ ಮುಚ್ಚುವ ಪ್ರಸ್ತಾಪ ಖಂಡಿಸಿ ಬಿಜೆಪಿ ಧರಣಿ

ಮಡಿಕೇರಿ,ಮಾ.17– ಹಿಂದಿನ ಬಿಜೆಪಿ ಸರ್ಕಾರ ಮಂಜೂರು ಮಾಡಿರುವ ಕೊಡಗು ವಿಶ್ವ ವಿದ್ಯಾನಿಲಯವನ್ನು ರದ್ದು ಪಡಿಸಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿ, ಸಿ ಮತ್ತು ಡಿ ಜಮೀನು ಅರಣ್ಯ ಇಲಾಖೆಗೆ ಹಸ್ತಾಂತರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿಗೆ ಮೀಸಲಿಟ್ಟ 25 ಸಾವಿರ ಕೋಟಿ ರೂಪಾಯಿಗಳನ್ನು ಉಚಿತ ಭಾಗ್ಯಗಳಿಗೆ ಬಳಕೆ ಮತ್ತು ರಾಜ್ಯ ಬಜೆಟ್‌ನಲ್ಲಿ ದಲಿತ ಮತ್ತು ಹಿಂದುಳಿದ ವರ್ಗವನ್ನು ಕಡೆಗಣಿಸಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿರುವುದನ್ನು ವಿರೋಧಿಸಿ ಬಿಜೆಪಿ ವತಿಯಿಂದ ಸೋಮವಾರಪೇಟೆಯಲ್ಲಿ ಧರಣಿ ನಡೆಸಲಾಯಿತು

ಸೋಮವಾರಪೇಟೆ ತಾಲೂಕು ಬಿಜೆಪಿ ಯುವ ಮೋರ್ಚಾದ ವತಿಯಿಂದ ಪಟ್ಟಣದ ಜೇಸಿ ವೇದಿಕೆಯಲ್ಲಿ ನಡೆದ ಧರಣಿ ಸತ್ಯಾಗ್ರಹದಲ್ಲಿ ಬಿಜೆಪಿಯ ವಿವಿಧ ಘಟಕಗಳ ಪ್ರಮುಖರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಮಾಜಿ ಸಚಿವ ಅಪ್ಪಚ್ಚು ರಂಜನ್, ಪದವಿ ವ್ಯಾಸಂಗ ಪೂರೈಸಿದ ಜಿಲ್ಲೆಯ ಬಡ ವಿದ್ಯಾರ್ಥಿಗಳು ಆರ್ಥಿಕ ಸಂಕಷ್ಟದಿಂದ ಸ್ನಾತಕೋತ್ತರ ಪದವಿಗಾಗಿ ನಗರ ಪ್ರದೇಶಗಳಿಗೆ ತೆರಳಲಾಗದೇ ವ್ಯಾಸಂಗವನ್ನು ಮೊಟಕುಗೊಳಿಸುತ್ತಿದ್ದ ಪರಿಸ್ಥಿತಿ ಜಿಲ್ಲೆಯಲ್ಲಿತ್ತು. ಈ ಬಗ್ಗೆ ತಾನು ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಗಮನ ಸೆಳೆದ ಹಿನ್ನೆಲೆಯಲ್ಲಿ ಕೊಡಗು ವಿವಿ ಸ್ಥಾಪನೆಗೆ ಅಂದಿನ ಮುಖ್ಯಮಂತ್ರಿಗಳು 15 ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿದ್ದರು. 2010ರ ನವೆಂಬರ್ 15ರಂದು ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಶಂಕುಸ್ಥಾಪನೆ ನೆರವೇರಿಸಿದ್ದರು. ಆದರೆ ಇದೀಗ ರಾಜ್ಯ ಸರಕಾರ ಅನುದಾನದ ಕೊರತೆ ಮುಂದಿಟ್ಟು ಕೊಡಗು ವಿವಿಯನ್ನು ಮುಚ್ಚಲು ಹೊರಟಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಿ ಮತ್ತು ಡಿ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಉಚಿತ ಭಾಗ್ಯಗಳಿಗೆ ಬಳಕೆ ಮಾಡಿರುವ ರಾಜ್ಯ ಸರ್ಕಾರದ ನಡೆ ಜನ ವಿರೋಧಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪರಿಶಿಷ್ಟ ಮೋರ್ಚಾದ ಅಧ್ಯಕ್ಷ ಮೊಗೇರ ರವಿ ಸೇರಿದಂತೆ ಸೋಮವಾರ ಪೇಟೆ ತಾಲೂಕು ಬಿಜೆಪಿ ಯುವ ಮೋರ್ಚಾದ ಮುಖಂಡರು, ವಿವಿಧ ಘಟಕಗಳ ಪ್ರಮುಖರು ಹಾಗೂ ಪಕ್ಷದ ಕಾರ್ಯಕರ್ತರು ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.



ಬಿಜೆಪಿಯ ಕಾರ್ಯಕರ್ತರು ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಧರಣಿ ಸತ್ಯಾಗ್ರಹ ನಡೆಸುತ್ತಿರುವುದು.

ಶೇ.100ರಷ್ಟು ದೋಷರಹಿತ ಮತದಾರರ ಪಟ್ಟಿ ತಯಾರಿಕೆಗೆ ಸಹಕರಿಸಿ

ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಎಡಿಸಿ ಗೀತಾ ಹುಡೇದ ಮನವಿ

ಚಾಮರಾಜನಗರ, ಮಾ.17– ಜಿಲ್ಲೆಯಲ್ಲಿ ಮತದಾರರ ಪಟ್ಟಿ ತಯಾರಿಕೆ ಸಂಬಂಧ ಶೇ.100ರಷ್ಟು ದೋಷರಹಿತ ಮತದಾರರ ಪಟ್ಟಿ ತಯಾರಿಸಲು ಹಾಗೂ ಮತದಾನದ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ಸಹಕರಿಸುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಮನವಿ ಮಾಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಮತದಾರರ ನೋಂದಣಿ ಮತ್ತು ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ನೋಂದಾಯಿತ ಮಾನ್ಯತೆ ಪಡೆದ ರಾಷ್ಟ್ರೀಯ ಹಾಗೂ ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ಪ್ರತಿವರ್ಷ 1ನೇ ಜನವರಿ, 1ನೇ ಏಪ್ರಿಲ್, 1ನೇ ಜುಲೈ ಹಾಗೂ ಅಕ್ಟೋಬರ್ 1ರ ದಿನಾಂಕಗಳನ್ನು ಅರ್ಹತಾ ದಿನಗಳೆಂದು ಪರಿಗಣಿಸಿ ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ ಕೈಗೊಳ್ಳಲಾಗುತ್ತದೆ. ಈ ಅವಧಿಯಲ್ಲಿ 18 ವರ್ಷ ತುಂಬಿದ ಯುವ ಮತದಾರರು ಹಾಗೂ ಮತದಾರರ ಪಟ್ಟಿಯಿಂದ ಹೊರಗುಳಿದಿರುವ ಅರ್ಹ ಮತದಾರರನ್ನು ಪಟ್ಟಿಗೆ ಸೇರ್ಪಡೆಗೊಳಿಸುವ ಪರಿಷ್ಕರಣಾ ಕಾರ್ಯಕ್ಕೆ ನೆರವಾಗಬೇಕು ಎಂದರು.



ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಮಾತನಾಡುತ್ತಿರುವುದು.

ಮತದಾರರ ಪಟ್ಟಿಗೆ ಯುವ ಮತದಾರರನ್ನು ನೊಂದಣಿ ಮಾಡಲು ನಮೂನೆ–6 ರಲ್ಲಿ ಸಂಬಂಧಿಸಿದ ಮತಗಟ್ಟೆ ಮಟ್ಟದ ಅಧಿಕಾರಿಗಳು(ಬಿಎಲ್‌ಒ) ಹಾಗೂ ಆಯಾಯ ತಾಲೂಕು ತಹಶೀಲ್ದಾರ್ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ಅಥವಾ ವೋಟರ್ ಹೆಲ್ಪ್‌ಲೈನ್ ಆಪ್(ವಿಎಚ್‌ಎ) ಮತ್ತು ವೆಬ್ ಸೈಟ್ https://voters.eci.gov.in ನಲ್ಲಿ ಆನ್‌ಲೈನ್ ಮೂಲಕವು ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿರುವ ಕಾಡಂಚಿನ ಪ್ರದೇಶಗಳು, ಗಿರಿಜನರ ಹಾಡಿಗಳು, ಕಾಲೋನಿಗಳಲ್ಲಿನ ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಎಚ್ಚರಿಕೆ ವಹಿಸಬೇಕು. ಅಂತರ್ಜಾಲವಿಲ್ಲದ ಮತಗಟ್ಟೆಗಳ ವಿವರ ಒದಗಿಸಬೇಕು. ಲಿಂಗತ್ವ ಅಲ್ಪಸಂಖ್ಯಾತರು, ದುರ್ಬಲರು, ವಿಶೇಷ ಚೇತನರನ್ನು ಗುರುತಿಸಿ ಮತದಾರರ ಪಟ್ಟಿಗೆ ಸೇರಿಸಲು ಸಹಕಾರ ನೀಡಬೇಕು. ಭಾರತ ಚುನಾವಣಾ ಆಯೋಗದ ಮತದಾರರ ಪಟ್ಟಿ ಪರಿಷ್ಕರಣೆಯ ಮಹತ್ತರ ಕಾರ್ಯದ ಯಶಸ್ವಿಗೆ ಸಹಕರಿಸಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ರಾಜಕೀಯ ಪಕ್ಷಗಳ ಪ್ರತಿನಿಧಿಗಳಲ್ಲಿ ಮನವಿ ಮಾಡಿದರು. ಚುನಾವಣಾ ಶಿರಸ್ತೇದಾರ್ ಬಸವರಾಜು, ವಿವಿಧ ರಾಜಕೀಯ ಪಕ್ಷಗಳ ಪ್ರತಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮದ್ದೂರು ಚೆಕ್ ಪೋಸ್ಟ್ ಬಳಿ ಗೂಡ್ಸ್ ವಾಹನಕ್ಕೆ ಆಕಸ್ಮಿಕ ಬೆಂಕಿ



ಬೆಂಕಿಯಿಂದ ಉರಿಯುತ್ತಿದ್ದ ಪಿಕಪ್ ಅನ್ನು ಅಗ್ನಿಶಾಮಕ ಸಿಬ್ಬಂದಿ ನಂದಿಸಿದರು.

ಗುಂಡ್ಲುಪೇಟೆ, ಮಾ.17– ನೆರೆಯ ಕೇರಳಕ್ಕೆ ದ್ರಾಕ್ಷಿ ಹಣ್ಣು ಸರಬರಾಜು ಮಾಡಿ ವಾಪಸಾಗುತ್ತಿದ್ದ ಗೂಡ್ಸ್ ವಾಹನವು ಚಲಿಸುವಾಗಲೇ ಕಾಣಿಸಿಕೊಂಡ ಬೆಂಕಿಯಿಂದ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ.

ಸೋಮವಾರ ಕೇರಳದಿಂದ ಬಂಡೀಪುರ ರಾಷ್ಟ್ರೀಯ ಉದ್ಯಾನದ ಅರಣ್ಯ ಪ್ರದೇಶದ ಮಾರ್ಗವಾಗಿ ವಾಪಸಾಗುತ್ತಿದ್ದ ಟಾಟಾ ಗೂಡ್ಸ್ ವಾಹನ ಮದ್ದೂರು ಚೆಕ್‌ಪೋಸ್ಟ್ ಸಮೀಪ ಸಾಗುವಾಗ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ಚಾಲಕ ವಾಹನವನ್ನು ಬಿಟ್ಟು ಕೆಳಗಿಳಿದು ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಈ ಬಗ್ಗೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ಷಣಮಾತ್ರದಲ್ಲಿ ತಪ್ಪಿದ ಅನಾಹುತ: ಮೂಲೆಹೊಳೆ ಮಾರ್ಗವಾಗಿ 22 ಕಿಲೋ ಮೀಟರ್ ಅರಣ್ಯ ಪ್ರದೇಶದಲ್ಲಿ ಸಾಗಿದ ವಾಹನವು ಮದ್ದೂರು ಚೆಕ್‌ಪೋಸ್ಟ್ ದಾಟುತ್ತಿದ್ದಂತೆ ಬೆಂಕಿ ಕಾಣಿಸಿಕೊಂಡಿದೆ. ಅಕಸ್ಮಾತ್ ಕೆಲವೇ ನಿಮಿಷಗಳ ಮೊದಲು ಬೆಂಕಿ ಕಾಣಿಸಿಕೊಂಡಿದ್ದರೆ ಅರಣ್ಯ ಪ್ರದೇಶಕ್ಕೆ ವ್ಯಾಪಿಸಿ ಭಾರಿ ಅನಾಹುತ ಸಂಭವಿಸುವ ಅಪಾಯ ಎದುರಾಗಿತ್ತು. ಸುದ್ದಿ ತಿಳಿದ ಅಗ್ನಿಶಾಮಕದಳದ ಸಿಬ್ಬಂದಿಗಳು ವಾಹನದಲ್ಲಿ ಹೊತ್ತಿ ಉರಿಯುತ್ತಿದ್ದ ಬೆಂಕಿಯನ್ನು ನಂದಿಸಿದ್ದಾರೆ.

ಟಾಟಾ ಏಸ್ ಮಗುಚಿ ಬಿದ್ದು 10ಕ್ಕೂ ಹೆಚ್ಚು ಮಂದಿಗೆ ಗಾಯ

ಗುಂಡ್ಲುಪೇಟೆ: ಹೆಗ್ಗಡದೇವನ ಕೋಟೆಯ ಚಿಕ್ಕದೇವಮ್ಮ ಬೆಟ್ಟಕ್ಕೆ ದೇವಿಯ ದರ್ಶನಕ್ಕೆ ಹೊರಟಿದ್ದ ಭಕ್ತರ ಟಾಟಾ ಏಸ್ ವಾಹನ ಮಗುಚಿ ಬಿದ್ದ ಪರಿಣಾಮ ಹತ್ತಕ್ಕೂ ಹೆಚ್ಚಿನ ಭಕ್ತರಿಗೆ ಪೆಟ್ಟು ಬಿದ್ದಿರುವ ಘಟನೆ ತಾಲೂಕಿನ ಅಣ್ಣೂರು ಕೇರಿ ಸಮೀಪ ನಡೆದಿದೆ.

ತಾಲೂಕಿನ ಅಣ್ಣೂರು ಕೇರಿ ಗ್ರಾಮದ ಸುಮಾರು 20ಕ್ಕೂ ಹೆಚ್ಚಿನ ಮಹಿಳೆ ಹಾಗೂ ಪುರುಷರು ಟಾಟಾ ಏಸ್ ವಾಹನದಲ್ಲಿ ಸೋಮವಾರ ಹೆಚ್‌ಡಿ ಕೋಟೆ ತಾಲೂಕಿನ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳುತ್ತಿದ್ದರು. ಸ್ವಲ್ಪ ದೂರ ತೆರಳಿದ ಆಟೋ ಚಾಲಕನ ಅತಿವೇಗ ಹಾಗೂ ನಿರ್ಲಕ್ಷ್ಯದಿಂದ ಸಮೀಪ ರಸ್ತೆ ತಿರುವಿನಲ್ಲಿ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದೆ. ಘಟನೆಯಲ್ಲಿ ಜಯಂತಿ, ರಾಜಮ್ಮ, ನಾಗಮ್ಮ, ರಾಮೇಗೌಡ, ಮಹದೇವಮ್ಮ, ಕುಮಾರ, ಮಂಜು, ರಂಗಮ್ಮ, ಕೆಂಪರಾಜು, ಚಿಕ್ಕದೇವಮ್ಮ, ಮಂಜು, ಜ್ಯೋತಿ, ಸ್ವಾಮಿ, ಪ್ರೇಮಾ, ಕುಸುಮ, ಮಹೇಶ ಹಾಗೂ ರಾಜಶೆಟ್ಟಿ ಎಂಬುವರಿಗೆ ತೀವ್ರ ಪೆಟ್ಟು ಬಿದ್ದಿದೆ. ಈ ಸಂದರ್ಭದಲ್ಲಿ ರಸ್ತೆಯಲ್ಲಿ ಸಾಗುತ್ತಿದ್ದ ಬೇರೆ ವಾಹನಗಳವರು ಆಟೋ ಕೆಳಗೆ ಸಿಲುಕಿದ್ದ ಜನರನ್ನು ಹೊರಗೆ ಎಳೆದರು. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ತೆರಳಿದ ಹೊಯ್ಸಳ ಪೊಲೀಸರು ಸಾರ್ವಜನಿಕರ ನೆರವಿನಿಂದ ಗಾಯಾಳುಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಕೊಡಿಸಿದರು.

ಗಾಯಾಳುಗಳಲ್ಲಿ ಐವರನ್ನು ಜಿಲ್ಲಾಸ್ಪತ್ರೆಗೆ ಮತ್ತು ಏಳು ಜನರನ್ನು ಮೈಸೂರಿನ ಕೆಆರ್ ಆಸ್ಪತ್ರೆಗೆ ಘಟನೆಯಲ್ಲಿ ತೀವ್ರ ಪೆಟ್ಟು ಬಿದ್ದಿರುವ 17 ಜನರನ್ನು ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಚಾಲಕ ಮತ್ತು ವಾಹನವನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಪ್ರಯಾಣಿಕರನ್ನು ಪೊಲೀಸರು ಆಸ್ಪತ್ರೆಗೆ ಕರೆದೊಯ್ಯುತ್ತಿರುವುದು.

ಬೇಗೂರಲ್ಲಿ ಇಂದು ಕೊಂಡೋತ್ಸವ

ಬೇಗೂರು,ಮಾ.17– ಬೇಗೂರು ಗ್ರಾಮದ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ಕೊಂಡೋತ್ಸವ ಮತ್ತು ಜಾತ್ರಾ ಮಹೋತ್ಸವ ಮಾ.18 ರಂದು ನಡೆಯಲಿದೆ. ಮಾ.18ರ ಮಂಗಳವಾರ ಮುಂಜಾನೆ ಬಂಡಿಗೆರೆ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಕೊಂಡೋತ್ಸವ ನಡೆಯಲಿದ್ದು ಮಧ್ಯಾಹ್ನದ ಬಳಿ ರಥೋತ್ಸವ ನಡೆಯಲಿದೆ.

ಬಂಡೀಪುರ ಅರಣ್ಯದಲ್ಲಿ ಬಿರುಸಿನ ಮಳೆ

ಗುಂಡ್ಲುಪೇಟೆ, ಮಾ–17– ತಾಲೂಕಿನ ಬಂಡೀಪುರ ಅರಣ್ಯಕ್ಕೆ ಸೋಮವಾರ ಮಳೆ ಬೀಳುವ ಮೂಲಕ ಆಕಸ್ಮಿಕ ಬೆಂಕಿ ಭೀತಿಯನ್ನು ದೂರಮಾಡಿದೆ.

ಸೋಮವಾರ ಮಧ್ಯಾಹ್ನ ಆರಂಭವಾದ ಮಳೆ ಸುಮಾರು ಎರಡು ಗಂಟೆಗಳ ಕಾಲ ಸುರಿದಿದೆ. ಕಳೆದ ಬುಧವಾರವೂ ಬಂಡೀಪುರದಲ್ಲಿ ಉತ್ತಮ ಮಳೆಯಾಗಿತ್ತು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಂಡೀಪುರ ವಲಯ, ಗೋಪಾಲಸ್ವಾಮಿಬೆಟ್ಟ ವಲಯ, ಮೂಲೆಹೊಳೆ ವಲಯ, ಬಫರ್ ವಲಯ ಹಾಗೂ ಕುಂದಕೆರೆ ವಲಯಗಳಿಗೆ ಉತ್ತಮ ಮಳೆಬಿದ್ದಿದೆ. ಮಧ್ಯಾಹ್ನದ ಸುಮಾರಿಗೆ ಬೀಳುತ್ತಿದ್ದ ತುಂತುರು ಹನಿಗಳು ಸಂಜೆಯಾಗುತ್ತಿದ್ದಂತೆ ಗುಡುಗಿನೊಂದಿಗೆ ಬಿರುಸು ಮಳೆ ಬೀಳಲಾರಂಭಿಸಿತು. ಸುಮಾರು ಮುಕ್ಕಾಲು ಗಂಟೆಗೂ ಹೆಚ್ಚಿನ ಕಾಲ ಸುರಿದ ಮಳೆಯಿಂದ ಅರಣ್ಯ ಪ್ರದೇಶವು ಆಕಸ್ಮಿಕ ಬೆಂಕಿ ಭೀತಿಯಿಂದ ಸದ್ಯಕ್ಕೆ ಪಾರಾಗುವ ಜತೆಗೆ ಒಣಗಿ ಹೋಗಿದ್ದ ಹುಲ್ಲು ಗರಿಕೆ ಚಿಗುರಿದರೆ ಬೇಸಿಗೆಯ ಬಿಸಿಲಿನಲ್ಲಿ ಬಸವಳಿದಿದ್ದ ವನ್ಯಜೀವಿಗಳಿಗೆ ಸ್ವಲ್ಪ ಮಟ್ಟಿಗೆ ಆಹಾರ ಕೊರತೆ ನೀಗಿಸುವ ಭರವಸೆ ಮೂಡಿಸಿದೆ.

ಇನ್ನೂ ಒಂದೆರಡು ದಿನಗಳ ಕಾಲ ಮಳೆ ಬಿದ್ದರೆ ಹುಲ್ಲುಗಳು ಚಿಗುರಿ ಬೆಂಕಿ ಭೀತಿಯನ್ನು ದೂರಾಗಿಸಲಿದೆ ಎಂದು ಬಂಡೀಪುರ ಉಪವಿಭಾಗದ ಎಸಿಎಫ್ ಎನ್.ಪಿ.ನವೀನ್ ಕುಮಾರ್ ತಿಳಿಸಿದ್ದಾರೆ.



ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಅರಣ್ಯದಲ್ಲಿ ಮಳೆ ಸುರಿದಿರುವುದು.

ಚಾ.ನಗರದಲ್ಲಿ ಬ್ರಹ್ಮಕುಮಾರಿಯರಿಂದ ಮಹಿಳಾ ದಿನಾಚರಣೆ



ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ಚಾಮರಾಜನಗರ, ಮಾ.17–ಪ್ರತಿಯೊಬ್ಬ ನಾಗರಿಕರು ದೈನಂದಿನ ಚಟುವಟಿಕೆ ಜೊತೆ ಧ್ಯಾನ ಯೋಗದ ಅಭ್ಯಾಸ ಮಾಡಿಕೊಂಡರೆ ಮನಸ್ಸಿಗೆ ಸುಖ ಶಾಂತಿ ನೆಮ್ಮದಿ ಸಿಗಲಿದೆ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ದಾನೇಶ್ವರೀಜೀಯವರು ಅಭಿಪ್ರಾಯಪಟ್ಟರು

ನಗರದ ಜೋಡಿ ರಸ್ತೆಯಲ್ಲಿರುವ ಪ್ರಕಾಶ ಭವನದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ದಿನನಿತ್ಯ ಮೋಸ, ವಂಚನೆ, ಸುಳ್ಳು, ನಂಬಿಕೆ ದ್ರೋಹದಂತಹ ವಾತಾವರಣದಿಂದ ಹೊರಗೆ ಬಂದು ಜನರನ್ನು ಸಕರಾತ್ಮದ ಕಡೆ ಕರೆದೊಯ್ಯುವ ಸೇವೆ ಮಾಡುವ ಅಭಿರುಚಿ ಬೆಳೆಸಿಕೊಳ್ಳಬೇಕು ಆಗ ಸರ್ವರಿಂದ ಆಶೀರ್ವಾದಕ್ಕೆ ಪಾತ್ರರಾಗಬಹುದು ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ ಮಾತನಾಡಿ, ರಾಜಕೀಯ ಜಂಜಾಟದಲ್ಲಿ ಮನುಷ್ಯನಿಗೆ ಆರೋಗ್ಯ ನೆಮ್ಮದಿ ಅತಿ ಮುಖ್ಯ ಇದನ್ನು ಪ್ರಾಪ್ತಿ ಮಾಡಿಕೊಳ್ಳಲು ಆಧ್ಯಾತ್ಮಿಕ ಚಿಂತನೆ ಅತ್ಯಗತ್ಯ ಮಾನವ ಜನ್ಮ ಇರೋತನಕ ಹಿಂದೂ ಮುಸ್ಲಿಂ ಕ್ರಿಶ್ಚಿಯನ್. ಅಣ್ಣ ತಮ್ಮಂದಿರಂತೆ, ಅಕ್ಕತಂಗಿಯರಂತೆ ಜೀವನ ನಡೆಸಲು ನಮ್ಮ ಆಚಾರ–ವಿಚಾರ ಪದ್ಧತಿಗಳು ಈಗಿನ ಕಂಪ್ಯೂಟರ್ ಕಾಲದಲ್ಲೂ ಸಹ ಇದೆ ಎಂದು ಹೇಳಿದರು.

ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಮಹಿಳೆಯರಿಗೆ ಬಹುಮಾನ ವಿತರಿಸಿ ಮಾತನಾಡಿದ ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ.ಬಂಗಾರು, ವಿಶ್ವದಲ್ಲಿ ಪುರುಷರಿಗೆ ಸರಿ ಸಮಾನವಾಗಿ ಮಹಿಳೆಯರು ಉತ್ತಮ ಸಾಧನೆ ಮಾಡುತ್ತಿದ್ದಾರೆ.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಇನ್ನರ್‌ವೀಲ್ ಸಂಸ್ಥೆ ಮಾಜಿ ಅಧ್ಯಕ್ಷೆ ಲಕ್ಷ್ಮಿ ಶಿವಕುಮಾರ್, ಸಮಾಜ ಸೇವಕಿ ಪುಷ್ಪಲತಾ ಸುಬ್ರಮಣ್ಯ ಮಾತನಾಡಿದರು. ನಗರಸಭೆ ಆರೋಗ್ಯಾಧಿಕಾರಿ ಪುಷ್ಪ, ಬಿ.ಕೆ. ಮಂಜುನಾಥ ಆರಾಧ್ಯ, ಸಮಾಜ ಸೇವಕಿ ನಾಗು ರಮೇಶ್, ಆರೋಗ್ಯ ಇಲಾಖೆಯ ಗೀತಾ, ನ್ಯಾಯಾಂಗ ಇಲಾಖೆಯ ಶ್ರೀನಿವಾಸ್, ಪ್ರಮೀಳಾ ಊದಗಡ್ಡಿ, ವಿದ್ಯಾ, ಸಿದ್ದಯ್ಯ, ಸುಂದರ್, ಸತೀಶ್, ಸುಂದರಮ್ಮ ಶೋಭಾ ಹಾಜರಿದ್ದರು.

ಪ್ರತಿಭಾವಂತೆ ವಿದ್ಯಾರ್ಥಿಗಳಾದ ಕೃತಿಕಾ, ನಿಹಾರಿಕ, ಪಲ್ಲವಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರಲ್ಲಿ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಜನ್ಮ ದಿನಾಚರಣೆ

ಭಾರಿ ಗಾತ್ರದ ಕಟೌಟ್‌ಗಳ ಮೂಲಕ ಅಭಿಮಾನ ಮೆರೆದ ಅಭಿಮಾನಿಗಳು



ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡಿರುವ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು.



ಸಿಂಹದ ಮರಿ ಸೇವಾ ಟ್ರಸ್ಟ್ ವತಿಯಿಂದ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.



ಡಿ.ದೇವರಾಜ ಅರಸ್ ರಸ್ತೆಯಲ್ಲಿ ಪುನೀತ್ ಬೃಹತ್ ಕಟೌಟ್ ಅಳವಡಿಸಿರುವುದು.

ಮೈಸೂರು,ಮಾ.17(ಎಂಟಿವೈ)– ಪವರ್‌ಸ್ಟಾರ್ ದಿ.ಪುನೀತ್ ರಾಜ್‌ಕುಮಾರ್ ಅವರ 50ನೇ ವರ್ಷದ ಜನ್ಮ ದಿನವನ್ನು ಮೈಸೂರಿನ ವಿವಿಧೆಡೆ ಸೇವಾ ಕಾರ್ಯದ ಮೂಲಕ ಆಚರಿಸಲಾಯಿತು.

ಕನ್ನಡ ಚಿತ್ರರಂಗದಲ್ಲಿ ಮನೋಜ್ಞ ಅಭಿನಯದ ಮೂಲಕ ಅಪಾರ ಅಭಿಮಾನಿ ವೃಂದವನ್ನು ಹೊಂದಿದ್ದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಾಲ್ಕು ವರ್ಷದ ಹಿಂದೆ ಅಕಾಲಿಕವಾಗಿ ನಿಧನರಾಗಿದ್ದರು. ಆದರೂ ಅಭಿಮಾನಿ ವೃಂದ ನೆಚ್ಚಿನ ನಟನ ಮೇಲಿನ ಅಭಿಮಾನವನ್ನು ಇಮ್ಮಡಿಗೊಳಿಸಿಕೊಂಡಿದೆ. ಅವರ 50ನೇ ವರ್ಷದ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಕಟೌಟ್‌ನಲ್ಲಿ ಮಿಂಚಿ ಮಿಂದೆದ್ದ ಅಪ್ಪು: ಕನ್ನಡ ಚಿತ್ರರಂಗ ಮಾತ್ರವಲ್ಲದೆ, ದೇಶದುದ್ದಗಲಕ್ಕೂ ಅಭಿಮಾನಿ ಬಳಗ ಹೊಂದಿರುವ ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನದ ಅಂಗವಾಗಿ ಮೈಸೂರಿನ ವಿವಿಧೆಡೆ ಬೃಹತ್ ಗಾತ್ರದ ಕಟೌಟ್ ಅಳವಡಿಸಿ ಅಭಿಮಾನ ಮೆರೆಯಲಾಯಿತು. ದೇವರಾಜ ಅರಸ್ ರಸ್ತೆ, ಚಾಮರಾಜ ಜೋಡಿ ರಸ್ತೆ, ಅಗ್ರಹಾರ, ವಾಲ್ಮೀಕಿ ರಸ್ತೆ, ಸ್ಟರ್ಲಿಂಗ್ ಟಾಕೀಸ್ ರಸ್ತೆ, ಪಡುವಾರಹಳ್ಳಿ, ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್, ಚಾಮುಂಡಿಪುರಂ ಸರ್ಕಲ್, ಇಟ್ಟಿಗೆಗೂಡು, ಮೇದರಕೇರಿ ಬ್ಲಾಕ್ ಸೇರಿದಂತೆ ವಿವಿಧೆಡೆ ಪುನೀತ್ ರಾಜ್‌ಕುಮಾರ್ ಅವರ ನಾನಾ ಭಂಗಿಯ ಭಾವಚಿತ್ರದ ಬೃಹತ್ ಕಟೌಟ್ ಅಳವಡಿಸಿ, ಪುಷ್ಪ ನಮನ ಸಲ್ಲಿಸಲಾಯಿತು.

ರಕ್ತದಾನ ಶಿಬಿರ: ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರದಲ್ಲಿ 25 ಅಭಿಮಾನಿಗಳು ಸ್ವಯಂ ಪ್ರೇರಿತ ರಕ್ತದಾನ ಮಾಡುವ ಮೂಲಕ ಪುನೀತ್ ರಾಜಕುಮಾರ್ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.



ಮಹಾರಾಣಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರು ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಜನನವಾದ ಮೇಲೆ ಮರಣ ನಿಶ್ಚಿತ. ಮರಣಿಸಿದ ನಂತರವೂ ಜನರ ಮನಸ್ಸಿನಲ್ಲಿ ಜೀವಂತವಾಗಿರುವಂತೆ ಬದುಕಬೇಕು. ಅಂಥ ಬದುಕು ನಮ್ಮ ಪುನೀತ್ ರಾಜ್‌ಕುಮಾರ್ ಅವರದ್ದಾಗಿತ್ತು ಎಂದು ಅಭಿಪ್ರಾಯಪಟ್ಟರು.

ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಲಿಂಗರಾಜು ಮಾತನಾಡಿ, ಪುನೀತ್ ರಾಜ್‌ಕುಮಾರ್ ನಟನೆ ಮಾತ್ರವಲ್ಲದೆ, ಸಮಾಜ ಸೇವೆಯಲ್ಲೂ ತೊಡಗಿದ್ದರು. ಅವರಂತೆ ಅವರ ಅಭಿಮಾನಿಗಳು ಒಳ್ಳೆಯ ಕೆಲಸ ಮಾಡುವ ಸಂಕಲ್ಪ ಮಾಡಬೇಕು. ತಮ್ಮ ಅಭಿನಯದ ಪ್ರತಿಯೊಂದು ಚಿತ್ರದಲ್ಲೂ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುತ್ತಿದ್ದರಲ್ಲದೇ, ಎಲೆಮರೆಯ ಕಾಯಂತೆ ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದು, ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕರಾದ ಗಿರೀಶ್, ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಖುಷಿ ವಿನು, ಸವಿತಾ ಘಾಟ್ಕೆ, ವಕೀಲರಾದ ಜಯಶ್ರೀ ಶಿವರಾಮ್, ಮಹಾನ್ ಶ್ರೇಯಸ್, ಹೇಮಾ, ಪವನ್ ಹಾಗೂ ಇನ್ನಿತರರು ಇದ್ದರು.

ಅನ್ನದಾನ: ಮೈಸೂರಿನ ಡಿ.ದೇವರಾಜ ಅರಸ್ ರಸ್ತೆ ಹಾಗೂ ಜೆಎಲ್‌ಬಿ ರಸ್ತೆ ಜಂಕ್ಷನ್‌ನಲ್ಲಿ ದಿ.ಪುನೀತ್ ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ಕಾರ್ಯಕ್ರಮವನ್ನು ಸಿಂಹದಮರಿ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿತ್ತು. ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಸಾರ್ವಜನಿಕರಿಗೆ ರೈಸ್ ಬಾತ್, ಸಿಹಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸಿಂಹದಮರಿ ಸೇವಾ ಟ್ರಸ್ಟ್ ಕಾರ್ಯಾಧ್ಯಕ್ಷ ದರ್ಶನ್ ಯದುರಾಜ್, ಗೌರವಾಧ್ಯಕ್ಷ ಕೆ.ದಿನೇಶ್, ಅಧ್ಯಕ್ಷ ನಂಜುಂಡಸ್ವಾಮಿ, ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ಬಿಜೆಪಿ ಮುಖಂಡ ರಾಕೇಶ್ ಗೌಡ, ಸಚಿನ್, ಸಿಂಹದಮರಿ ಟ್ರಸ್ಟಿನ ಸದಸ್ಯರಾದ ರೂಪೇಶ್, ರವಿ, ನವೀನ್, ಪ್ರಾಣೇಶ್, ಪ್ರಶಾಂತ್, ಭರತ್, ಮುರಳಿಧರ್, ಯೋಗೇಶ್, ವಿನೋದ್ ಕುಮಾರ್, ವಿಕಾಸ್, ಶಿವು ಹಾಗೂ ಪುನೀತ್ ರಾಜಕುಮಾರ್ ಅವರ ಅಭಿಮಾನಿಗಳು ಪಾಲ್ಗೊಂಡಿದ್ದರು.

ಪುನೀತ್ ರಾಜಕುಮಾರ್ 50ನೇ ಜನ್ಮದಿನಾಚರಣೆ...



ಒಂಟಿಕೊಪ್ಪಲಿನ ಬೃಂದಾವನ ಗೆಳೆಯರ ಬಳಗದ ವತಿಯಿಂದ ದಿವಂಗತ ಡಾ॥ ಪುನೀತ್ ರಾಜಕುಮಾರ್ ಅವರ 50ನೇ ವರ್ಷದ ಜನ್ಮದಿನ ಆಚರಿಸಲಾಯಿತು. ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅಭಿಮಾನಿಗಳಿಗೆ ಕೇಕ್ ವಿತರಿಸಿದರು. ಈ ಸಂದರ್ಭದಲ್ಲಿ ರೂಪೇಶ್, ರವಿ, ರಾಜು, ಲೋಕೇಶ್, ಜ್ಞಾನೇಶ್, ರವಿ, ಮಹೇಶ್, ಶೇಖರ್ ಇನ್ನಿತರರು ಉಪಸಿತರಿದ್ದರು

ಸಿ.ನರೇಂದ್ರಗೆ ಅಭಿನಂದನೆ...



ಮೈಸೂರು ತಾಲೂಕು ನಾಗವಾಲ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಉಪಾಧ್ಯಕ್ಷ ಬೊಮ್ಮನಹಳ್ಳಿ ಬಿ.ಹೆಚ್.ಕುಮಾರ್, ನಿರ್ದೇಶಕರಾದ ಧನಂಜಯ, ಕೆ.ಮಹೇಶ್, ಪುಟ್ಟಯ್ಯ, ಸೀಗಳ್ಳಿ ಕುಮಾರ್, ಶ್ರೀಮತಿ ಸವಿತಾ, ಶಿವರಾಜ್, ಸೋಮಣ್ಣ, ಪ್ರಕಾಶ್, ಶ್ರೀಮತಿ ಹೇಮಾ, ಬಿ.ಕೆ.ಈಶ್ವರ್ ಇನ್ನಿತರರಿದ್ದರು.

ಹಾಸನ ಮಿತ್ರ

ಹಾಸನ ವಿವಿ ಉಳಿಸಿ, ಮೂಲ ಸೌಕರ್ಯ ಕಲ್ಪಿಸುವಂತೆ ಡಿಸಿಗೆ ಮನವಿ



ಹಾಸನ, ಮಾ.17– ಇಲ್ಲಿನ ಹಾಸನ ವಿಶ್ವವಿದ್ಯಾಲಯವನ್ನು ಉಳಿಸಿ, ಸ್ವತಂತ್ರವಾಗಿ ಅಭಿವೃದ್ಧಿಪಡಿಸುವಂತೆ ಆಗ್ರಹಿಸಿ ಹಾಸನ ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ ಸದಸ್ಯರು ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.

ಹಾಸನ ವಿಶ್ವವಿದ್ಯಾಲಯವನ್ನು ಮುಚ್ಚಿ ಮೈಸೂರು ವಿಶ್ವವಿದ್ಯಾಲಯಕ್ಕೆ ಮರು ವಿಲೀನಗೊಳಿಸುವ ಕುರಿತು ರಾಜ್ಯ ಸಚಿವ ಸಂಪುಟದ ಉಪಸಮಿತಿಯ ಶಿಫಾರಸನ್ನು ಜಿಲ್ಲೆಯ ಜನರು, ನಾವು ವಿರೋಧಿಸುತ್ತೇವೆ ಎಂದು ತಿಳಿಸಿದರು.

ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಾ.16ರಂದು ಸಂಸದ ಶ್ರೇಯಸ್ ಪಟೇಲ್, ಶಾಸಕ ಎ.ಮಂಜು ಸೇರಿದಂತೆ ಜಿಲ್ಲೆಯ ರಾಜಕೀಯ ಪಕ್ಷಗಳ ಪ್ರಮುಖ ಮುಖಂಡರು, ಪ್ರಮುಖ ವ್ಯಕ್ತಿಗಳು, ಸಂಘಟನೆಗಳ ಮುಖಂಡರು, ಸಾಹಿತಿಗಳು, ವಿಚಾರವಾದಿಗಳು, ಪತ್ರಕರ್ತರು ಮತ್ತು ಶಿಕ್ಷಣ ಪ್ರೇಮಿಗಳು ಭಾಗವಹಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಸರ್ವಾನುಮತದ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಹಾಸನ ವಿಶ್ವವಿದ್ಯಾಲಯ ಕ್ಯಾಂಪಸ್ 78.08 ಎಕರೆ ಪ್ರದೇಶವನ್ನು ಹೊಂದಿದ್ದು, ಅಗತ್ಯ ಪ್ರಮಾಣದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕೊರತೆ, ಮೂಲ ಸೌಕರ್ಯದ ಕೊರತೆ, ಅಗತ್ಯ ಅನುದಾನದ ಕೊರತೆಯ ನಡುವೆಯೂ ಉತ್ತಮವಾಗಿ ಕೆಲಸ ಮಾಡುತ್ತಿದೆ. ಇದು ಹಾಸನ ಜಿಲ್ಲೆಯ ಹೆಮ್ಮೆಯೂ ಆಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ರಾಜ್ಯ ಸರ್ಕಾರ ತಾನೇ ಆರಂಭಿಸಿರುವ ಹಾಸನ ವಿಶ್ವವಿದ್ಯಾಲಯವನ್ನು ಮುಚ್ಚಲು ಹೊರಟಿರುವುದು ಜಿಲ್ಲೆಯ ವಿದ್ಯಾರ್ಥಿಗಳಿಗೆ ಮಾಡುತ್ತಿರುವ ಅತಿ ದೊಡ್ಡ ಅನ್ಯಾಯ. ಈ ಹಿಂದೆ ರಾಜ್ಯ ಸರ್ಕಾರ ಯಾವುದೇ ಅಗತ್ಯ ಮೂಲ ಸೌಕರ್ಯ, ಅನುದಾನ ಮತ್ತು ಸಿಬ್ಬಂದಿ ಒದಗಿಸದೇ ತರಾತುರಿಯಲ್ಲಿ ಹಾಸನ ವಿಶ್ವವಿದ್ಯಾಲಯ ಸ್ಥಾಪಿಸಿತ್ತು. ಈಗ ಹಿಂದಿನ ಕೊರತೆಗಳನ್ನು ಸರಿಪಡಿಸಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವ ಬದಲಿಗೆ, ಸರ್ಕಾರ ಅದನ್ನು ಮುಚ್ಚಲು ಹೊರಟಿದೆ. ಇದು ಸರ್ಕಾರಕ್ಕೆ ಉನ್ನತ ಶಿಕ್ಷಣ ಆದ್ಯತೆ ವಿಷಯವಾಗಿಲ್ಲ ಎನ್ನುವುದನ್ನು ತೋರಿಸುತ್ತದೆ ಎಂದು ದೂರಿದರು.

ಆರ್.ಪಿ.ವೆಂಕಟೇಶ್‌ಮೂರ್ತಿ, ಡಾ.ಮಲ್ಲೇಶ್‌ಗೌಡ, ಧರ್ಮೇಶ್, ರೂಪ ಹಾಸನ, ಎಚ್.ಕೆ. ಸಂದೇಶ್, ಎಂ.ಜಿ. ಪೃಥ್ವಿ, ಅಂಬುಗ ಮಲ್ಲೇಶ್, ಅಗಿಲೆ ಯೋಗೇಶ್, ಚಿನ್ನೇನಹಳ್ಳಿ ಸ್ವಾಮಿ, ಶಿವರಾಮೇಗೌಡ, ಅರವಿಂದ, ಕುಮಾರ್ ಗೌರವ್, ವೆಂಕಟೇಗೌಡ, ಸಮೀರ್ ಅಹಮದ್, ಕಲಾವತಿ ಇತರರು ಉಪಸ್ಥಿತರಿದ್ದರು.

ಬೈಕ್ ರ್‍ಯಾಲಿ, ಆರೋಗ್ಯ ತಪಾಸಣೆ ನಡೆಸಿ ಅಪ್ಪು ಹುಟ್ಟುಹಬ್ಬ ಆಚರಣೆ

ಹಾಸನ,ಮಾ.17–ದಿ. ಡಾ. ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ತಾಲೂಕಿನ ಸಾಲಗಾಮೆಯಲ್ಲಿ ಸೋಮವಾರದಂದು ಡಿ.ಪಿ ಚಂದ್ರಶೇಖರ್ (ಜೆಸಿಬಿ) ಅಭಿಮಾನಿಗಳ ಬಳಗದ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಬೈಕ್ ರಾಲಿ ಕಾರ್ಯಕ್ರಮ ನಡೆಯಿತು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಅವರು ಜೀವಿತಾವಧಿಯಲ್ಲಿ ಮಾಡಿದ ಅಪಾರ ಸೇವೆಯಿಂದಲೇ ಇಂದಿಗೂ ಜನರ ಮನಸ್ಸಿನಲ್ಲಿ ಜೀವಂತವಾಗಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಡಿ.ಪಿ.ಚಂದ್ರಶೇಖರ್ (ಜೆಸಿಬಿ) ಮಾತನಾಡಿ, ಪುನೀತ್ ರಾಜ್‌ಕುಮಾರ್ ಜಾತ್ಯಾತೀತ ನಾಯಕ. ಅವರ ಸೇವಾ ಮನೋಭಾವನೆ ದಾರಿಯಲ್ಲಿ ನಡೆಯುವ ಸಲುವಾಗಿ ಈ ಶಿಬಿರ ಆಯೋಜಿಸಲಾಗಿದೆ. ವಿವಿಧ ಆಸ್ಪತ್ರೆಗಳಿಂದ ನುರಿತ ವೈದ್ಯರ ತಂಡ ಆಗಮಿಸಿ ಆರೋಗ್ಯ ತಪಾಸಣೆಯಲ್ಲಿ ತೊಡಗಿದೆ. ಅಲ್ಲದೆ ರಕ್ತದಾನ, ನೇತ್ರದಾನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಭಾಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಅಂಗವಾಗಿ ನಗರದ ಎನ್.ಆರ್ ವೃತ್ತದ ಬಳಿ ಇರುವ ಪುನೀತ್ ರಾಜ್‌ಕುಮಾರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಅಲ್ಲಿಂದ ಬೈಕ್ ರ್‍ಯಾಲಿ ಮೂಲಕ ಸಾಲಗಾಮೆ ತಲುಪಿತು. ಈ ವೇಳೆ ಡಿಪಿ ಚಂದ್ರಶೇಖರ್ ಅಭಿಮಾನಿಗಳ ಬಳಗದ ಅಧ್ಯಕ್ಷ ಪ್ರದೀಪ್, ಮುಖಂಡರಾದ ಸಂತೋಷ್, ದರ್ಶನ್, ದಿನೇಶ್, ಅಪ್ಪು, ಚಿರಂತ್, ಅಭಿಲಾಶ್, ಜೀವನ್, ರಮ್ಯಾ ಇತರರಿದ್ದರು.

ಮೈಸೂರು ಮಹಾನಗರಪಾಲಿಕೆ ಚುನಾವಣೆ ಮಾಡಲು ಹಕ್ಕೊತ್ತಾಯ



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿಮಹದೇವಪ್ಪ ಅವರನ್ನು ಪ್ರೊ.ನಂಜರಾಜ ಅರಸ್ ನೇತೃತ್ವದಲ್ಲಿ ಭೇಟಿ ಮಾಡಿ ಶೀಘ್ರವೇ ಮೈಸೂರು ಮಹಾನಗರಪಾಲಿಕೆಗೆ ಚುನಾವಣೆ ನಡೆಸಲು ಮನವಿ ಮಾಡಲಾಯಿತು.

ಮೈಸೂರು, ಮಾ. 17– ಮೈಸೂರು ಮಹಾನಗರಪಾಲಿಕೆ ಚುನಾವಣೆ ಹೋರಾಟ ಸಮಿತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ ಮಹದೇವಪ್ಪ ಅವರನ್ನು ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಪ್ರೊ.ನಂಜರಾಜ ಅರಸ್ ಅವರ ನೇತೃತ್ವದಲ್ಲಿ ಭೇಟಿ ಮಾಡಿ ಶೀಘ್ರವೇ ಮೈಸೂರು ಮಹಾನಗರಪಾಲಿಕೆಗೆ ಚುನಾವಣೆ ನಡೆಸಲು ಮನವಿ ಮಾಡಲಾಯಿತು.

ಸ್ಥಳೀಯ ಪಾಲಿಕೆಯಲ್ಲಿ ಸಂದರ್ಭಕ್ಕೆ ಚುನಾವಣೆ ಆಗದೆ ಒಂದು ವರ್ಷ ಆರು ತಿಂಗಳು ಕಳೆದಿವೆ. ಸ್ಥಳೀಯ ಜನರು ಸಣ್ಣಪುಟ್ಟ ಸಮಸ್ಯೆಗಳಿಗೆ ಪರದಾಡುವ ಪರಿಸ್ಥಿತಿ ಬಂದಿದೆ. ಕುಡಿಯುವ ನೀರಿನ ಪೂರೈಕೆ, ಒಳಚರಂಡಿ ದುರಸ್ತಿ, ರಸ್ತೆ ದುರಸ್ತಿ, ಕಸ ವಿಲೇವಾರಿ ಪಾಲಿಕೆಗೆ ಸಂಬಂಧಿಸಿದ ಹಲವು ಕೆಲಸಗಳು ಸಮರ್ಪಕ ಪ್ರತಿನಿಧಿಗಳಿಲ್ಲದೆ ಅಧಿಕಾರಿಗಳು ಜನರಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಹಾಗಾಗಿ ಜನಸಾಮಾನ್ಯರ ಸಾಂವಿಧಾನಿಕ ಹಕ್ಕಾದ ಸ್ಥಳೀಯ ಸಂಸ್ಥೆಯ ಚುನಾವಣೆಯನ್ನು ಕೂಡಲೇ ನಡೆಸಬೇಕು. ಬೃಹತ್ ಮೈಸೂರು ಅನುಷ್ಠಾನಕ್ಕೆ ಕನಿಷ್ಠ ಮೂರು ವರ್ಷಗಳಾಗುತ್ತದೆ. ಅಷ್ಟರ ಹೊತ್ತಿಗೆ ಐದು ವರ್ಷದ ಅವಧಿಯೇ ಮುಗಿದು ಹೋಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟರು.

ಇದಕ್ಕೆ ಸ್ಪಂದಿಸಿದ ಉಸ್ತುವಾರಿ ಸಚಿವರು, ಬೃಹತ್ ಮೈಸೂರು ಬರೀ ಚರ್ಚೆ ಅಷ್ಟೇ. ಅದರ ಆಗು–ಹೋಗುಗಳ ಕುರಿತು ಸಾರ್ವಜನಿಕ ಚರ್ಚೆಗೆ ಬಿಟ್ಟಿದ್ದೇವೆ. ಏಕಾಏಕಿ ಬೃಹತ್ ಮೈಸೂರು ಮಹಾನಗರಪಾಲಿಕೆ ಮಾಡಲಾಗದು. ಅದರ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಬೇಕು. ಆದರೆ ಚುನಾವಣೆ ನಂತರವೇ ಬೃಹತ್ ಮೈಸೂರು ಅನುಷ್ಠಾನ ಸಂಬಂಧ ಪ್ರಕ್ರಿಯೆ ಆರಂಭಿಸುವುದಾಗಿ ಸಮಿತಿಯ ಸದಸ್ಯರಿಗೆ ಭರವಸೆ ನೀಡಿದರು.

ಸಮಿತಿ ಸಂಚಾಲಕರಾದ ಅರವಿಂದ್ ಶರ್ಮ, ಕರ್ನಾಟಕ ಕನ್ನಡ ವೇದಿಕೆಯ ಅಧ್ಯಕ್ಷ ಸುರೇಶ್ ಬಾಬು, ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ಪುಟ್ಟನಂಜಯ್ಯ ದೇವನೂರು, ಶ್ರೀವಾರಿ ನಾಗರಾಜ್, ಕೆಆರ್‌ಎಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ಜಿಲ್ಲಾಧ್ಯಕ್ಷ ಸುಂದರ್ ಪ್ರೇಮ್‌ಕುಮಾರ್, ರವಿ, ರಾಜೇಂದ್ರ, ಟಿ.ಆರ್.ಲೋಕೇಶ್, ಅಭಿಜ್ಞ ಇನ್ನಿತರರು ಉಪಸ್ಥಿತರಿದ್ದರು.

ನಿವೃತ್ತ ಮುಖ್ಯ ಇಂಜಿನಿಯರ್ ಸಿ.ಕೆ.ಮಲ್ಲಪ್ಪರಿಗೆ ಅಭಿನಂದನೆ



ಸರ್ಕಾರದ ಅಪರ ಕಾರ್ಯದರ್ಶಿ, ಮುಖ್ಯ ಇಂಜಿನಿಯರ್ ಆಗಿ, ನಿವೃತ್ತಿ ಹೊಂದಿದ ಸಿ.ಕೆ.ಮಲ್ಲಪ್ಪ ದಂಪತಿಯನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಮಾ. 17– ಕರ್ನಾಟಕ ಸರ್ಕಾರದ ನಿವೃತ್ತ ನೌಕರರ ಗೆಳೆಯರ ಬಳಗದ ಆಶ್ರಯದಲ್ಲಿ ಮೈಸೂರು ಕಲಾಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಸರ್ಕಾರದ ಅಪರ ಕಾರ್ಯದರ್ಶಿಗಳು ಹಾಗೂ ಮುಖ್ಯ ಇಂಜಿನಿಯರ್ ಆಗಿ, ನಿವೃತ್ತಿ ಹೊಂದಿದ ಸಿ.ಕೆ.ಮಲ್ಲಪ್ಪ ಅವರನ್ನು ಅಭಿನಂದಿಸಲಾಯಿತು.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ನಿವೃತ್ತ ಶಿಕ್ಷಕ ನಿಂಗೇಗೌಡ, ನಿವೃತ್ತ ಯೋಧ ಕೆ.ಪಿ.ದಿವಾಕರ, ಚನ್ನಂಗೆರೆ ಶಾಲೆಯ 5ನೇ ತರಗತಿ ವಿದ್ಯಾರ್ಥಿ ಸಿ.ಆರ್.ಧನುಷ್, ನಂದೀಪುರ ಗ್ರಾಮದ ರೈತ ಚೇತನ್, ಅನಾರೋಗ್ಯ ಪೀಡಿತರಾದ ಶ್ರೀಮತಿ ಲಕ್ಷ್ಮಮ್ಮ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಬಿಎಸ್‌ಎನ್‌ಎಲ್‌ನ ನಿವೃತ್ತ ಅಧಿಕಾರಿ ಮಹಾದೇವೇಗೌಡ, ಶ್ರೀಮತಿ ಜಿ.ಆರ್.ಸರೋಜ ಮಲ್ಲಪ್ಪ, ಶ್ರೀಮತಿ ಜಿ.ಎಸ್.ರಂಗಮ್ಮ ರಾಮೇಗೌಡ, ನಿವೃತ್ತ ಕಾರ್ಯಪಾಲಕ ಅಭಿಯಂತರರಾದ ಕೆ.ಎನ್.ಜಗದೀಶ್, ಅಣ್ಣೇಗೌಡ, ನರೇಗಾ ಯೋಜನೆಯ ಅಧೀಕ್ಷಕರಾದ ವೇಣುಗೋಪಾಲ್, ರಮೇಶ್, ಇಂಜಿನಿಯರ್ ಸಿ.ಎಂ. ಸುಮಂತ್, ಡಾ.ಸಿ.ಎಂ.ಪ್ರೀತಂ, ಕೆ.ಜೆ.ನವೀನ್ ಹಾಗೂ ಇತರರು ಉಪಸ್ಥಿತರಿದ್ದರು.

ವ್ಯಕ್ತಿಗಳು ನಾಪತ್ತೆ



ಮೈಸೂರು,ಮಾ.17– ಫೆ.17ರಂದು ಸುಮಾರು 40 ವರ್ಷದ ಮಹದೇವನಾಯ್ಕ, ಕಾಣೆಯಾಗಿದ್ದು, ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 6.0 ಅಡಿ ಎತ್ತರ, ಕನ್ನಡ ಹಾಗೂ ಹಿಂದಿ ಭಾಷೆ ಮಾತನಾಡುತ್ತಾರೆ. ಕೆಂಪು ಮೈಬಣ್ಣ, ದುಂಡು ಮುಖ ಕಪ್ಪು ತಲೆ ಕೂದಲು ಹೊಂದಿದ್ದು, ಎಡಗೈಯಲ್ಲಿ ಕಿಂಗ್ ಆಕಾರದ ಚಿಹ್ನೆ ಇರುವ ಅಚ್ಚೆ ಇರುತ್ತದೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ದೂ. ಸಂ. 08212418324, 9480802247 ಅನ್ನು ಸಂಪರ್ಕಿಸಬಹುದು ಎಂದು ಕುವೆಂಪುನಗರ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾಗೆಯೇ ಮಾರ್ಚ್ 14ರಂದು ಸುಮಾರು 37 ವರ್ಷದ ನಾಸೀರ್ ಪಾಷ ಎಂಬುವವರು ಕಾಣೆಯಾಗಿದ್ದು, ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರು ಅಡಿ ಎತ್ತರ, ಗೋದಿ ಬಣ್ಣ, ಕನ್ನಡ ಮತ್ತು ಉರ್ದು ಮಾತನಾಡುತ್ತಾರೆ. ಈ ವ್ಯಕ್ತಿಯ ದೂ.ಸಂ. 8970368391, ಕಾಣೆಯಾದ ಸಂದರ್ಭದಲ್ಲಿ ಕಪ್ಪು ಬಣ್ಣದ ಅಂಗಿ ಮತ್ತು ನೀಲಿ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಮೈಸೂರು ಜಿಲ್ಲೆಯ ಎಸ್.ಪಿ ಕಚೇರಿ ದೂ. ಸಂ. 0821–2520040, ಮೈಸೂರು ಜಿಲ್ಲಾ ಕಂಟ್ರೋಲ್ ರೂಂ: 0821–2444800, ವರುಣ ಪೊಲೀಸ್ ಠಾಣೆ: 0821–2594411 ಅನ್ನು ಸಂಪರ್ಕಿಸಬಹುದು ಎಂದು ವರುಣ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಶ್ಮೀರದಲ್ಲಿ ಎನ್‌ಕೌಂಟರ್: ಓರ್ವ ಉಗ್ರ ಹತ್ಯೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕುಪ್ವಾರಾದ ಗಡಿ ಜಿಲ್ಲೆ ಹಂದ್ವಾರದ ಜಚಲ್ದಾರಾದ ಕ್ರುಂಭೂರಾ ಪ್ರದೇಶದಲ್ಲಿ ಉಗ್ರರು ಮತ್ತು ಭಾರತೀಯ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಓರ್ವ ಉಗ್ರನನ್ನು ಸೇನಾಪಡೆ ಸದೆಬಡಿದಿದೆ. ಜಚಲ್ದಾರ ಪ್ರದೇಶದಲ್ಲಿ ಉಗ್ರರು ಅಡಗಿ ಕುಳಿತಿರುವ ಬಗ್ಗೆ ಖಚಿತ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಭಾರತೀಯ ಸೇನಾಪಡೆ ಹಾಗೂ ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಜಂಟಿಯಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿತ್ತು. ಈ ವೇಳೆ ಅಡಗಿ ಕುಳಿತಿದ್ದ ಉಗ್ರರು ಭದ್ರತಾ ಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಬಳಿಕ ಶೋಧ ಕಾರ್ಯಾಚರಣೆಯನ್ನು ಎನ್‌ಕೌಂಟರ್ ಆಗಿ ಬದಲಿಸಿದ ಭದ್ರತಾ ಪಡೆಗಳು, ಸ್ಥಳ ಸುತ್ತುವರೆದು ಪ್ರತಿದಾಳಿ ನಡೆಸಿ, ದಿಟ್ಟ ಉತ್ತರ ನೀಡಿದವು. ಕಾರ್ಯಾಚರಣೆಯಲ್ಲಿ ಓರ್ವ ಉಗ್ರರನ್ನು ಹತ್ಯೆ ಮಾಡಲಾಗಿದ್ದು, ಓರ್ವ ಪೊಲೀಸ್ ಸಿಬ್ಬಂದಿಗೆ ಗಾಯವಾಗಿದೆ ಎಂದು ಮೂಲಗಳು ತಿಳಿಸಿವೆ. ಗಾಯಗೊಂಡ ಪೊಲೀಸ್ ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸ್ಥಳದಲ್ಲಿ ಇನ್ನೂ 2–3 ಉಗ್ರರು ಅಡಗಿ ಕುಳಿತಿರುವ ಶಂಕೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಮುಂದುವರೆದಿದೆ.

ದಂಡಿಕೆರೆಯಲ್ಲಿ ಉಚಿತ ಆರೋಗ್ಯ ಶಿಬಿರ



ಮೈಸೂರು, ಮಾ. 17– ಕುಟುಂಬ ದತ್ತು ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಸಮುದಾಯ ವೈದ್ಯಶಾಸ್ತ್ರ ವಿಭಾಗವು, ವರುಣ ಹೋಬಳಿಯ ದಂಡಿಕೆರೆ ಗ್ರಾಮದ ಬಸವೇಶ್ವರ ಮಠದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರವನ್ನು ಬಸವೇಶ್ವರ ಮಠದ ಮಠಾಧೀಶರಾದ ಶ್ರೀ ಬಸವಲಿಂಗ ಸ್ವಾಮೀಜಿ, ವರುಣ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಪ್ರಸಾದ್, ಗ್ರಾಮ ಪಂಚಾಯತ್ ಸದಸ್ಯ ನಾಗೇಂದ್ರ, ಸುಧಾ ಮತ್ತು ಶೈಲಾ ಉದ್ಘಾಟಿಸಿದರು. ಶಿಬಿರವನ್ನು ಸಮುದಾಯ ವೈದ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ವೈಥಿಲಿ ಎಂ.ಆರ್, ಹಿರಿಯ ನಿವಾಸಿ ಡಾ.ಕಾವ್ಯ ಉಪಾಧ್ಯಾಯ ಸಂಯೋಜಿಸಿದ್ದರು. ಶಿಬಿರದಲ್ಲಿ ಒಟ್ಟು 120 ಫಲಾನುಭವಿಗಳು ಭಾಗವಹಿಸಿದ್ದರು. ಫಲಾನುಭವಿಗಳಿಗೆ ಔಷಧಿಗಳನ್ನು ಸಹ ವಿತರಿಸಲಾಯಿತು.

ಕುಂಬಾರರು ಉದ್ಯೋಗದಲ್ಲಿ ನವೀನತೆ ಕಂಡುಕೊಳ್ಳಿ

ತಾಲೂಕು ಕುಂಬಾರ ಸಂಘದ ಸಂಸ್ಥಾಪಕ ಅಧ್ಯಕ್ಷ ರಾಜಣ್ಣ ಮನವಿ



ಚಕ್ರ ಕುಂಬಾರಿಕೆ ತರಬೇತಿ ಕಾರ್ಯಕ್ರಮವನ್ನು ಕುಂಬಾರ ಸಂಘದ ಸಂಸ್ಥಾಪಕ ಅಧ್ಯಕ್ಷ ರಾಜಣ್ಣ ಉದ್ಘಾಟಿಸಿದರು.

ತಿ.ನರಸೀಪುರ, ಮಾ.17– ಶ್ರೀಗಂಗಾ ಚಾರಿಟಬಲ್ ಟ್ರಸ್ಟ್‌ನವರು ಕುಂಬಾರ ಸಮುದಾಯಕ್ಕೆ ಉತ್ತಮ ತರಬೇತಿ ನೀಡುವ ಜೊತೆಗೆ ಕುಂಬಾರಿಕೆಯಲ್ಲಿ ನೂತನ ಮಾದರಿಗಳನ್ನು ತಯಾರಿಸಲು ಉಚಿತವಾಗಿ ಮಷಿನ್‌ಗಳನ್ನು ನೀಡುತ್ತಿದ್ದು, ಕುಂಬಾರರು ಇದರ ಸದುಪಯೋಗಕ್ಕೆ ಮುಂದಾಗಬೇಕೆಂದು ತಾಲೂಕು ಕುಂಬಾರ ಸಂಘದ ಸಂಸ್ಥಾಪಕ ಅಧ್ಯಕ್ಷ ಕೇತಹಳ್ಳಿ ರಾಜಣ್ಣ ತಿಳಿಸಿದರು.

ತಾಲೂಕಿನ ಕೇತಹಳ್ಳಿ ಗ್ರಾಮದಲ್ಲಿ ಶ್ರೀಗಂಗಾ ಚಾರಿಟಬಲ್ ಟ್ರಸ್ಟ್ ಹಾಗೂ ಕೇಂದ್ರ ಕುಂಬಾರಿಕೆ ಸಂಸ್ಥೆ, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಆಶ್ರಯದಲ್ಲಿ ಗ್ರಾಮೋದ್ಯೋಗ ವಿಕಾಸ್ ಯೋಜನೆಯ ಕುಂಬಾರ ಸಶಕ್ತಿಕರಣ ಕಾರ್ಯಕ್ರಮದಡಿ ಆಯೋಜಿಸಿದ್ದ ಚಕ್ರ ಕುಂಬಾರಿಕೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮದಲ್ಲಿ 20 ಮಂದಿಗೆ 10 ದಿನಗಳ ತರಬೇತಿ ನೀಡಲಾಗುತ್ತದೆ. ಅಲ್ಲದೇ 1.50 ಲಕ್ಷ ರೂ. ವೆಚ್ಚದ ಕುಂಬಾರಿಕೆ ಮಾಡಲು ಬೇಕಾದ ಪರಿಕರಗಳನ್ನು ನೀಡುತ್ತಿದ್ದಾರೆ. ಮೊದಲಿಗೆ 20 ಜನರಿಗೆ ತರಬೇತಿ ನೀಡುತ್ತಾರೆ. ಆದ್ಯತೆ ಮೇರೆಗೆ 150 ಮಂದಿಗೆ ತರಬೇತಿ ನೀಡಲು ಅವಕಾಶಗಳಿವೆ. ಅಲ್ಲದೇ ಉತ್ಪನ್ನಗಳ ತಯಾರಿಕೆಗಾಗಿ ಬಿಲ್ಡಿಂಗ್ ಕಟ್ಟಲು 1 ರಿಂದ 3 ಕೋಟಿ ರೂ. ನೀಡಲಿದ್ದು, ಸಮುದಾಯದವರು 10 ದಿನಗಳ ತರಬೇತಿಗೆ ಗೈರಾಗದೇ ಹಾಜರಾಗಿ ಉದ್ಯೋಗದಲ್ಲಿ ನವೀನತೆ ಕಂಡುಕೊಳ್ಳಬೇಕೆಂದು ಮನವಿ ಮಾಡಿದರು.

ಶ್ರೀಗಂಗಾ ಚಾರಿಟಬಲ್ ಅಧ್ಯಕ್ಷ ರಾಜ್‌ಕಾಮಯ್ಯ ಮಾತನಾಡಿ, ಜನರಿಗೆ ಉದ್ಯೋಗ ಸೃಷ್ಟಿಸುವ ಉದ್ದೇಶದಿಂದ ಕೆವಿಐಸಿ ಒಟ್ಟು 3 ಕೋಟಿ ರೂ.ವರೆಗೆ ಸಹಾಯಧನ ನೀಡಲಿದೆ. ತರಬೇತಿಯಲ್ಲಿ 150 ಜನರಿದ್ದು, ಗುಂಪು ಮಾಡಿಕೊಂಡು ಉದ್ಯೋಗ ಮಾಡಲು ಮುಂದಾಗಿ ಸ್ವಂತ ಜಾಗ ಹೊಂದಿದ್ದರೆ ಗ್ರಾಮೋದ್ಯೋಗ ವಿಕಾಸ ಯೋಜನೆಯಡಿ ಕಟ್ಟಡ ಕಟ್ಟಲು ಹಣ ನೀಡಲಾಗುತ್ತದೆ ಎಂದರು.

ಸಾಂಪ್ರದಾಯಿಕ, ಪರಂಪರೆ ಉಳಿಸಿ ಬೆಳೆಸುವಂತಹ ಉದ್ಯೋಗ ಮುಂದುವರೆಸಿಕೊಂಡು ಹೋಗಲು ಉತ್ತೇಜನ ಕೊಡುವ ದೃಷ್ಟಿಯಿಂದ ನಮ್ಮ ಸಂಸ್ಥೆ ಮಿಷನ್, ಮೆಟೀರಿಯಲ್ಸ್ ಕೊಟ್ಟು ತರಬೇತಿ ಸಹ ನೀಡಿ ಕೆವಿಐಸಿಯಿಂದ ಸರ್ಟಿಫಿಕೇಟ್ ನೀಡಲಾಗುತ್ತದೆ. ತರಬೇತಿ ಪಡೆದ ಫಲಾನುಭವಿಗಳು ಉಚಿತವಾಗಿ ನೀಡುವ ಮಷಿನ್ ಉಪಯೋಗಿಸಿಕೊಂಡು ಉದ್ಯೋಗ ಮಾಡಬಹುದು. ಇಲ್ಲವೇ ಅವರದ್ದೇ ಸ್ವಂತ ಫ್ಯಾಕ್ಟರಿ ತೆರೆದು ಉತ್ಪನ್ನ ತಯಾರಿಸಬಹುದಾಗಿದೆ. ಇದಕ್ಕೆ 10 ರಿಂದ 50 ಲಕ್ಷ ರೂ. ಸಬ್ಸಿಡಿ ಸಾಲ ದೊರೆಯುತ್ತದೆ ಎಂದು ತಿಳಿಸಿದರು.

ಮಣ್ಣು ಕಲೆಸಿ ಸಾಂಪ್ರದಾಯಿಕವಾಗಿ ತಿಗುರಿಯಲ್ಲಿ ಮಡಕೆ, ಕುಡಿಕೆ ತಯಾರಿಸುತ್ತಿದ್ದ ಕುಂಬಾರಿಕೆ ವೃತ್ತಿಗೂ ಈಗ ಆಧುನಿಕ ಸ್ಪರ್ಶ ದೊರೆತಿದೆ. ಕುಂಬಾರರ ಕೈಗೆ ಈಗ ಎಲೆಕ್ಟ್ರಾನಿಕ್ ಆಧುನಿಕ ಚಕ್ರ ದೊರೆತಿದೆ. ಆ ಮೂಲಕ ಸುಲಭ ಹಾಗೂ ವೇಗವಾಗಿ ಮಣ್ಣಿನ ವಸ್ತುಗಳನ್ನು ತಯಾರಿಸಬಹುದಾಗಿದೆ ಎಂದರು.

ತಾಲೂಕು ಕುಂಬಾರ ಸಂಘದ ಅಧ್ಯಕ್ಷ ರಮೇಶ್ ಮಾತನಾಡಿದರು. ಕೆವಿಐಸಿ ತರಬೇತುದಾರ ಶಿವಕುಮಾರ್ ಆಧುನಿಕ ಕುಂಬಾರಿಕೆಯ ಕುರಿತಂತೆ ಸಂಕ್ಷಿಪ್ತ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕುಂಬಾರ ಸಂಘದ ಉಪಾಧ್ಯಕ್ಷ ಸಿದ್ದರಾಜು, ನಿರ್ದೇಶಕ ರವಿಕುಮಾರ್, ವೆಂಕಟರಮಣ ಶೆಟ್ಟಿ, ಶ್ರೀಗಂಗಾಚಾರಿಟಬಲ್ ಟ್ರಸ್ಟ್‌ನ ಕಾರ್ಯದರ್ಶಿ ದಿವ್ಯಶ್ರೀ, ಶಶಾಂಕ್, ಗುರುಕಿರಣ್, ಬಿ.ಕೆ. ಚಾಂದಿನಿ, ನವ್ಯಶ್ರೀ ಇತರರು ಹಾಜರಿದ್ದರು.

ಗ್ಯಾರಂಟಿ ಯೋಜನೆ ಬಡವರ ಕೈ ಬಲಪಡಿಸಿವೆ



ಅಕ್ಕಿ ವಿತರಣಾ ಕಾರ್ಯಕ್ಕೆ ಕೆ.ಮಾರುತಿ ಚಾಲನೆ ನೀಡಿದರು.

ಮಲ್ಕುಂಡಿ, ಮಾ.17– ರಾಜ್ಯ ಸರ್ಕಾರ ಚುನಾವಣೆ ಪೂರ್ವ ಜನತೆಗೆ ನೀಡಿದ್ದ ಭರವಸೆಯಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಬಡವರ ಕೈ ಬಲಪಡಿಸಿದೆ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ತಿಳಿಸಿದರು.

ಇಲ್ಲಿಗೆ ಸಮೀಪದ ಹಾಡ್ಯ, ಹುರ, ಅರಿಯೂರು ಗ್ರಾಮಗಳ ನ್ಯಾಯಬೆಲೆ ಅಂಗಡಿಗಳಲ್ಲಿ 15 ಕೆಜಿ ಅಕ್ಕಿ ವಿತರಣಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಬಡವರ ಪಕ್ಷ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಎಲ್ಲಾ ಸಮುದಾಯದ ಜನರಿಗೆ ಆದ್ಯತೆ ನೀಡಿ ಉತ್ತಮ ಆಡಳಿತ ನೀಡುತ್ತಿದ್ದಾರೆ. ರಾಜ್ಯದಲ್ಲಿ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ತತ್ವವನ್ನು ಕಾಂಗ್ರೆಸ್ ಸರ್ಕಾರ ಅಳವಡಿಸಿಕೊಂಡಿದೆ. ಪಂಚ ಗ್ಯಾರಂಟಿಗಳು ಎಲ್ಲಾ ವರ್ಗದವರಿಗೆ ಸಹಕಾರಿಯಾಗಿದೆ. ಜನರ ಹಸಿವು ಮುಕ್ತ ಮಾಡುವ ನಿಟ್ಟಿನಲ್ಲಿ ಮಾರ್ಚ್‌ನಿಂದ ತಲಾ 15 ಕೆಜಿ ಅಕ್ಕಿ ವಿತರಿಸಲಾಗುತ್ತಿದ್ದು, ರಾಜ್ಯ ಸರ್ಕಾರ ನುಡಿದಂತೆ ನಡೆದ ಸರ್ಕಾರವಾಗಿದೆ ಎಂದರು.

ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್, ಸಹಕಾರ ಸಂಘದ ಅಧ್ಯಕ್ಷ ಶಂಕರ್, ಗ್ರಾಪಂ ಸದಸ್ಯರಾದ ಕೃಷ್ಣಮೂರ್ತಿ, ಮಹದೇವು, ನಿರ್ದೇಶಕರಾದ ಶೇಖರಪ್ಪ, ತಗಡೂರು ನಾಯಕ, ನೀಲಕಂಠಪ್ಪ, ಮುಖಂಡರಾದ ರಾಜು, ಮಲ್ಲಿಕಾರ್ಜುನ ಇತರರಿದ್ದರು.

ತಿ.ನರಸೀಪುರದಲ್ಲಿ ಅಪ್ಪು ಹುಟ್ಟುಹಬ್ಬ ಆಚರಣೆ



ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.

ತಿ.ನರಸೀಪುರ, ಮಾ.17– ಪಟ್ಟಣದ ಅಪ್ಪು ಅಭಿಮಾನಿ ಬಳಗದ ವತಿಯಿಂದ ನಟ, ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 50ನೇ ಹುಟ್ಟುಹಬ್ಬ ಆಚರಿಸಲಾಯಿತು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಎದುರಿನ ಮೆಡಿಕಲ್ ಸ್ಟೋರ್ ಮುಂಭಾಗ ಅಪ್ಪು ಫೋಟೋಗೆ ಪೂಜೆ ಸಲ್ಲಿಸಿದ ಅಪ್ಪು ಅಭಿಮಾನಿಗಳು ನೆರೆದಿದ್ದ ಅಭಿಮಾನಿಗಳಿಗೆ ಜಿಲೇಬಿ, ರೈಸ್‌ಬಾತ್ ವಿತರಿಸಿ ಅಭಿಮಾನ ಮೆರೆದರು.

ಪುರಸಭೆ ಸದಸ್ಯ ಮೆಡಿಕಲ್ ನಾಗರಾಜು ಮಾತನಾಡಿ, ಕನ್ನಡ ಚಿತ್ರರಂಗದ ಅತ್ಯುತ್ತಮ ನಟನಾಗಿ, ಹಿನ್ನೆಲೆ ಗಾಯಕನಾಗಿ, ನಿರೂಪಕ ಮತ್ತು ನಿರ್ಮಾಪಕನಾಗಿ ಸಾಕಷ್ಟು ಹೆಸರು ಮಾಡಿದ ಅಪ್ಪು ಇಡೀ ಭಾರತೀಯ ಚಿತ್ರರಂಗವೇ ಗೌರವದಿಂದ ಕಾಣುವ ನಟನಾಗಿ ಬೆಳೆದರು.

ಜೊತೆಗಿರದ ಜೀವ ಎಂದೆಂದಿಗೂ ಜೀವಂತ ಅನ್ನುವುದು ಅಪ್ಪು ವಿಷಯದಲ್ಲಿ ಹಲವು ಬಾರಿ ಕೇಳಿ ಬಂದಿದೆ. ಇಹಲೋಕ ತ್ಯಜಿಸಿದರೂ ಕೋಟ್ಯಾಂತರ ಅಭಿಮಾನಿಗಳ ಎದೆಯಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಅವರ ಸಿನಿಮಾ ಸಾಧನೆ ಮತ್ತು ಸಮಾಜ ಸೇವೆ ಸದಾ ಸ್ಮರಣೀಯ ಎಂದರು.

ಕನ್ನಡ ಚಿತ್ರರಂಗಕ್ಕೆ ಪುನೀತ್ ರಾಜ್‌ಕುಮಾರ್ ಕೊಡುಗೆ ಅಪಾರ. ಬಾಲನಟನಾಗಿ ಅಭಿಮಾನಿಗಳ ಮನಗೆದ್ದ ಅವರು ಹೀರೋ ಆಗಿ ಕೂಡ ಗಟ್ಟಿಯಾಗಿ ನೆಲೆ ನಿಂತರು. ಅಭಿನಯ, ಡ್ಯಾನ್ಸ್, ಫೈಟಿಂಗ್‌ನಲ್ಲಿ ಅಪ್ಪುಗೆ ಸರಿಸಾಟಿ ಯಾರೂ ಇಲ್ಲ. ಅದೇ ರೀತಿ ಜನಪರ ಕಾರ್ಯಗಳ ಮೂಲಕ ಕೂಡ ಅವರು ರಿಯಲ್ ಹೀರೋ ಎನಿಸಿ ಕೊಂಡರು. ಆ ಗುಣಗಳು ಅಭಿಮಾನಿಗಳಿಗೆ ಮಾದರಿಯಾಗಿವೆ ಎಂದರು. ಈ ವೇಳೆ ಅಪ್ಪು ಅಭಿಮಾನಿ ಬಳಗದ ಅರ್ಜುನ್ ದತ್, ರಾಜೀವ್ ನಾಯಕ್, ಪ್ರವೀಣ್, ದಿಗಂತ್, ಪ್ರಶಾಂತ್, ನವೀನ್, ವಿಜಯ್, ಮಧು, ಪ್ರದೀಪ್, ಮಂಜುನಾಥ್, ರಾಚಪ್ಪಾಜಿ, ಜಯಂತ್ ಹಾಜರಿದ್ದರು.

ಕಿತ್ತೂರು ಪಿಎಸಿಎಸ್ ಚುನಾವಣೆ

ಕೆ.ಸುಮಿತ್ ಅಧ್ಯಕ್ಷ, ಶಿವಣ್ಣ ನಾಯಕ ಉಪಾಧ್ಯಕ್ಷ



ಕಿತ್ತೂರು ಪಿಎಸಿಎಸ್ ಅಧ್ಯಕ್ಷರಾಗಿ ಸುಮಿತ್, ಉಪಾಧ್ಯಕ್ಷರಾಗಿ ಶಿವಣ್ಣ ನಾಯಕ ಆಯ್ಕೆಯಾದರು.

ಬೆಟ್ಟದಪುರ, ಮಾ.17– ಇಲ್ಲಿನ ಕಿತ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಸುಮಿತ್ ಹಾಗೂ ಉಪಾಧ್ಯಕ್ಷರಾಗಿ ಶಿವಣ್ಣ ನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ.ಸುಮಿತ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶಿವಣ್ಣ ನಾಯಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಫಿಲೋಮಿನಾ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಮಾತನಾಡಿ, ನಮ್ಮ ತಾತ ಎಸ್.ಕರಿಯಪ್ಪನವರು ಅಂದು ಆರಂಭಿಸಿದ ಕಿತ್ತೂರು ಸಹಕಾರ ಸಂಘ ನಮ್ಮ ತಂದೆ ಕೆ.ವೆಂಕಟೇಶ್ ಅವರ ಪರಿಶ್ರಮದಿಂದ ಇಂದು ಹೆಮ್ಮರವಾಗಿ ಬೆಳೆದಿದೆ. ಕೆಲವು ವರ್ಷಗಳ ಹಿಂದೆ ಈ ಸಂಘವನ್ನು ಕೆಲವರು ಧೂಳು ಹಿಡಿಸಿದ್ದರು. ಆದರೆ ಮತ್ತೆ ಕೆ.ವೆಂಕಟೇಶ್ ಅವರು ಸಂಘವನ್ನು ಮುನ್ನೆಲೆಗೆ ತರುವ ಕೆಲಸ ಮಾಡಿದರು. ಸಹಕಾರ ಸಂಘಗಳು ರೈತರ ಹಿತ ಕಾಪಾಡಲು ಮುಂದಾಗಬೇಕು. ಸರ್ಕಾರದಿಂದ ಬರುವ ಸೌಲಭ್ಯಗಳನ್ನು ತಾರತಮ್ಯ ಮಾಡದೆ ರೈತರಿಗೆ ನಿಗದಿತ ಸಮಯಕ್ಕೆ ತಲುಪಿಸಿದಾಗ ಅವರು ಆರ್ಥಿಕ ಅಭಿವೃದ್ಧಿ ಹೊಂದುತ್ತಾರೆ. ರೈತರು ಪಡೆದ ಸಾಲವನ್ನು ಮರು ಪಾವತಿಸಿದರೇ ಸಂಘ ಅಭಿವೃದ್ಧಿ ಹೊಂದುತ್ತದೆ ಎಂದರು. ಈ ವೇಳೆ ಸಂಘದ ಮಾಜಿ ಅಧ್ಯಕ್ಷ ಸಚಿನ್, ಎಪಿಎಂಸಿ ಮಾಜಿ ಅಧ್ಯಕ್ಷ ಜಯಚಂದ್ರ, ನಿರ್ದೇಶಕರಾದ ಗಂಗಾಧರ್ ಕೆ.ಎಸ್., ಶ್ರೀಕಂಠಯ್ಯ ಎಂ.ಬಿ., ರವಿಕುಮಾರ್ ಎಂ.ಎಸ್., ಮಂಜಪ್ಪ, ಲಕ್ಷ್ಮಿ, ಸುಶೀಲಮ್ಮ, ಕೀರ್ತಿ, ಜವರೇಗೌಡ, ಕೃಷ್ಣಯ್ಯ, ಶಿವಣ್ಣ, ಜಯಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್, ಪಿಡಿಓ ರಾಜಶೇಖರ್, ಸದಸ್ಯರಾದ ಜಗದೀಶ್, ದೀಪು, ಹರೀಶ್, ರವಿ, ಮನು ಕುಮಾರ್, ಪುಟ್ಟರಾಜ್, ಮಲ್ಲೇಗೌಡ, ದೇವೇಂದ್ರ, ರವಿನಾಯಕ, ಲೋಕೇಶ್, ಮುಖ್ಯ ಕಾರ್ಯದರ್ಶಿ ಮಹಾದೇವ ಹಾಗೂ ತಾಲೂಕಿನ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮತ್ತಿತರರಿದ್ದರು.

ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಪ್ರಾಬಲ್ಯ

ಅರಿವು ಕಾರ್ಯಕ್ರಮದಲ್ಲಿ ಕಿರಂಗೂರು ಗ್ರಾಪಂ ಅಧ್ಯಕ್ಷ ನರಸಿಂಹಮೂರ್ತಿ



ಕಿರಂಗೂರು ಗ್ರಾಪಂ ಆವರಣದಲ್ಲಿ ಅರಿವು ಕಾರ್ಯಕ್ರಮ ನಡೆಯಿತು.

ಹುಣಸೂರು, ಮಾ.17– ಪ್ರಸ್ತುತ ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಮತ್ತು ಸವಾಲುಗಳು ಹೆಚ್ಚಾಗಿದ್ದು, ಪ್ರತಿಯೊಂದನ್ನು ಸಮರ್ಪಕವಾಗಿ ನಿಭಾಯಿಸುವತ್ತ ಮುಂದಾಗಿದ್ದಾರೆ ಎಂದು ಕಿರಂಗೂರು ಗ್ರಾಪಂ ಅಧ್ಯಕ್ಷ ನರಸಿಂಹಮೂರ್ತಿ ತಿಳಿಸಿದರು.

ಮಹಿಳಾ ದಿನಾಚರಣೆ ಅಂಗವಾಗಿ ಕಿರಂಗೂರು ಗ್ರಾಪಂ ಆವರಣದಲ್ಲಿ ಮಹಿಳಾ ಗ್ರಾಮ ಸಭೆ, ಆಟೋಟ ಸ್ಪರ್ಧೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಹಿಳಾ ಪಾಲ್ಗೊಳ್ಳುವಿಕೆ ಹೆಚ್ಚಿಸುವ ಸಲುವಾಗಿ ಏರ್ಪಡಿಸಿದ್ದ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮನೆಯ 4 ಗೋಡೆಗಳಿಗಷ್ಟಕ್ಕೇ ಸೀಮಿತವಾಗಿರದೇ ಎಲ್ಲಾ ಕ್ಷೇತ್ರದಲ್ಲೂ ಮಹಿಳೆ ತನ್ನ ಪ್ರಾಬಲ್ಯತೆ ಪಡೆದುಕೊಂಡಿದ್ದಾಳೆ. ಗ್ರಾಮೀಣ ಭಾಗಗಳಲ್ಲಿ ಒಂದು ಸುತ್ತು ಹಾಕಿದರೆ ಶಿಕ್ಷಣ, ರಾಜಕೀಯ, ಸಂಘ ಸಂಸ್ಥೆ, ಮಕ್ಕಳ ಆರೈಕೆ, ಆರೋಗ್ಯ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ಹಿಂಜರಿಕೆ ಮೆಟ್ಟಿ ನಿಲ್ಲುವ ಮೂಲಕ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದರು.

ತಾಲೂಕು ಐಇಸಿ ಸಂಯೋಜಕಿ ಪುಷ್ಪಾವತಿ ಮಾತನಾಡಿ, ಮ–ನರೇಗಾ ಯೋಜನೆಯಡಿ ಗ್ರಾಮೀಣ ಭಾಗಗಳಲ್ಲಿ ಗ್ರಾಮದ ಅಭಿವೃದ್ಧಿಗೆ ಅನುಷ್ಠಾನಗೊಳ್ಳುವ ಸಮುದಾಯ ಕಾಮಗಾರಿ ಮತ್ತು ವೈಯಕ್ತಿಕ ಕಾಮಗಾರಿಗಳ ಬಗ್ಗೆ ತಿಳಿಸಿದ್ದು, ಅವುಗಳ ಸೌಲಭ್ಯವನ್ನು ಯಾವ ರೀತಿಯಾಗಿ ಪಡೆದುಕೊಳ್ಳಬಹುದೆಂಬುದರ ಬಗ್ಗೆ ವಿವರಿಸಿದರು.

ಜೊತೆಗೆ ಮ–ನರೇಗಾ ಯೋಜನೆ, ಪಂಚತಂತ್ರ ಹಾಗೂ ಕುಡಿಯುವ ನೀರಿನ ಸಮಸ್ಯೆಗೆ ಉಚಿತ ಸಹಾಯವಾಣಿ 8277506000 ಸಂಖ್ಯೆಗೆ ಕರೆ ಮಾಡಿ ಪರಿಹಾರ ಕಂಡು ಕೊಳ್ಳುವಂತೆ ಮಾಹಿತಿ ನೀಡಿದರು.

ಪಿಡಿಓ ಟಿ.ಭವ್ಯ ನೇತೃತ್ವದಲ್ಲಿ ಲೆಮನ್ ಸ್ಪೂನ್, ಮ್ಯೂಸಿಕಲ್ ಚೇರ್, ರಂಗೋಲಿ ಸ್ಪರ್ಧೆ ಹಾಗೂ ಮಹಿಳೆಯರ ಫ್ಯಾಷನ್ ಷೋ ಸ್ಪರ್ಧೆ ನಡೆಸಲಾಯಿತು. ಈ ವೇಳೆ ಕಾರ್ಯದರ್ಶಿ ಸ್ವಾಮಿ, ಪಂಚಾಯಿತಿ ಸಿಬ್ಬಂದಿ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಗ್ರಾಮಸ್ಥರು ಪಾಲ್ಗೊಂಡಿದ್ದರು.

ಶಾಲಾ ಕಾಲೇಜುಗಳಲ್ಲಿ

ವಿದ್ಯಾರ್ಥಿಗಳಿಗೆ ವಚನ ಸಾಹಿತ್ಯದ ಬಗ್ಗೆ ಜಾಗೃತಿ



ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಜಿಲ್ಲಾಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ ಉದ್ಘಾಟಿಸಿದರು.

ತಿ.ನರಸೀಪುರ, ಮಾ.17– ಹನ್ನೆರಡನೇ ಶತಮಾನದಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕತೆಯ ಪ್ರತೀಕವಾಗಿ ಬಂಡಾಯಕ್ಕೆ ಕಾರಣವಾಗಿದ್ದ ವಚನ ಸಾಹಿತ್ಯದ ಮಹತ್ವವನ್ನು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಲು ದತ್ತಿ ಉಪನ್ಯಾಸ ಆಯೋಜಿಸಲಾಗುತ್ತಿದೆ ಎಂದು ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಶರಣ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾಡಿನ ಹಿರಿಮೆ ಸಾರುವ ವಚನ ಸಾಹಿತ್ಯವನ್ನು ಬಸವಾದಿ ಶರಣರು ರಚಿಸಿದ್ದು, ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳ, ನೇರವಾಗಿರುವುದು ವಚನಗಳ ವೈಶಿಷ್ಟ್ಯತೆಯಾಗಿದೆ ಎಂದರು.

ದೇಶದಲ್ಲಿ ಸಂಸ್ಕೃತ ಪ್ರವರ್ಧಮಾನಕ್ಕೆ ಬರುವ ಮೊದಲೇ ಸಮಾಜದಲ್ಲಿ ಜನಜಾಗೃತಿ ಮೂಡಿಸಲು ವಚನ ಸಾಹಿತ್ಯಕ್ಕೆ ಶರಣರು ಅಕ್ಷರ ರೂಪ ನೀಡಿದರು. ಸಹೋದರತ್ವ ಹಾಗೂ ಸಹಬಾಳ್ವೆ ಮತ್ತು ಸಮಾಜದ ನ್ಯೂನತೆಗಳ ಬಗ್ಗೆ ಜಾಗೃತಿ ಮೂಡಿಸುವ ವಚನ ಸಾಹಿತ್ಯದ ಬಗ್ಗೆ ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿ ಅರಿವು ಮೂಡಿಸುತ್ತೇವೆ ಎಂದರು.

ವಚನ ಸಾಹಿತ್ಯ ಕುರಿತು ಸಂದರ್ಶಕ ಪ್ರಾಧ್ಯಾಪಕ ಡಾ.ರಾಜಶೇಖರ ಜಮದಂಡಿ ಉಪನ್ಯಾಸ ನೀಡಿದರು. ಸಾನಿಧ್ಯ ವಹಿಸಿದ್ದ ವಾಟಾಳು ಸೂರ್ಯ ಸಿಂಹಾಸನ ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಪ್ರಾಂಶುಪಾಲ ಡಾ. ಹೆಚ್.ವಿ.ಉದಯ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆಬ್ಬೆಹುಂಡಿ ಸೋಮಶೇಖರಪ್ಪ, ಹಿರಿಯ ಪ್ರಾಧ್ಯಾಪಕ, ಸಂಚಾಲಕರು ಸಾಂಸ್ಕೃತಿಕ ವಿಭಾಗದ ಜಿ.ಹೆಚ್. ದೇವರಾಜಗೌಡ, ಆಂತರಿಕ ಗುಣಮಟ್ಟ ಭರವಸೆ ಕೋಶದ ಡಾ.ಅಮಿತ್, ಕನ್ನಡ ವಿಭಾಗದ ಮುಖ್ಯಸ್ಥ ಎನ್.ಶುಭ, ಕಚೇರಿ ಅಧೀಕ್ಷಕ ಇಮ್ರಾನ್ ಪಾಷಾ, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿ.ಎಂ. ಪ್ರಕಾಶ್, ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಕೆಇಬಿ ಸಿದ್ದಲಿಂಗಸ್ವಾಮಿ, ಪುನೀತ್, ಶಿವರುದ್ರ, ಶಿವಕುಮಾರ್, ಆಡಿಟರ್ ಮಂಜುನಾಥ್, ಕುಮಾರಸ್ವಾಮಿ, ಪ್ರಕಾಶ್, ಶಿವಮಲ್ಲಪ್ಪ, ಶಿವಮೂರ್ತಿ, ಸುರೇಶ್, ರಾಜಶೇಖರ್, ರಾಮಮೂರ್ತಿ, ಹೆಳವರಹುಂಡಿ ಮೂರ್ತಿ ಇತರರಿದ್ದರು.

ನಗರ್ಲೆ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನಗರ್ಲೆ ಪಿಎಸಿಎಸ್ ಅಧ್ಯಕ್ಷರಾಗಿ ಪುಟ್ಟಸ್ವಾಮಿ, ಉಪಾಧ್ಯಕ್ಷರಾಗಿ ಎಲ್.ನಾಗೇಶ್ ಆಯ್ಕೆಯಾದರು.

ನಗರ್ಲೆ, ಮಾ.17– ನಂಜನಗೂಡು ತಾಲೂಕಿನ ನಗರ್ಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎ.ಬಿ.ಪುಟ್ಟಸ್ವಾಮಿ, ಉಪಾಧ್ಯಕ್ಷರಾಗಿ ಎಲ್.ನಾಗೇಶ್ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಸುಮಾ ಕಾರ್ಯ ನಿರ್ವಹಿಸಿದರು. ನಿರ್ದೇಶಕರಾದ ಬಿ.ಎನ್.ಸದಾನಂದ, ಎನ್.ಎಂ.ಗುರುಸ್ವಾಮಿ, ಬಿ.ಪಿ.ಮಲ್ಲೇಶ, ಚಿನ್ನಸ್ವಾಮಿ, ಹೆಚ್.ಎಸ್.ಮರಿನಂಜಪ್ಪ, ಅನಸೂಯ, ಹೆಚ್.ಕೆ.ಧನಲಕ್ಷ್ಮಿ, ಕೆ.ಎನ್.ಶಿವಸ್ವಾಮಿ, ಹೆಚ್.ಬಿ.ಸಿದ್ದರಾಜು, ಕೆ.ಎಸ್.ಸತೀಶ್, ಇಓ ಎನ್.ಬಿ.ಮಹೇಂದ್ರ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಬಿ.ಸಿ.ಶಿವಲಿಂಗೇಗೌಡ, ಸಿಬ್ಬಂದಿಗಳಾದ ರೂಪ, ಸಂಘದ ಸದಸ್ಯರು ಹಾಜರಿದ್ದರು.

ವಿರೋಧದ ನಡುವೆ ಕೋಟೆಯಲ್ಲಿ ಕುರುಬ ಸಮಾಜದ ಸಭೆ



ಕನಕ ಭವನದ ಮುಂಭಾಗ ಕಾರ್ಯಕಾರಿ ಮಂಡಳಿ ಸಭೆ ನಡೆಯಿತು.

ಹೆಚ್.ಡಿ.ಕೋಟೆ, ಮಾ.17– ವಿರೋಧದ ನಡುವೆಯೂ ಪಟ್ಟಣದಲ್ಲಿ ಹೆಚ್.ಡಿ. ಕೋಟೆ, ಸರಗೂರು ತಾಲೂಕು ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಸಭೆ ನಡೆಯಿತು.

ಸೋಮವಾರ ಪಟ್ಟಣದ ಕನಕ ಭವನದಲ್ಲಿ ಕೋಟೆ, ಸರಗೂರು ತಾಲೂಕು ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ನೂತನ ಅಧ್ಯಕ್ಷ ಕ್ಯಾತನಹಳ್ಳಿ ಮಾಲೇಗೌಡರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಮಂಡಳಿ ಸಭೆ ಕರೆಯಲಾಗಿತ್ತು. ಸಭೆ ವಿರೋಧಿಸಿ ನಾನೇ ಸಮಾಜದ ಅಧ್ಯಕ್ಷನೆಂದು ಮೊಳೆಯೂರು ಆನಂದ್ ಅವರು ಡಿವೈಎಸ್ಪಿ ಗೋಪಾಲಕೃಷ್ಣ ಅವರಿಗೆ ಕನಕ ಭವನದಲ್ಲಿ ಯಾವುದೇ ಕಾರಣಕ್ಕೂ ಸಭೆ ನಡೆಯಲು ಅವಕಾಶ ನೀಡಬಾರದು ಎಂದು ದೂರು ನೀಡಿದ್ದರು. ಇದಕ್ಕೆ ಪ್ರತಿಯಾಗಿ ನೂತನ ಅಧ್ಯಕ್ಷ ಮಾಲೇಗೌಡ ನಾನು ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಕನಕ ಭವನದಲ್ಲಿ ಕಾರ್ಯಕಾರಿ ಮಂಡಳಿ ಸಭೆ ನಡೆಸಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದರು ಎನ್ನಲಾಗಿದೆ.

ಆನಂದ್ ಅವರ ದೂರಿನ ಹಿನ್ನೆಲೆಯಲ್ಲಿ ಡಿವೈಎಸ್ಪಿ ಗೋಪಾಲಕೃಷ್ಣ ಅವರ ನೇತೃತ್ವದಲ್ಲಿ ಕನಕ ಭವನಕ್ಕೆ ನೂರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭವನಕ್ಕೆ ಯಾರೂ ಪ್ರವೇಶಿಸದಂತೆ ನಿರ್ಬಂಧಿಸಲಾಗಿತ್ತು. ಈ ವೇಳೆ ಸಭೆ ನಡೆಸಲು ಆಗಮಿಸಿದ ಅಧ್ಯಕ್ಷ ಮಾಲೇಗೌಡ, ಉಪಾಧ್ಯಕ್ಷ ವೀರೇಗೌಡ, ಪ್ರಧಾನ ಕಾರ್ಯದರ್ಶಿ ಚಿಕ್ಕಣ್ಣ, ಖಂಜಾಚಿ ಯತೀಶ್ ಕುಮಾರ್ ಅವರು ಸಭೆ ನಡೆಸಲು ಅವಕಾಶ ನೀಡುವಂತೆ ಡಿವೈಎಸ್ಪಿ ಗೋಪಾಲಕೃಷ್ಣ ಅವರಿಗೆ ಮನವಿ ಮಾಡಿದರಾದರೂ ಅವಕಾಶ ಮಾಡಕೊಡದ ಪರಿಣಾಮ ಈ ವೇಳೆ ಕುರುಬ ಸಮುದಾಯದ ಮುಖಂಡರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಈ ವೇಳೆ ಮುಖಂಡರು ಭವನದ ಎದುರು ಸಭೆ ನಡೆಸುವುದಾಗಿ ಪಟ್ಟು ಹಿಡಿದು ಭವನದ ಎದುರು ಸಭೆ ನಡೆಸಿದರು.

ಪ್ರಧಾನ ಕಾರ್ಯದರ್ಶಿ ಶಿರಮಳ್ಳಿ ಚಿಕ್ಕಣ್ಣ ಮಾತನಾಡಿ, ಹಿಂದಿನ ಅಧ್ಯಕ್ಷ ಆನಂದ್ ಅವರು ಭವನದ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನೀಡಿಲ್ಲ. ಸರ್ಕಾರದ ಮತ್ತು ದಾನಿಗಳ ಅನುದಾನ ದುರ್ಬಳಕೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಪೊಲೀಸ್ ಇಲಾಖೆಯಿಂದ ತನಿಖೆ ನಡೆಸುವುದು. ಸಾಮಾನ್ಯ ವಿಶೇಷ ಸಭೆ ನಿರ್ಣಯಗಳನ್ನು ಅನುಮೋದನೆ ಮಾಡುವುದು. ಭವನ ನಿರ್ವಹಣೆ ಮಾಡುತ್ತಿರುವ ಕೆಲವರ ಮೇಲೆ ಠಾಣೆಯಲ್ಲಿ ದೂರು ನೀಡುವುದು. ಬೈಲಾ ತಿದ್ದುಪಡಿ ಮಾಡಬೇಕಿದೆ ಎಂದು ಮಂಡಿಸಿದ ನಿರ್ಣಯಕ್ಕೆ ಎಲ್ಲರೂ ಒಮ್ಮತದಿಂದ ಬೆಂಬಲ ಸೂಚಿಸಿದರು.

ಸಭೆಯಲ್ಲಿ ಸಂಘದ ನಿರ್ದೇಶಕರಾದ ಎಂ.ರವಿ, ಕರಿಯಪ್ಪಗೌಡ, ತಮ್ಮಣ್ಣ, ಮಹದೇವು, ಆರ್.ಪಿ.ಜಗನ್ನಾಥ್, ಆರ್.ಎನ್. ಪಾಪಣ್ಣ, ಕೃಷ್ಣೇಗೌಡ, ಮಂಜುನಾಥ್, ಗೋವಿಂದರಾಜು, ಶಿವರಾಜು, ರಾಜಣ್ಣ, ಪುಟ್ಟೇಗೌಡ, ಮುದ್ದರಾಮೇಗೌಡ, ಕುಮಾರ್, ಆಡಳಿತ ಮಂಡಳಿ ಸದಸ್ಯರು ಇದ್ದರು. ಸಿಪಿಐ ಗಂಗಾಧರ್, ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಶ್ರೀಚಿಕ್ಕದೇವಮ್ಮನ ಬೆಟ್ಟದ ಹಾಲುಗಡ ಜಾತ್ರೆ ಯಶಸ್ಸಿಗೆ ಶ್ರಮಿಸಿ

ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಮೋಹನ ಕುಮಾರಿ



ಶ್ರೀಚಿಕ್ಕದೇವಮ್ಮನ ಬೆಟ್ಟದ ಹಾಲುಗಡ ಜಾತ್ರೆ ಪೂರ್ವಭಾವಿ ಸಭೆ ನಡೆಯಿತು.

ಸರಗೂರು, ಮಾ.17– ಶ್ರೀಚಿಕ್ಕದೇವಮ್ಮನ ಬೆಟ್ಟದ ಹಾಲುಗಡ ಜಾತ್ರೆ ಯಶಸ್ಸಿಗೆ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ತಹಸೀಲ್ದಾರ್ ಮೋಹನ ಕುಮಾರಿ ತಿಳಿಸಿದರು.

ಜಾತ್ರೆ ಅಂಗವಾಗಿ ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ಬಾರಿಯೂ ಶ್ರೀ ಚಿಕ್ಕದೇವಮ್ಮನವರ ಜಾತ್ರೆಯು ಯುಗಾದಿ ಹಬ್ಬದಂದು ಆರಂಭವಾಗಲಿದ್ದು, ಮುಂಜಾನೆಯೇ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಶ್ರೀಚಿಕ್ಕದೇವಮ್ಮನ ಬೆಟ್ಟದಿಂದ ಅಮ್ಮನವರು ಹಾಗೂ ಶಿವ ಪಾರ್ವತಿ ಉತ್ಸವ ಮೂರ್ತಿಯನ್ನು ತಂದು ನದಿ ಬಳಿಯ ಹಾಲುಗಡುವಿನ ಜಪದಕಟ್ಟೆಯಲ್ಲಿ ಕೂರಿಸಿ, ವಿಶೇಷ ಪೂಜೆ ಸಲ್ಲಿಸಿ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದು. ಹೀಗಾಗಿ ಜಾತ್ರಾ ಮಹೋತ್ಸವದ ಯಶಸ್ಸಿಗೆ ಶ್ರಮಿಸುವ ಜೊತೆಗೆ ಆಗಮಿಸುವ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹಲವು ಮುಖಂಡರು ಮಾತನಾಡಿ, ಭಕ್ತರು ದೇವಸ್ಥಾನಕ್ಕೆ ಬರಲು ಸುಗಮ ರಸ್ತೆ, ಅಂಗಡಿ ಮುಂಗಟ್ಟು ಹಾಗೂ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ, ಬಿಸಿಲ ತಾಪ ಹೆಚ್ಚಾದ ಕಾರಣ ಕುಡಿಯುವ ನೀರು, ಅನ್ನದಾಸೋಹ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಬೇಕು. ಕಪಿಲಾ ನದಿಗೆ ಪೋಷಕರು ಮಕ್ಕಳನ್ನು ಬಿಡದಂತೆ ಎಚ್ಚರ ವಹಿಸಬೇಕು. ಮುಂಜಾಗ್ರತಾ ಕ್ರಮವಾಗಿ ಈಜು ತಜ್ಞರನ್ನು ನೇಮಕ ಮಾಡುವಂತೆ ತಿಳಿಸಿದರು.

ತಹಸೀಲ್ದಾರ್ ಮೋಹನ ಕುಮಾರಿ ಮಾತನಾಡಿ, ಮಾ.30ರಿಂದ ಏ.1ರವರೆಗೆ ಜಾತ್ರೆ ನಡೆಯಲಿದ್ದು, ಹಲವು ಮುಖಂಡರು ಜಾತ್ರೆ ಯಶಸ್ಸಿಗೆ ಬೇಕಾದ ಎಲ್ಲಾ ರೀತಿಯ ಸಲಹೆ ಸೂಚನೆ ನೀಡಿದ್ದೀರಿ. ಎಲ್ಲರ ಸಹಕಾರದಿಂದ ವಿಜೃಂಭಣೆಯಿಂದ ಜಾತ್ರೆ ನಡೆಸೋಣ ಎಂದರು.

ಶ್ರೀಚಿಕ್ಕದೇವಮ್ಮ ಜಾತ್ರೆ ಕಮಿಟಿ ಟ್ರಸ್ಟ್ ಅಧ್ಯಕ್ಷ ದೊಡ್ಡವೀರನಾಯಕ ಮಾತನಾಡಿದರು. ಸಭೆಯಲ್ಲಿ ಧಾರ್ಮಿಕ ದತ್ತಿ ಇಲಾಖೆ ಇಓ ರಘು, ಶ್ರೀಚಿಕ್ಕದೇವಮ್ಮನವರ ಬೆಟ್ಟದ ಪಾರುಪತ್ತೇದಾರ್ ಮಹದೇವಸ್ವಾಮಿ, ತಾಲೂಕು ನಾಯಕ ಸಮಾಜದ ಅಧ್ಯಕ್ಷ ಬಸವರಾಜು, ಇಟ್ನಾ ಗ್ರಾಪಂ ಸದಸ್ಯರಾದ ಜಯರಾಮ್, ಯಜಮಾನರಾದ ನಿಂಗರಾಜು, ಬಿ.ಬೆಟ್ಟನಾಯಕ, ಕೆ.ನಾಗರಾಜು, ಮಾಜಿ ಗ್ರಾಪಂ ಸದಸ್ಯ ಬಿ.ಬಸವರಾಜು, ಎನ್.ಬಸವನಾಯಕ, ಚಿಕ್ಕಣ್ಣ, ಮುಖಂಡರಾದ ಐ.ಬಿ.ರವಿಕುಮಾರ್, ರಾಜಣ್ಣ, ನಾಗೇಂದ್ರ, ಶೇಷ, ಮಂಚನಾಯಕ, ಬಿ.ರಾಮನಾಯಕ, ಡೈರಿ ಕಾರ್ಯದರ್ಶಿ ಬೆಟ್ಟನಾಯಕ, ದೊಡ್ಡಸಿದ್ದನಾಯಕ, ಪಿಡಿಓ ಚನ್ನಸ್ವಾಮಿ, ಪೊಲೀಸ್ ಸಿಬ್ಬಂದಿಗಳಾದ ಇಮ್ರಾನ್ ಅಹಮ್ಮದ್, ಕೃಷ್ಣಯ್ಯ, ಜಗದೀಶ್, ಶಿವಪ್ಪ ಸೇರಿದಂತೆ ಇನ್ನಿತರರಿದ್ದರು.

> ಜಾತ್ರಾ ಆವರಣದಲ್ಲಿ ಪ್ರಾಣಿಬಲಿ ನಿಷೇಧಿಸಲಾಗಿದೆ. ಅಲ್ಲದೇ ಕಾನೂನು ಬಾಹಿರ ಚಟುವಟಿಕೆ ಕಂಡು ಬಂದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಜಾತ್ರೆಗೆ ಆಗಮಿಸುವ ಸಾರ್ವಜನಿಕರು, ಭಕ್ತರು ತಮ್ಮ ವಾಹನಗಳನ್ನು ಪಾರ್ಕಿಂಗ್‌ನಲ್ಲೇ ನಿಲ್ಲಿಸಿ ಸುಗಮ ಸಂಚಾರಕ್ಕೆ ಸಹಕರಿಸಬೇಕು. – ಪ್ರಸನ್ನಕುಮಾರ್, ಸಿಪಿಐ.

ಜಿ.ಸುರೇಶ್ ನಿಧನ



ಹೆಚ್.ಡಿ.ಕೋಟೆ, ಮಾ.17– ಪಟ್ಟಣದ ನಿವಾಸಿ, ತಾಲೂಕಿನ ಬೆಳಗನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಜಿ.ಸುರೇಶ್(59) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಪಟ್ಟಣದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ವಿಜೃಂಭಣೆಯ ಒಂಟಿಕೊಪ್ಪಲು ಗ್ರಾಮದೇವತೆ ಮಾರಮ್ಮನವರ ಹಬ್ಬ

ಬಾಯಿ ಬೀಗ; ಭಕ್ತಿಯ ಪರಾಕಾಷ್ಠೆ ಮೆರೆದ ಭಕ್ತರು




ಮೈಸೂರಿನ ಒಂಟಿಕೊಪ್ಪಲಿನಲ್ಲಿ ಸೋಮವಾರ ಸಂಜೆ ಗ್ರಾಮದೇವತೆಯ ಹಬ್ಬದ ಪ್ರಯುಕ್ತ ಬಾಯಿ ಬೀಗ ಮೆರವಣಿಗೆ ನಡೆಯಿತು. ಮತ್ತೊಂದು ಚಿತ್ರದಲ್ಲಿ ಮಹದೇಶ್ವರಸ್ವಾಮಿ ಕಳಸ ಹೊತ್ತು ಮೆರವಣಿಗೆಯಲ್ಲಿ ಸಾಗುತ್ತಿರುವುದನ್ನು ಕಾಣಬಹುದು.

ಮೈಸೂರು,ಮಾ.17(ಪಿಎಂ)– ಬಾಯಿ ಬೀಗ ಮತ್ತು ಮಹದೇಶ್ವರಸ್ವಾಮಿ ಕಳಸದ ಮೆರವಣಿಗೆ ಒಳಗೊಂಡಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ಒಂಟಿಕೊಪ್ಪಲು ಗ್ರಾಮದೇವತೆಯ ಹಬ್ಬ (ಮಾರಮ್ಮನವರ ಹಬ್ಬ) ಸೋಮವಾರ ವಿಜೃಂಭಣೆಯಿಂದ ನೆರವೇರಿತು.

ಸಂಜೆ ವೇಳೆಗೆ ಇಲ್ಲಿನ ಮಾರಮ್ಮನವರ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯ ನೆರವೇರಿಸಿ, ಇಲ್ಲಿಗೆ ಸಮೀಪದಲ್ಲಿ ವಾಲ್ಮೀಕಿ ರಸ್ತೆಯಲ್ಲಿರುವ ಅರಳೀಕಟ್ಟೆ ಬಳಿ ಮಹದೇಶ್ವರಸ್ವಾಮಿ ಕಳಸಕ್ಕೆ ಪೂಜಾ ವಿಧಿವಿಧಾನ ನೆರವೇರಿಸಲಾಯಿತು. ಬಳಿಕ ಹರಕೆ ಹೊತ್ತ ಮಹಿಳೆಯರು ಹಾಗೂ ಪುರುಷರಿಗೆ ಬಾಯಿ ಬೀಗ ತೊಡಿಸಲಾಯಿತು.

ನಂತರ ಮಹದೇಶ್ವರಸ್ವಾಮಿ ಕಳಸ ಹೊತ್ತ ಗ್ರಾಮದ ಯುವಕ ಪ್ರೇಮ್ ಮುಂದೆ ಸಾಗಿದರೆ, ಅವರ ಹಿಂದೆ ಬಾಯಿ ಬೀಗ ಹಾಕಿಕೊಂಡ ಭಕ್ತ ಸಮೂಹವು ಕೈಯಲ್ಲಿ ಪಂಜು ಹಿಡಿದು ಸಾಗಿತು. ಇವರ ಜೊತೆಗೆ ಗ್ರಾಮದ ಮಹಿಳೆಯರು ಮಡೆ ಅನ್ನ, ಬಾಳೆಹಣ್ಣು, ತೆಂಗಿನಕಾಯಿ ಸೇರಿದಂತೆ ಪೂಜಾ ಸಾಮಗ್ರಿ ಒಳಗೊಂಡ ತಟ್ಟೆ ಹಿಡಿದು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಮೆರವಣಿಗೆಯು ವಾಲ್ಮೀಕಿ ರಸ್ತೆ, 3ನೇ ಮತ್ತು 4ನೇ ಮುಖ್ಯ ರಸ್ತೆ, ಕಾಳಿದಾಸ ರಸ್ತೆಯಲ್ಲಿ ಸಾಗಿ ಮಾರಮ್ಮನವರ ದೇವಸ್ಥಾನಕ್ಕೆ ಮರಳಿತು. ಮಂಗಳವಾದ್ಯ ಹಾಗೂ ತಮಟೆಯ ಸದ್ದು ಮೆರವಣಿಗೆಗೆ ಮತ್ತಷ್ಟು ಮೆರಗು ನೀಡಿತು. ಮೆರವಣಿಗೆ ಮರಳಿದ ಬಳಿಕ ಹರಕೆ ಹೊತ್ತ ಭಕ್ತರು ಹಾಕಿಕೊಂಡಿದ್ದ ಬಾಯಿ ಬೀಗ ತೆರವುಗೊಳಿಸುವ ಪ್ರಕ್ರಿಯೆ ನಡೆಯಿತು.

ಇದೇ ವೇಳೆಗೆ ಮತ್ತೊಂದೆಡೆ ಮಹದೇಶ್ವರಸ್ವಾಮಿಯ ಕಳಸವನ್ನು ಮಾರಮ್ಮನವರ ದೇವಸ್ಥಾನದಲ್ಲಿ ಇರಿಸಿ ಪೂಜೆ ಸಲ್ಲಿಸಲಾಯಿತು. ಮಾರಮ್ಮನವರ ದೇವಸ್ಥಾನದಲ್ಲಿ ಪೂಜಾ ವಿಧಿವಿಧಾನಗಳು ನಡೆದವಲ್ಲದೆ, ಗ್ರಾಮದ ಮಹಿಳೆಯರು ತಾವು ತಂದಿದ್ದ ಮಡೆ ಅನ್ನ ಸೇರಿದಂತೆ ಪೂಜಾ ಸಾಮಗ್ರಿಗಳನ್ನು ಮಾರಮ್ಮ ತಾಯಿಗೆ ಸಮರ್ಪಿಸಿದರು. ಅಂತಿಮವಾಗಿ ದೇವಸ್ಥಾನದಲ್ಲಿ ಮಹಾಮಂಗಳಾರತಿ ನೆರವೇರಿಸಲಾಯಿತು. ಜೊತೆಗೆ ಮಾರಮ್ಮನ ಸನ್ನಿಧಿಯ ಮುಂಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಪ್ರತಿವರ್ಷ ಮಾರ್ಚ್‌ನಲ್ಲಿ ಗ್ರಾಮದೇವತೆಯ ಹಬ್ಬ ನಡೆಸುವ ಪರಂಪರೆ ನಡೆದು ಬಂದಿದ್ದು, ಅಂತೆಯೇ ಭಾನುವಾರ ತಂಬಿಟ್ಟಿನ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತ್ತು. ಗ್ರಾಮದಿಂದ ಬೇರೆ ಬೇರೆ ಊರುಗಳಿಗೆ ವಲಸೆ ಹೋಗಿರುವವರು ಹಾಗೂ ಗ್ರಾಮದ ನೆಂಟರಿಷ್ಟರು ಹಬ್ಬದಲ್ಲಿ ಪಾಲ್ಗೊಂಡು ಸಂಭ್ರಮಿಸಿದರಲ್ಲದೆ, ಮಾರಮ್ಮನವರಿಗೆ ಭಕ್ತಿಯ ಪರಾಕಾಷ್ಠೆ ಮೆರೆದರು. ಗ್ರಾಮದ ಎಲ್ಲಾ ಸಮುದಾಯದವರು ಸಾಮರಸ್ಯದಿಂದ ಈ ಹಬ್ಬ ಆಚರಿಸುತ್ತಾ ಬಂದಿದ್ದು, ಗ್ರಾಮದ ಮಾರಮ್ಮನವರ ದೇವಸ್ಥಾನ ಈ ಹಬ್ಬದ ಕೇಂದ್ರ ಬಿಂದು.

ನಾಳೆ ಮಂಗಳವಾರ ಅವರವರ ಮನೆಯಲ್ಲಿ ಗ್ರಾಮಸ್ಥರು ಮಾಂಸಾಹಾರ ಸೇರಿದಂತೆ ವಿವಿಧ ಭಕ್ಷ್ಯಗಳನ್ನು ಸಿದ್ಧಪಡಿಸಿ, ತಾವೂ ಸೇವಿಸಿ ನೆಂಟರಿಷ್ಟರಿಗೆ ಉಣಬಡಿಸಲಿದ್ದಾರೆ. ಆ ಮೂಲಕ ಹಬ್ಬಕ್ಕೆ ತೆರೆ ಎಳೆಯಲಿದ್ದಾರೆ. ಭಗೀರಥ ಸಿನಿಮಾ ನಾಯಕ ನಟರೂ ಆದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನ ಧರ್ಮದರ್ಶಿ ಸಮಿತಿ ಸದಸ್ಯ ಎಸ್.ಜಯಪ್ರಕಾಶ್ (ಜೆಪಿ), ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಧರ್ಮದರ್ಶಿ ಸಮಿತಿಯ ಅಧ್ಯಕ್ಷ ಸಿ.ನಾಗರಾಜು, ಉಪಾಧ್ಯಕ್ಷ ಪೈ.ಚಿಕ್ಕಮುಟ್ಟಿ, ಕಾರ್ಯದರ್ಶಿ ಹೆಚ್.ರವಿಕುಮಾರ್, ಖಜಾಂಚಿ ಎನ್.ಶ್ರೀಕಂಠ ಸೇರಿದಂತೆ ಪದಾಧಿಕಾರಿಗಳು ಹಾಜರಿದ್ದರು.

ಆರಂಭಿಕ ಹಂತದಲ್ಲಿ ಪತ್ತೆ ಮಾಡಿದರೆ ಶ್ರವಣ ದೋಷ ನಿವಾರಣೆ ಸಾಧ್ಯ



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಶ್ರವಣ ದೋಷ ಕುರಿತ ಕಾರ್ಯಕ್ರಮ ನಡೆಯಿತು.

ಮೈಸೂರು, ಮಾ.17(ಬಿಎಲ್‌ಯು)– ಆರಂಭದ ಹಂತದಲ್ಲೇ ಶ್ರವಣ ದೋಷ ಪತ್ತೆ ಹಚ್ಚಿ ಸಕಾಲಿಕ ಚಿಕಿತ್ಸೆ ನೀಡಿದರೆ ಶ್ರವಣ ದೋಷವನ್ನು ತಡೆಗಟ್ಟಬಹುದು ಎಂದು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಪ್ರಖ್ಯಾತ ಇಎನ್‌ಟಿ ತಜ್ಞ ಡಾ.ದತ್ತಾತ್ರಿ ಹೇಳಿದರು.

ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ಶ್ರವಣ ದೋಷ ಕುರಿತು ಇಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ವರ್ಷದಲ್ಲಿ ಶ್ರವಣ ದೋಷವುಳ್ಳವರ ಪ್ರಮಾಣ ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಭಾರತದಲ್ಲಿ ಬಹಳಷ್ಟು ಜನರು ಶ್ರವಣ ಸಮಸ್ಯೆ ಎದುರಿಸುತ್ತಿದ್ದಾರೆ. ಸರಿಯಾದ ರೀತಿಯಲ್ಲಿ ಚಿಕಿತ್ಸೆ ನೀಡಿದರೆ ಶೇಕಡ 50 ರಷ್ಟು ಶ್ರವಣ ದೋಷ ತಡೆಗಟ್ಟಬಹುದು. ಶೇಕಡ 30 ರಷ್ಟು ಶ್ರವಣ ಸಾಧನದ ಪರಿಣಾಮಕಾರಿ ಚಿಕಿತ್ಸೆಯಿಂದ ಕೂಡ ಶ್ರವಣ ದೋಷ ನಿವಾರಣೆ ಮಾಡಬಹುದು ಎಂದು ಡಾ.ದತ್ತಾತ್ರಿ ಹೇಳಿದರು. ಇದೇ ವೇಳೆ ಡಾ.ಪ್ರವೀಣ್ ಕುಮಾರ್ ಅವರು ಶ್ರವಣ ಆರೈಕೆಯ ಪರಿಣಾಮದ ಬಗ್ಗೆ ಮಾತನಾಡಿದರು.

ಕೊಟ್ಟಿಗೆ ಬೀಗ ಮುರಿದು ನಾಲ್ಕು ಮೇಕೆ ಕಳವು

ಮೈಸೂರು, ಮಾ.17(ಎಸ್‌ಬಿಡಿ)– ಕೊಟ್ಟಿಗೆ ಬೀಗ ಮುರಿದು ಖದೀಮರಿಬ್ಬರು ನಾಲ್ಕು ಮೇಕೆಗಳನ್ನು ಬೈಕ್‌ನಲ್ಲಿ ಕದ್ದೊಯ್ದಿರುವುದಾಗಿ ತಾಲೂಕಿನ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಡಿ.ಸಾಲುಂಡಿ ಗ್ರಾಮದ ಜವನೇಗೌಡ ಅವರು ಜೀವನೋಪಾಯಕ್ಕಾಗಿ ಜಯಪುರದಲ್ಲಿರುವ ತಮ್ಮ ಜಮೀನಿನಲ್ಲಿ ಜಾನುವಾರುಗಳನ್ನು ಸಾಕಿಕೊಂಡಿದ್ದಾರೆ. ಕೆಲ ದಿನಗಳ ಹಿಂದೆ ಜವನೇಗೌಡ ಅವರ ಪತ್ನಿ, ಹಾಗೂ ಪುತ್ರ ಜಾನುವಾರುಗಳನ್ನು ಮೇಯಿಸಿಕೊಂಡು ಮನೆ ಪಕ್ಕದ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದರು. ಬೆಳಗ್ಗೆ ಕೊಟ್ಟಿಗೆಗೆ ಹೋದಾಗ ಬಾಗಿಲಿನ ಬೀಗ ಒಡೆದಿತ್ತು. ಒಳಹೋಗಿ ನೋಡಿದಾಗ ಹಸು–ಕರುಗಳಿದ್ದವು ಆದರೆ ನಾಲ್ಕು ಮೇಕೆಗಳು ನಾಪತ್ತೆಯಾಗಿದ್ದವು.

ಸಮೀಪದಲ್ಲಿರುವ ಅಂಗಡಿಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾ ಫುಟೇಜ್ ಪರಿಶೀಲಿಸಿದಾಗ ಯಾರೋ ಇಬ್ಬರು ಖದೀಮರು, ತಡರಾತ್ರಿ ಬೈಕ್‌ನಲ್ಲಿ ಮೇಕೆಗಳನ್ನು ಸಾಗಿಸುತ್ತಿರುವುದು ಗೊತ್ತಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಜಯಪುರ ಪೊಲೀಸರು, ಮೇಕೆ ಕಳ್ಳರ ಪತ್ತೆಗೆ ಶೋಧ ನಡೆಸಿದ್ದಾರೆ.

ಅಪ್ರಾಪ್ತೆಯನ್ನು ವೇಶ್ಯಾವಾಟಿಕೆಗೆ ದೂಡಿದ್ದ ಮಹಿಳೆ ಸೇರಿ ಮೂವರಿಗೆ 20 ವರ್ಷ ಜೈಲು ಶಿಕ್ಷೆ



ಮೈಸೂರು, ಮಾ. 17(ಆರ್‌ಕೆ)– ಅಪ್ರಾಪ್ತ ಬಾಲಕಿಯನ್ನು ವೇಶ್ಯಾವಾಟಿಕೆಗೆ ದೂಡಿ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದ ಮಹಿಳೆ ಸೇರಿ ಮೈವರಿಗೆ 20 ವರ್ಷ ಕಠಿಣ ಶಿಕ್ಷೆ ಮತ್ತು ತಲಾ 10 ಸಾವಿರ ರೂ. ದಂಡ ವಿಧಿಸಿ ಮೈಸೂರಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಆನಂದ ಪಿ. ಹೊಗಾಡೆ ತೀರ್ಪು ನೀಡಿದ್ದಾರೆ.

ಕೆ.ಆರ್.ಪೇಟೆ ತಾಲೂಕು ಚಿಕ್ಕನಹಳ್ಳಿಪುರ ಗ್ರಾಮದ ರೇಖಾ, ಶ್ರೀರಂಗಪಟ್ಟಣದ ರಾಘವೇಂದ್ರ, ಪುರ ಗ್ರಾಮದ ಉಮೇಶ ಶಿಕ್ಷೆಗೆ ಗುರಿಯಾದವರಾಗಿದ್ದು, ಇತರ ಆರೋಪಿಗಳಾದ ಲೀಲಾವತಿ ಮತ್ತು ಲಲಿತಾ ಅವರನ್ನು ಸನ್ನಡತೆ ಕಾಯ್ದುಕೊಂಡು ಹೋಗುವ ಷರತ್ತಿನ ಮೇರೆಗೆ ಪಿಓ ಕಾಯ್ದೆಯಡಿ ಬಿಡುಗಡೆಗೊಳಿಸಲಾಗಿದೆ.

ಉಳಿದವರ ಪೈಕಿ ಗಿರೀಶ ತಲೆಮರೆಸಿಕೊಂಡಿರುವುದರಿಂದ ಆತನ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದ್ದು, ಶಿವರಾಮು, ಅಭಿಷೇಕ್ ಮತ್ತು ಸಿದ್ದರಾಮ ಎಂಬುವರು ವಿಚಾರಣೆ ಕಾಲದಲ್ಲೇ ಮೃತಪಟ್ಟಿದ್ದಾರೆ.

ವಿವರ: ಪಾಂಡವಪುರ ತಾಲೂಕು ಚಿನಕುರಳಿ ಗ್ರಾಮದ 16 ವರ್ಷದ ಬಾಲಕಿಯನ್ನು ಲೀಲಾವತಿ, ಸಿದ್ದರಾಜು ಮತ್ತು ಲಲಿತ ಅವರು 2020ರ ಆಗಸ್ಟ್ 10ರಂದು ಮಂಡ್ಯ ಜಿಲ್ಲೆ ಹುಲಿವಾಹನ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಅಭಿಷೇಕ್ ಜೊತೆ ಬಲವಂತವಾಗಿ ವಿವಾಹ ಮಾಡಿಸಿದ್ದರು. ನಂತರ ಆಕೆ ಮನೆ ಬಿಟ್ಟು ಹೋಗಿ ರಾಘವೇಂದ್ರ ಬಳಿ ಆಶ್ರಯ ಪಡೆದಿದ್ದಳು.

ರಾಘವೇಂದ್ರ ಬಾಲಕಿಯನ್ನು ರೇಖಾ ಎಂಬುವರ ಮನೆಗೆ ಕರೆದುತಂದು ಬಿಟ್ಟಿದ್ದ. ನಂತರ ರೇಖಾ ಬಾಲಕಿಯನ್ನು ಮೈಸೂರಿನ ಭೈರವೇಶ್ವರನಗರದಲ್ಲಿ ಬಾಡಿಗೆ ಮನೆಯಲ್ಲಿರಿಸಿ ವೇಶ್ಯಾವಾಟಿಕೆಗೆ ಬಳಸಿ ಹಣ ಸಂಪಾದಿಸುತ್ತಿದ್ದರು. ನಂತರ ರೇಖಾ ಮತ್ತು ಗಿರೀಶ ಸೇರಿ ಬಾಲಕಿಯನ್ನು 4,000 ಹಣ ಪಡೆದು, ಪುರ ಗ್ರಾಮದ ಉಮೇಶನೊಂದಿಗೆ ಕಳುಹಿಸಿಕೊಟ್ಟಿದ್ದರು.

ಆತ ಜಮೀನಿನಲ್ಲಿದ್ದ ಮನೆಗೆ ಕರೆದೊಯ್ದು ಬಾಲಕಿ ಮೇಲೆ ಅತ್ಯಾಚಾರವೆಸಗಿ ನಂತರದ ದಿನಗಳಲ್ಲಿ ಲಾಡ್ಜ್‌ನಲ್ಲಿ ಇರಿಸಿ ವೇಶ್ಯಾವಾಟಿಕೆ ನಡೆಸಿ ಹಣ ಸಂಪಾದಿಸುತ್ತಿದ್ದ.

ಬಾಲಕಿಯ ತಾಯಿ ನೀಡಿದ ದೂರು ದಾಖಲಿಸಿಕೊಂಡಿದ್ದ ಮೈಸೂರಿನ ಹೆಬ್ಬಾಳು ಠಾಣೆ ಪೊಲೀಸರು, ಪ್ರಕರಣವನ್ನು ಮಹಿಳಾ ಠಾಣೆ ಪೊಲೀಸರಿಗೆ ವಹಿಸಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಮಹಿಳಾ ಠಾಣೆಯ ಅಂದಿನ ಇನ್‌ಸ್ಪೆಕ್ಟರ್, 9 ಮಂದಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಮೈಸೂರಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಆನಂದ ಪಿ. ಹೊಗಾಡೆ ಅವರು ರೇಖಾ, ರಾಘವೇಂದ್ರ, ಉಮೇಶ ಅವರಿಗೆ 20 ವರ್ಷ ಕಠಿಣ ಶಿಕ್ಷೆ ಮತ್ತು 10,000 ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕಿ ಕೆ.ಬಿ. ಜಯಂತಿ ವಾದ ಮಂಡಿಸಿದ್ದರು.

ಸಾಧನೆ ಮಾಡಿದ ಮಹಿಳೆಯರ ಗೌರವಿಸಿ

ಸಖಿ ಫೌಂಡೇಷನ್‌ನ ಗಾಯತ್ರಿ ಸುಂದರೇಶ್ ಸಲಹೆ

ಮೈಸೂರು, ಮಾ.17(ಬಿಎಲ್‌ಯು)– ಬಹಳಷ್ಟು ಮಹಿಳೆಯರು ಸಾಧನೆ ಮಾಡಿದ್ದರೂ ಅದನ್ನು ತೋರ್ಪಡಿಸಿಕೊಳ್ಳಲು ಹಿಂಜರಿಯುತ್ತಾರೆ. ಅಂತಹ ಮಹಿಳೆಯರನ್ನು ಗುರುತಿಸಿ, ಗೌರವಿಸುವ ಜವಾಬ್ದಾರಿ ನಮ್ಮಂತಹ ಸಂಘ ಸಂಸ್ಥೆಗಳದ್ದು ಎಂದು ಸಖಿ ಫೌಂಡೇಷನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ರಾಮಕೃಷ್ಣನಗರದ ಜಯಲಕ್ಷ್ಮಿ ದೇವಿ ಪದವಿಪೂರ್ವ ಕಾಲೇಜಿನ ಋತ್ವಿಕ್ ವೇದಿಕೆಯಲ್ಲಿ ಆಯೋಜಿಸಿದ್ದ ಸಖಿ ಸಂಭ್ರಮ– ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹ ಕಾರ್ಯಕ್ರಮಗಳ ಸ್ಫೂರ್ತಿಯಿಂದ ಮತ್ತಷ್ಟು ಸಮಾಜಮುಖಿ ಕೆಲಸ ಮಾಡಲು ಮಹಿಳೆಯರಿಗೆ ಉತ್ತೇಜನ ದೊರೆಯಲಿದೆ ಎಂದು ಹೇಳಿದರು.



ಮೈಸೂರಿನ ರಾಮಕೃಷ್ಣನಗರದ ಜಯಲಕ್ಷ್ಮಿ ದೇವಿ ಪದವಿಪೂರ್ವ ಕಾಲೇಜಿನ ಋತ್ವಿಕ್ ವೇದಿಕೆಯಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಖಿ ಸಂಭ್ರಮ– ಸ್ಫೂರ್ತಿ ಸಖಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಮಾತನಾಡಿದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಕುಟುಂಬ ನಿರ್ವಹಣೆ ಮತ್ತು ಹೊರಗಿನ ಕಾರ್ಯ ಒತ್ತಡದಲ್ಲಿ ಮಹಿಳೆಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಂತರ ಮಾತನಾಡಿದ ಭಾರತೀಯ ಸಾಹಿತ್ಯ ಪರಿಷದ್‌ನ ಶ್ರೀಗಂಧ ವಲಯದ ಪ್ರಮುಖ್ ಡಾ.ವಿ.ರಂಗನಾಥ್, ಮಹಿಳೆಯರು ದಿನನಿತ್ಯದ ಕೆಲಸ ಕಾರ್ಯಗಳ ಜೊತೆಗೆ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಈ ವೇಳೆ ಉದ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅನಿತಾ ರೀಟಾ, ರಂಗಭೂಮಿ ಕಲಾವಿದೆ ಅರುಣ್ ಕುಮಾರಿ, ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಬಿ.ಆರ್.ನಾಗರತ್ನ ಅವರಿಗೆ ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದರಿಗೆ ಬಹುಮಾನ ನೀಡಲಾಯಿತು.

ಇತ್ತೀಚಿನ ದಿನಗಳಲ್ಲಿ ಕ್ಷಯದಿಂದಲೂ ಸಾವಿನ ಸಂಖ್ಯೆ ಹೆಚ್ಚಾಗುತ್ತಿವೆ

- ಹಿರಿಯ ಆರೋಗ್ಯಾಧಿಕಾರಿ ಡಾ. ಬಸವರಾಜ್ ಎಚ್ಚರಿಕೆ
- ಆಗಾಗ ತಪಾಸಣೆಗೆ ಒಳಗಾಗುವುದು ಅನಿವಾರ್ಯ

ಮೈಸೂರು,ಮಾ.17(ಎಂಟಿವೈ)– ಹೆಚ್‌ಐವಿಯಂತೆ ಕ್ಷಯ(ಟಿಬಿ)ದಿಂದಲೂ ಸಾವಿಗೀಡಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಆಗಾಗ ತಪಾಸಣೆಗೊಳಗಾಗುವಂತೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯಾಧಿಕಾರಿ ಡಾ. ಎಂ.ಎಸ್. ಬಸವರಾಜ್ ಸಲಹೆ ನೀಡಿದ್ದಾರೆ.

ಮೈಸೂರಿನ ಯುವರಾಜ ಕಾಲೇಜಿನ ಪ್ಲಾಟಿನಂ ಜ್ಯುಬಿಲಿ ಸಭಾಂಗಣದಲ್ಲಿ ಕಾಲೇಜಿನ ಐಕ್ಯೂ ಮತ್ತು ಸೈನ್ಸ್ ಫೋರಂ ವತಿಯಿಂದ ಆಯೋಜಿಸಿದ್ದ 'ಟಿಬಿ ಮುಕ್ತ ಭಾರತ–ಯುವ ಜನರ ಜವಾಬ್ದಾರಿ' ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮೀಕ್ಷೆಯೊಂದರ ಪ್ರಕಾರ 15 ವರ್ಷ ಮೇಲ್ಪಟ್ಟ ಶೇ.21ರಷ್ಟು ಮಂದಿಗೆ ಟಿಬಿ ಖಾಯಿಲೆ ಕಂಡು ಬರುತ್ತಿದೆ. ಇದನ್ನು ಗಮನಿಸಿದರೆ 45–50 ವರ್ಷ ಮೇಲ್ಪಟ್ಟವರಿಗೆ ಕ್ಷಯ ಸೋಂಕು ಇರುವುದು ಖಚಿತ ಎನ್ನಿಸುತ್ತದೆ. ಇದರಿಂದ ಕ್ಷಯ ರೋಗ ಬರದಂತೆ ಕಟ್ಟೆಚ್ಚರ ವಹಿಸಬೇಕು. ಪ್ರಮುಖವಾಗಿ ರೋಗ ಹರಡದಂತೆ ಜಾಗೃತಿ ಮೂಡಿಸುವುದು ಅನಿವಾರ್ಯ ಎಂದರು.

ಪ್ರತಿಯೊಂದು ಖಾಯಿಲೆಗೂ ಪ್ರತ್ಯೇಕವಾಗಿ ಜಾಗೃತಿ ಕಾರ್ಯಕ್ರಮ ಅವಶ್ಯವಿಲ್ಲ. ವೈರಸ್ ಹಾಗೂ ಬ್ಯಾಕ್ಟೀರಿಯಾದಿಂದ ಹರಡುವ ಎಲ್ಲಾ ರೋಗಗಳ ತಡೆಗೆ ಒಟ್ಟಿಗೆ ಜಾಗೃತಿ ಮೂಡಿಸಿ. ಅದನ್ನು ವರ್ಷವಿಡೀ ಪಾಲನೆ ಮಾಡುವಂತೆ ಜನರಿಗೆ ಮನವರಿಕೆ ಮಾಡಿಕೊಟ್ಟರೆ ಕಾರ್ಯಕ್ರಮದ ಉದ್ದೇಶ ಸಾಕಾರಗೊಳ್ಳಲಿದೆ. ಯಾವುದೇ ಕಾರ್ಯಕ್ರಮ ಮಾಡಿದರೂ ಸಾರ್ವಜನಿಕ ಸಹಭಾಗಿತ್ವ ಇಲ್ಲದೆ ಹೋದರೆ ಯಾವುದೇ ಸಾಧನೆ ಆಗುವುದಿಲ್ಲ ಇಲ್ಲಿ ಕಲಿತಿದ್ದನ್ನು ಪ್ರತಿದಿನ ಅಳವಡಿಸಿಕೊಂಡರೆ ಮಾತ್ರ ರೋಗ ಹರಡುವಿಕೆ ತಡೆ ಪ್ರಯತ್ನ ಯಶಸ್ವಿಯಾಗಬಹುದು ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಯುವರಾಜ ಕಾಲೇಜಿನ ಪ್ಲಾಟಿನಂ ಜ್ಯುಬಿಲಿ ಸಭಾಂಗಣದಲ್ಲಿ ನಡೆದ 'ಟಿಬಿ ಮುಕ್ತ ಭಾರತ–ಯುವ ಜನರ ಜವಾಬ್ದಾರಿ' ವಿಷಯ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯಾಧಿಕಾರಿ ಡಾ.ಎಂ.ಎಸ್.ಬಸವರಾಜ್ ಮಾತನಾಡಿದರು.

ಕ್ಷಯದಿಂದ ಬಳಲುತ್ತಿರುವ ವ್ಯಕ್ತಿ ಗುಣಮುಖರಾಗದೇ ಇದ್ದರೆ ತನ್ನ ಕುಟುಂಬದ ಸದಸ್ಯರು ಮಾತ್ರವಲ್ಲದೆ ಹೊರಗೆ 20 ಮಂದಿಗೆ ಟಿಬಿ ಹಬ್ಬಿಸಬಲ್ಲ. ರಸ್ತೆ ಬದಿಯಲ್ಲಿ ಉಗುಳುವವರನ್ನು ಎಷ್ಟು ಮಂದಿ ಪ್ರಶ್ನಿಸಿದ್ದೀರಿ. ಪ್ರಶ್ನಿಸಿದರೆ ನಿಮ್ಮಪ್ಪನ ರಸ್ತೆಯಾ ಎಂದು ಮರು ಪ್ರಶ್ನಿಸುತ್ತಾರೆ. ಇಂಥವರಿಂದ ಟಿಬಿ ಹರಡುತ್ತದೆ. ಖಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿ ಉಗಿಯುತ್ತಾ ಹೋಗುತ್ತಾನೆ. ಅದು ಒಣಗಿದ ನಂತರ ಗಾಳಿಗೆ ಬಂದು ಆರೋಗ್ಯವಂತರಿಗೂ ಟಿಬಿ ತಗುಲುತ್ತದೆ. ಸಾರ್ವಜನಿಕ ಸ್ಥಳದಲ್ಲಿಯೇ 20 ಜನರಿಗೆ ಖಾಯಿಲೆ ಹರಡಿಸಿದರೆ, ಮನೆಯಲ್ಲಿರುವವರಿಗೆ ಸೋಂಕು ಹರಡುವುದು ಗ್ಯಾರಂಟಿ. ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಈ ಹಿಂದೆ ಕ್ಷಯ ರೋಗದ ಬಗ್ಗೆ ಎಷ್ಟು ಎಚ್ಚರಿಕೆ ವಹಿಸಲಾಗುತ್ತಿತ್ತು. ಅಂದರೆ ಟಿಬಿ ಬಂದವರಿಗೆ ಪ್ರತ್ಯೇಕ ಲೋಟ, ತಟ್ಟೆ ಕೊಡುವ ಪದ್ಧತಿಯಿತ್ತು. ಖಾಯಿಲೆ ಬರುವವರೆಗೆ ಕಾಯಬೇಡಿ. ಆಗಾಗ ಟಿಬಿ ಟೆಸ್ಟ್ ಮಾಡಬೇಕು. ಜನ ಪರೀಕ್ಷೆ ಮಾಡಿಸಿಕೊಳ್ಳಲು ಮುಂದೆ ಬರುವುದಿಲ್ಲ. ಭಯದಿಂದಾಗಿ ಪರೀಕ್ಷೆ ಮಾಡಿಸಿಕೊಳ್ಳಲ್ಲ. ಯಾವುದೇ ಖಾಯಿಲೆ ಇರಲಿ ಪರೀಕ್ಷೆ ಮಾಡಿಸಿಕೊಳ್ಳುವುದಕ್ಕೆ ಹಿಂದೇಟು ಹಾಕಬಾರದು ಎಂದು ತಿಳಿಸಿದರು.

ಸಮೀಕ್ಷೆಯೊಂದರ ವರದಿಯಂತೆ ಪ್ರತಿದಿನ 60 ಸಾವಿರ ಮಂದಿಗೆ ಟಿಬಿ ಸೋಂಕು ಹರಡುತ್ತಿದೆ. 6 ಸಾವಿರ ಮಂದಿ ಗಂಭೀರ ಸ್ಥಿತಿಯಿಂದ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. 600 ಮಂದಿ ಸಾವನ್ನಪ್ಪುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹೆಚ್‌ಐವಿಯಂತೆ ಟಿಬಿಯಿಂದಲೂ ಸಾವು ಸಂಭವಿಸುತ್ತಿದೆ. ಈ ಹಿನ್ನೆಲೆಯಲ್ಲಿ ಜನರು ಮುನ್ನೆಚ್ಚರಿಕಾ ಕ್ರಮ ಕೈಗೊಂಡು, ಜಾಗೃತರಾದರೆ ಟಿಬಿಯಿಂದ ರಕ್ಷಣೆ ಪಡೆದುಕೊಳ್ಳಬಹುದು ಎಂದರು.

ಇದಕ್ಕೂ ಮುನ್ನ ಆರೋಗ್ಯ ಇಲಾಖೆ ಅಧಿಕಾರಿ ಮಾತನಾಡಿ, ಕ್ಷಯ ರೋಗದ ಬಗ್ಗೆ ಜನರಲ್ಲಿ ಅಸಡ್ಡೆ, ಉದಾಸೀನ, ನಿರ್ಲಕ್ಷ್ಯ ಭಾವನೆ ಇದೆ. ಸಮಾಜದಲ್ಲಿ ಟಿಬಿ ಕುರಿತು ಜಾಗೃತಿ ಮನೋಭಾವ ಕಡಿಮೆ ಇದೆ. ಇದರಿಂದ ಟಿಬಿ ಮುಕ್ತ ಭಾರತ ಮಾಡಲು ಸಾಧ್ಯವಾಗುತ್ತಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯ 2035ರ ವೇಳೆ ಭಾರತವನ್ನು 'ಟಿಬಿ ಮುಕ್ತ ಭಾರತ' ಮಾಡಬೇಕು ಎಂದು ಗುರಿ ನೀಡಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ವಿವಿಧ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಕ್ಷಯ ರೋಗದ ಬಗ್ಗೆ ಅರಿವು ಮೂಡಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಯುವರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ. ಎ. ಮಹದೇವಮೂರ್ತಿ, ಆಡಳಿತಾಧಿಕಾರಿ ಪ್ರೊ.ಕೆ.ಅಜಯ್ ಕುಮಾರ್, ಪರೀಕ್ಷಾಂಗ ನಿಯಂತ್ರಕ ನಾಗೇಶ್ ಬಾಬು, ಐಕ್ಯೂ ಸೆಂಟರ್ ಸಂಯೋಜಕ ಪ್ರೊ.ಬಿ. ಎಂ.ವೆಂಕಟೇಶ್, ಪ್ರೊ.ಹೆಚ್. ಎಸ್.ಜಯಂತ್, ಸೈನ್ಸ್ ಫೋರಮ್ ಸಂಚಾಲಕರಾದ ಡಾ.ಎನ್.ಎಸ್.ದೇವಿಕಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಗನ ಕುಸುಮ(ಕ) + ರಾಬರ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೀಮ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಕ್ರಾಂತಿಕು ವಸ್ತುನಾರು (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಸ್ವೀಟ್ ಹಾರ್ಟ್(ತ)	4 ಪ್ರದರ್ಶನಗಳು
ಸಂಗಂ	
ಕೋರ್ಟ್(ತೆ)	4 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಸ್ಟರ್ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಡಿಪ್ಲೊಮೆಟ್ (ಹಿಂ): ಬೆ.10ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ಇಂಟರ್‌ಸ್ಟೆಲ್ಲರ್ (ಇಂ): ಮ.3.40ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ನೊವೊಕೇನ್ (ಇಂ): ಬೆ.10.30ಕ್ಕೆ, ರಾ.10.20ಕ್ಕೆ, ಡ್ರ್ಯಾಗನ್ (ತ): ಮ.1ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಸಂ.4.10ಕ್ಕೆ, ದಿಲ್‌ರೂಬ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಡ್ರ್ಯಾಗನ್ (ತ): ಬೆ.10ಕ್ಕೆ, ಸ್ವೀಟ್‌ಹಾರ್ಟ್ (ತ): ಮ.1.05ಕ್ಕೆ, ಅ (ಕ): ಸಂ.4.10ಕ್ಕೆ, ಛಾವಾ (ಹಿಂ): ರಾ.7.10ಕ್ಕೆ, ದಿ ಡಿಪ್ಲೊಮೆಟ್ (ಹಿಂ): ಬೆ.10
ಸ್ಕ್ರೀನ್ 4	ಅಪ್ಪು (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.30ಕ್ಕೆ, ಪೆರುಸು (ತ): ಸಂ.6.30ಕ್ಕೆ, ಸ್ವೀಟ್ ಹಾರ್ಟ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅಪ್ಪು (ಕ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ದಿಲ್‌ರೂಬಾ (ತೆ): ರಾ.9.25ಕ್ಕೆ.
ಸ್ಕ್ರೀನ್ 3	ಛಾವಾ (ಹಿಂ): ಸಂ.6.10ಕ್ಕೆ, ಅಪ್ಪು (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.410ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸ್ವಚ್ಛ ಸರ್ವೇಕ್ಷಣೆ ಬಗ್ಗೆ ಸಭೆ



ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ ಅವರು ಸ್ವಚ್ಛ ಸರ್ವೇಕ್ಷಣೆ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಅಧಿಕಾರಿಗಳ ಸಭೆ ನಡೆಸಿ ಕಚೇರಿ ಆವರಣದ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಸೂಚಿಸಿದರು.

ಮನೆ ಬೀಗ ಒಡೆದು ಚಿನ್ನಾಭರಣ, ನಗದು ಕಳವು

ಮೈಸೂರು, ಮಾ.17(ಎಸ್‌ಬಿಡಿ)– ಮನೆಯ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರು ತಾಲೂಕು ಜಂತಗಳ್ಳಿಯಲ್ಲಿ ನಡೆದಿದೆ.

ವರುಣ ಹೋಬಳಿ, ಜಂತಗಳ್ಳಿಯ ಪ್ರಶಾಂತ್ ಛಾಯಾ ಲೇಔಟ್ ನಿವಾಸಿ ಹೆಚ್.ಚೇತನ್ ಮನೆಗೆ ನುಗ್ಗಿರುವ ಖದೀಮರು ಸುಮಾರು 20 ಗ್ರಾಂ ತೂಕದ ಚಿನ್ನಾಭರಣ ಹಾಗೂ 35 ಸಾವಿರ ನಗದು ಕಳವು ಮಾಡಿದ್ದಾರೆ.

ಚೇತನ್ ಜೆ.ಕೆ.ಟೈರ್ಸ್ ಕಂಪನಿ ಉದ್ಯೋಗಿಯಾಗಿದ್ದು, ಅವರ ಪತ್ನಿ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಶನಿವಾರ ಸಂಜೆ ಮನೆಗೆ ಬೀಗ ಹಾಕಿಕೊಂಡು ದಂಪತಿ ಸ್ವಂತ ಊರಾದ ಕೊಳ್ಳೆಗಾಲಕ್ಕೆ ಹೋಗಿದ್ದರು. ಭಾನುವಾರ ರಾತ್ರಿ ವಾಪಸ್ ಬಂದಾಗ ಮನೆಗೆ ಮುಂಬಾಗಿಲಿನ ಬೀಗ ಒಡೆದಿತ್ತು. ಗಾಬರಿಯಿಂದ ಒಳಹೋದಾಗ ರೂಮ್‌ನಲ್ಲಿ ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬೀರು ಹಾಗೂ ವಾರ್ಡೋಬ್ ಪರಿಶೀಲಿಸಿದಾಗ ಅಲ್ಲಿದ್ದ ಚಿನ್ನಾಭರಣ ಹಾಗೂ ಹಣ ಇರಲಿಲ್ಲ.

ಈ ಸಂಬಂಧ ಚೇತನ್ ನೀಡಿರುವ ದೂರಿನನ್ವಯ ವರುಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ನೆರೆಹೊರೆಯಲ್ಲಿರುವ ಸಿಸಿ ಟಿವಿ ಕ್ಯಾಮರಾಗಳ ಫುಟೇಜ್ ಪರಿಶೀಲಿಸಿ, ಖದೀಮರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ತೆರಿಗೆ ಬಾಕಿ ಸಂಬಂಧ ಸಭೆ



ಮೈಸೂರು ನಗರ ಪಾಲಿಕೆ ಸಭಾಂಗಣದಲ್ಲಿ ಸೋಮವಾರ ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಅವರು ತೆರಿಗೆ ಬಾಕಿ ಸಂಬಂಧ ಸಂಘ ಸಂಸ್ಥೆ ಹಾಗೂ ಆಸ್ತಿ ಮಾಲೀಕರ ಸಭೆ ನಡೆಸಿ ಮಾಸಾಂತ್ಯದೊಳಗೆ ತೆರಿಗೆ ಪಾವತಿಸಲು ಸೂಚಿಸಿದರು.

ಕೋಟೆ ತಾಲೂಕಲ್ಲಿ ಮಳೆ–ಗಾಳಿಗೆ ಬಾಳೆ ಬೆಳೆ ನಾಶ

ಸ್ಥಳಕ್ಕೆ ರೈತ ಮುಖಂಡ ಸಿ.ಚಂದನ್‌ಗೌಡ ಭೇಟಿ



ಬಾಳೆ ಬೆಳೆ ಹಾನಿಗೊಳಗಾದ ಜಮೀನಿಗೆ ರೈತ ಮುಖಂಡ ಚಂದನ್‌ಗೌಡ ಭೇಟಿ ನೀಡಿದ್ದರು.

ಮೈಸೂರು,ಮಾ.17(ಪಿಎಂ)– ವನಸಿರಿ ನಾಡಿನಲ್ಲಿ ವರ್ಷದ ಮೊದಲ ಜಲಧಾರೆಗೆ 28 ಎಕರೆಯಲ್ಲಿ ಬೆಳೆದಿದ್ದ ಸುಮಾರು 50 ಲಕ್ಷ ರೂ. ಮೌಲ್ಯದ ಬಾಳೆ ಬೆಳೆ ನಾಶವಾಗಿದ್ದು, ಬೆಳೆಗಾರರು ಸಂಕಷ್ಟ ಪರಿಸ್ಥಿತಿಗೆ ಸಿಲುಕಿದ್ದಾರೆ. ಹೆಚ್.ಡಿ.ಕೋಟೆ ತಾಲೂಕು ಕಟ್ಟೆಮನಗನಹಳ್ಳಿ ಗ್ರಾಮದ ಹರೀಶ್ ಎಂಬುವವರ ಜಮೀನಿನಲ್ಲಿ ಬೆಳೆದಿದ್ದ ಸುಮಾರು 4 ಸಾವಿರ ಬಾಳೆ ಗಿಡಗಳು ಮಳೆಗೆ ನಲುಗಿ ಸಂಪೂರ್ಣ ನೆಲ ಕಚ್ಚಿವೆ.

ನಾಲ್ಕು ಎಕರೆ ಜಮೀನನ್ನು ಗುತ್ತಿಗೆ ಪಡೆದು ಸಾಲ ಮಾಡಿ ಮಕ್ಕಳಂತೆ ಸಾಕಿ ಪೋಷಣೆ ಮಾಡಿ ಕಟಾವಿಗೆ ಬಂದಿದ್ದ ನೇಂದ್ರ ಬಾಳೆ ಗಿಡಗಳು ಒಂದೇ ರಾತ್ರಿ ಮಳೆ ಮತ್ತು ಗಾಳಿಗೆ ಮುರಿದು ಬಿದ್ದಿದ್ದು, ಇದರಿಂದ ತನ್ನ ಸ್ವಂತ ಮಕ್ಕಳನ್ನೇ ಕಳೆದುಕೊಂಡಂತೆ ರೈತ ಹರೀಶ್ ನೊಂದು ಕಣ್ಣೀರಿಡುವ ಸ್ಥಿತಿ ನಿರ್ಮಾಣವಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ರೈತ ಮುಖಂಡ ಸಿ.ಚಂದನ್‌ಗೌಡ, ಸೂಕ್ತ ಪರಿಹಾರ ನೀಡುವ ಮೂಲಕ ರೈತರನ್ನು ಕಾಪಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರು. ಪರಿಸ್ಥಿತಿಯನ್ನು ಅವಲೋಕಿಸಿ, ನೊಂದ ರೈತ ಕುಟುಂಬಕ್ಕೆ ಧೈರ್ಯ ಹೇಳಿದರಲ್ಲದೆ, ಸರ್ಕಾರದಿಂದ ಪರಿಹಾರ ಕೊಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಮರಗಳಿಂದ ಬೆಳೆಗಳ ರಕ್ಷಣೆ!: ಇದೇ ವೇಳೆ ಅನ್ನದಾತರನ್ನು ಉದ್ದೇಶಿಸಿ ಮಾತನಾಡಿದ ಚಂದನ್‌ಗೌಡ, ನಿಮ್ಮ ಹೊಲ, ಜಮೀನು ಬದು ಮತ್ತು ಗಡಿಗಳಲ್ಲಿ ನೆಡುವ ಮರಗಳು ನೈಸರ್ಗಿಕ ಬೇಲಿಯಂತೆ ಕಾರ್ಯ ನಿರ್ವಹಿಸುತ್ತವೆ. ಇದರಿಂದ ಅತಿಕ್ರಮಣಕಾರರು, ಪ್ರಾಣಿಗಳು ಮತ್ತು ಬೀಸುವ ಬಿರುಗಾಳಿಯಿಂದ ಬೆಳೆ ರಕ್ಷಿಸಿಕೊಳ್ಳಬಹುದು. ಈ ಮಾರ್ಗೋಪಾಯಕ್ಕೆ ಆದ್ಯತೆ ನೀಡುವಂತೆ ಸಲಹೆ ನೀಡಿದರು. ಮುಖಂಡರಾದ ಶಮಂತ್, ಅನಿಲ್‌ಕುಮಾರ್, ಉಮೇಶ್, ಸುರೇಶ್, ಮನು, ಜೈಕುಮಾರ್, ಹರೀಶ್ ಮತ್ತಿತರರು ಹಾಜರಿದ್ದರು.

ಮದುವೆಯಾದ ಒಂದೇ ತಿಂಗಳಲ್ಲಿ ದೂರವಾದ ನಟಿ; ರನ್ಯಾ ಪತಿಗೂ ತಟ್ಟಿದ ಚಿನ್ನ ಕಳ್ಳ ಸಾಗಾಣೆ ಸಂಕಷ್ಟ

ಬಂಧನದಿಂದ ವಿನಾಯಿತಿಗಾಗಿ ಹೈಕೋರ್ಟ್ ಮೊರೆ

ಬೆಂಗಳೂರು, ಮಾ.17– ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟಿ ರನ್ಯಾ ರಾವ್ ಪತಿ ಜತಿನ್ ಹುಕ್ಕೇರಿ ಇದೀಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಂಧನದಿಂದ ವಿನಾಯಿತಿ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಮುಂದಿನ ವಿಚಾರಣೆಯವರೆಗೆ ಜತಿನ್ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ಕರ್ನಾಟಕ ಹೈಕೋರ್ಟ್ ಆದೇಶಿಸಿದೆ.

ಜತಿನ್ ಹುಕ್ಕೇರಿ ಪರ ಮಂಡಿಸಿದ ವಕೀಲ ಪ್ರಭುಲಿಂಗ ನಾವದಗಿ, ತಮ್ಮ ಕಕ್ಷಿದಾರರು ನವೆಂಬರ್‌ನಲ್ಲಿ ರನ್ಯಾ ರಾವ್ ಅವರನ್ನು ವಿವಾಹವಾದರು. ಆದರೆ, ಕೆಲವು ಸಮಸ್ಯೆಗಳಿಂದಾಗಿ ಡಿಸೆಂಬರ್‌ನಿಂದ ಅನಧಿಕೃತವಾಗಿ ಅವರಿಂದ ಬೇರ್ಪಟ್ಟಿದ್ದಾರೆ ಎಂದು ಹೇಳುವ ಮೂಲಕ ಬಂಧನದಿಂದ ವಿನಾಯಿತಿ ಕೋರಿದ್ದರು.

ಕಂದಾಯ ಗುಪ್ತಚರ ನಿರ್ದೇಶನಾಲಯ ಪರ ವಕೀಲ ಮಧು ರಾವ್, ಮುಂದಿನ ಸೋಮವಾರ ತಮ್ಮ ಆಕ್ಷೇಪಣೆ ಸಲ್ಲಿಸುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಚುನಾವಣೆಯಲ್ಲಿ ಅಂಬೇಡ್ಕರ್ ಸೋಲಿಸಿದ್ದು ಸಾವರ್ಕರ್!: ಸದನದಲ್ಲಿ ಕೋಲಾಹಲ ಸೃಷ್ಟಿಸಿದ ಪ್ರಿಯಾಂಕ್ ಖರ್ಗೆ ಮಾತು



ಬೆಂಗಳೂರು, ಮಾ.17– ಡಾ. ಬಿಆರ್ ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಕಾಂಗ್ರೆಸ್ಸಾ ಅಥವಾ ಸಾವರ್ಕರಾ ಎಂಬ ವಿಚಾರ ಸೋಮವಾರ ವಿಧಾನಸಭೆಯಲ್ಲಿ ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ ತೀವ್ರ ಕೋಲಾಹಲ, ಮಾತಿನ ಸಮರಕ್ಕೆ ಕಾರಣವಾಯಿತು.

ಇಂದು ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಚರ್ಚೆಗೆ ಉತ್ತರ ನೀಡುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎಸ್‌ಇಪಿ, ಟಿಎಸ್‌ಪಿ ಕಾನೂನು ಜಾರಿಗೆ ತಂದ ವಿಚಾರವನ್ನು ಪ್ರಸ್ತಾಪಿಸಿದಾಗ ಬಿಜೆಪಿ ಸದಸ್ಯರು ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಯಾರು ಎಂದು ಪ್ರಶ್ನಿಸಿದರು.

ಇದಕ್ಕೆ ಧ್ವನಿಗೂಡಿಸಿದ ಬಿಜೆಪಿ ಶಾಸಕ ಅರವಿಂದ ಬೆಲ್ಲದ್, ಮಂತ್ರಿ ಮಂಡಲದಿಂದ ಹೊರ ಹಾಕಿದ್ದು ಯಾರು ಸೋಲಿಸಿದ್ದು ಯಾರು ಸಮಾಧಿಗೆ ಜಾಗ ಕೊಡದಿದ್ದು ಯಾರು ಎಂದು ಪ್ರಶ್ನಿಸಿದರು.


ಈ ವೇಳೆ ಮಧ್ಯಪ್ರವೇಶಿಸಿದ ಪ್ರಿಯಾಂಕ್ ಖರ್ಗೆ, 1952 ರಲ್ಲಿ ಅಂಬೇಡ್ಕರ್ ಬರೆದ ಪತ್ರದಲ್ಲಿ ನನ್ನನ್ನು ಚುನಾವಣೆಯಲ್ಲಿ ಸೋಲಿಸಿದ್ದು ದಾಮೋದರ್ ಸಾವರ್ಕರ್ ಎಂದು ಬರೆದಿದ್ದಾರೆ ಎಂದರು. ಅಲ್ಲದೆ ಪತ್ರ ಪ್ರದರ್ಶನ ಮಾಡಿದರೆ ರಾಜೀನಾಮೆ ಕೊಡುತ್ತೀರಾ ಎಂದು ಸವಾಲು ಹಾಕಿದರು.

ಪತ್ರದಲ್ಲಿ ಅಂಬೇಡ್ಕರ್ ಕಾಂಗ್ರೆಸ್ ಹೆಸರು ಉಲ್ಲೇಖ ಮಾಡಿಲ್ಲ, ಬದಲಾಗಿ ಸಾವರ್ಕರ್ ಹೆಸರು ಬರೆದಿದ್ದಾರೆ. ಇದನ್ನು ಸಾಬೀತು ಮಾಡುತ್ತೇವೆ ಎಂದರು. ಇದು ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ತೀವ್ರ ಮಾತಿನ ಜಟಾಪಟಿಗೆ ಕಾರಣವಾಯಿತು.

ಸವಾಲು, ಆರೋಪ, ಪ್ರತ್ಯಾರೋಪ ಹಾಗೂ ಏರು ಧ್ವನಿಯ ಮಾತಿನ ನಡುವೆ ಕಾಂಗ್ರೆಸ್ ಬಿಜೆಪಿ ಸದಸ್ಯರು ಪರಸ್ಪರ ಘೋಷಣೆ ಕೂಗಿದ್ದು. ಈ ನಡುವೆ ಪ್ರಿಯಾಂಕ್ ಖರ್ಗೆ ಅಂಬೇಡ್ಕರ್ ಬರೆದಿರುವ ಪತ್ರವನ್ನು ಸದನದಲ್ಲಿ ಓದಿದರು. ಅಲ್ಲದೆ ಬಿಜೆಪಿ ಸದಸ್ಯರ ಆರೋಪದಿಂದ ಕೆರಳಿದ ಪ್ರಿಯಾಂಕ್ ಖರ್ಗೆ, ಏನಂದುಕೊಂಡಿದ್ದೀರಾ, ಇದು ಸದನ. ಬಾಯಿಗೆ ಬಂದ ಹಾಗೆ ಮಾತನಾಡಲು ಇದು ಆರ್‌ಎಸ್‌ಎಸ್ ಕಚೇರಿ ಅಲ್ಲ. ಯಾರಿಗೆ ಹೆದರಿಸುತ್ತಿದ್ದೀರಾ ನೋಡಿದ್ದೀನಿ ನಿಮ್ಮಂತಹ ಆರ್‌ಎಸ್‌ಎಸ್ ಜನರನ್ನು. ಸದನದಲ್ಲಿ ನಿಮಗೆಷ್ಟು ಅಧಿಕಾರ ಇದೆಯೋ ನನಗೂ ಅಷ್ಟೇ ಇದೆ ಎಂದು ವಾಗ್ದಾಳಿ ನಡೆಸಿದರು.

ಭಾಷೆ ದ್ವೇಷಿಸುವ ವಿಷಯವಲ್ಲ; ಹಿಂದಿ ರಾಷ್ಟ್ರ ಭಾಷೆ

ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಪ್ರತಿಪಾದನೆ



ಅಮರಾವತಿ, ಮಾ.17– ಹಿಂದಿ ಹೇರಿಕೆಯನ್ನು ತಮಿಳುನಾಡು ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳು ತೀವ್ರವಾಗಿ ವಿರೋಧಿಸುತ್ತಿರುವಾಗ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಸೋಮವಾರ ಹಿಂದಿ ರಾಷ್ಟ್ರ ಭಾಷೆ ಮತ್ತು ಭಾಷೆ ದ್ವೇಷಿಸುವ ವಿಷಯವಲ್ಲ ಎಂದು ಪ್ರತಿಪಾದಿಸಿದ್ದಾರೆ.

ಇತ್ತೀಚೆಗೆ ಆಂಧ್ರ ಉಪಮುಖ್ಯಮಂತ್ರಿ ಮತ್ತು ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರು ಸಹ ಹಿಂದಿಯನ್ನು ಬೆಂಬಲಿಸಿದ್ದರು ಮತ್ತು ಯಾವುದೇ ಭಾಷೆಯನ್ನು ದ್ವೇಷಿಸುವ ಮನಸ್ಥಿತಿ ಬದಲಾಗಬೇಕು ಎಂದು ಹೇಳಿದ್ದರು.

ಇಂದು ವಿಧಾನಸಭೆಯಲ್ಲಿ ಮಾತನಾಡಿದ ಚಂದ್ರಬಾಬು ನಾಯ್ಡು ಅವರು, ನಾನು ಇದನ್ನು ನಿಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಭಾಷೆ ದ್ವೇಷಿಸುವುದಕ್ಕಾಗಿ ಅಲ್ಲ. ಇಲ್ಲಿ(ಆಂಧ್ರ ಪ್ರದೇಶದಲ್ಲಿ) ಮಾತೃಭಾಷೆ ತೆಲುಗು. ಹಿಂದಿ ರಾಷ್ಟ್ರೀಯ ಭಾಷೆ ಮತ್ತು ಅಂತರರಾಷ್ಟ್ರೀಯ ಭಾಷೆ ಇಂಗ್ಲಿಷ್ ಎಂದು ಹೇಳಿದರು.

ಜೀವನೋಪಾಯಕ್ಕಾಗಿ ಸಾಧ್ಯವಾದಷ್ಟು ಭಾಷೆಗಳನ್ನು ಕಲಿಯುವುದು ಮುಖ್ಯ ಎಂದು ಒತ್ತಿ ಹೇಳಿದ ನಾಯ್ಡು, ರಾಷ್ಟ್ರ ಭಾಷೆ ಕಲಿಯುವುದರಿಂದ ದೆಹಲಿಯಲ್ಲಿ ಹಿಂದಿಯಲ್ಲಿ ನಿರರ್ಗಳವಾಗಿ ಮಾತನಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಜಪಾನ್ ಮತ್ತು ಜರ್ಮನಿಯಂತಹ ಇತರ ದೇಶಗಳಿಗೆ ಅನೇಕ ಜನರು ಹೋಗುತ್ತಿರುವುದರಿಂದ ಆ ಭಾಷೆಗಳನ್ನು ಇಲ್ಲಿಯೂ ಕಲಿಯಲು ಸಾಧ್ಯವಾದರೆ ಅವರು ವಿದೇಶಿ ತಾಣಗಳಿಗೆ ಭೇಟಿ ನೀಡಿದಾಗ ಮಾತನಾಡಲು ತುಂಬಾ ಸುಲಭವಾಗುತ್ತದೆ ಎಂದು ಹೇಳಿದರು.

ಭಾಷೆ ಸಂವಹನದ ಒಂದು ಸಾಧನ. ಭಾಷೆಯಿಂದ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ತಮ್ಮ ಮಾತೃಭಾಷೆಯನ್ನು ಕಲಿತು ಹೆಮ್ಮೆಯಿಂದ ಮಾತನಾಡುವವರು ಪ್ರಪಂಚದಾದ್ಯಂತ ಉನ್ನತ ಸ್ಥಾನಗಳಲ್ಲಿ ಕುಳಿತಿದ್ದಾರೆ. ನಮ್ಮ ಮಾತೃಭಾಷೆಯನ್ನು ಕಲಿಯುವುದು ಸುಲಭ. ಅದರ ಜೊತೆಗೆ ಇತರೆ ಭಾಷೆಗಳನ್ನು ಕಲಿಯಬೇಕು ಎಂದರು.

ದೀರ್ಘಕಾಲೀನ ಹೂಡಿಕೆ ಆರ್ಥಿಕ ಅಭಿವೃದ್ಧಿಗೆ ಸಹಕಾರಿ

ಮೈಸೂರು, ಮಾ. 17– ಹೂಡಿಕೆಯಲ್ಲಿ ಅಲ್ಪಕಾಲೀನ ಹಾಗೂ ದೀರ್ಘಕಾಲೀನ ಹೂಡಿಕೆ ವಿಧಾನಗಳಿದ್ದು ಯಾವಾಗಲೂ ಮಾರುಕಟ್ಟೆಯ ಹಣಕಾಸಿನ ಏರಿಳಿತಗಳನ್ನು ನಿರಂತರ ಅಧ್ಯಯನ ಮಾಡಿ ದೀರ್ಘಕಾಲೀನ ವಿಧಾನಗಳಲ್ಲಿ ಹೂಡಿಕೆ ಮಾಡಿದರೆ ಉತ್ತಮ ಫಲಿತಾಂಶವು ಲಭಿಸುತ್ತದೆ ಎಂದು ಮುಂಬೈನ ಜಿಯೋ ಜಿತ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಗೌರಂಗ್ ಹೆಚ್ ಷಾ ಅಭಿಪ್ರಾಯಪಟ್ಟರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಮಾಜಿಕ ವಿಜ್ಞಾನದಲ್ಲಿ ನವೀನ ಸಂಶೋಧನಾ ಅಭ್ಯಾಸಗಳು ವಿಷಯದ ಕುರಿತು ಆಯೋಜಿಸಿದ್ದ ಒಂದು ದಿನದ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಪ್ರಾಂಶುಪಾಲ ಡಾ.ಎಸ್.ಮರೀಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು. ಸಮ್ಮೇಳನದ ಕಾರ್ಯದರ್ಶಿ ಡಾ.ಎಸ್.ಪೂರ್ಣಿಮ ಸ್ವಾಗತಿಸಿದರು. ಗುಂಡಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಪಿ.ವಿಶ್ವನಾಥ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಹಿರಿಯ ಅಧಿಕಾರಿ ಡಿಜಿಪಿ ರಾಮಚಂದ್ರರಾವ್ ತೀವ್ರ ವಿಚಾರಣೆ



ಬೆಂಗಳೂರು: ನಟಿ ರನ್ಯಾ ರಾವ್ ಚಿನ್ನ ಕಳ್ಳ ಸಾಗಾಣೆ ಪ್ರಕರಣ ಈಗ ದೇಶಾದ್ಯಂತ ಸುದ್ದಿಯಾಗಿದೆ. ಕನ್ನಡದ ನಟಿ ಚಿನ್ನ ಕಳ್ಳ ಸಾಗಾಣೆ ಮಾಡಿರುವ ಆರೋಪವನ್ನು ಎದುರಿಸುತ್ತಿದ್ದಾರೆ. ಹೀಗಿರುವಾಗಲೇ ಈ ಕೇಸ್‌ಗೆ ಸಂಬಂಧಿಸಿದಂತೆ ಹಲವಾರು ಸುದ್ದಿ, ಚರ್ಚೆ ನಡೆಯುತ್ತಿದೆ. ಆದರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿಯಾಗಿ ಸ್ಪಷ್ಟನೆ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಹಿರಿಯ ಐಪಿಎಸ್ ಅಧಿಕಾರಿಯನ್ನು ವಿಚಾರಣೆ ನಡೆಸಲಾಗಿದೆ.

ಡಿಜಿಪಿ ರಾಮಚಂದ್ರರಾವ್ ತೀವ್ರ ವಿಚಾರಣೆ: ಚಿನ್ನ ಕಳ್ಳ ಸಾಗಾಣೆ ಕೇಸ್‌ನಲ್ಲಿ ನಟಿ ರನ್ಯಾ ರಾವ್ ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ, ಶಕ್ತಿ ಭವನದಲ್ಲಿ ಹಿರಿಯ ಐಪಿಎಸ್ ಅಧಿಕಾರಿ ಡಿಜಿಪಿ ರಾಮಚಂದ್ರರಾವ್ ಅವರನ್ನು ಐಎಎಸ್ ಅಧಿಕಾರಿ ಗೌರವ್ ಗುಪ್ತಾ ಹಾಗೂ ಡಿಐಜಿ ವಂಶಿಕೃಷ್ಣ ನೇತೃತ್ವದಲ್ಲಿ ವಿಚಾರಣೆ ನಡೆಸಿದ್ದಾರೆ.

ಪ್ರೋಟೋಕಾಲ್ ಸಂಬಂಧ ರಾಮಚಂದ್ರರಾವ್ ವಿರುದ್ಧ ಆರೋಪ ಕೇಳಿ ಬಂದಿತ್ತು. ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಸರ್ಕಾರ ತನಿಖೆಗೂ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಇಂದು ರಾಮಚಂದ್ರರಾವ್ ಅವರನ್ನು ಅಧಿಕಾರಿಗಳು ತೀವ್ರ ವಿಚಾರಣೆ ನಡೆಸಿದ್ದಾರೆ.

ರನ್ಯಾ ರಾವ್ ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣದ ಬಗ್ಗೆ ಗೃಹ ಸಚಿವ ಪರಮೇಶ್ವರ್, ಡಿಆರ್‌ಐ ಮತ್ತು ಸಿಬಿಐ ಸಂಸ್ಥೆಗಳು ಈ ಬಗ್ಗೆ ಯಾವುದೇ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಎಲ್ಲವೂ ಊಹಾಪೋಹಗಳಷ್ಟೇ ಹೊರತು, ತನಿಖಾ ಸಂಸ್ಥೆಗಳು ಇದುವರೆಗೂ ಯಾವುದೇ ಮಾಹಿತಿಯನ್ನು ಹಂಚಿಕೊಂಡಿಲ್ಲ. ತನಿಖಾ ಸಂಸ್ಥೆಗಳೇ ಮಾಹಿತಿ ನೀಡದಿದ್ದರೆ ನಾನು ಏನು ಉತ್ತರ ಕೊಡಲಿ ಎಂದು ಅವರು ಪ್ರಶ್ನಿಸಿದ್ದಾರೆ.

ತೆಗೆದು ಬಿಸಾಡುತ್ತೇನೆ, ಗೆಟ್ ಔಟ್.....

ಶಾಸಕ ಹರೀಶ್ ಪೂಂಜಾಗೆ ಸ್ಪೀಕರ್ ಯು.ಟಿ.ಖಾದರ್ ವಾರ್ನಿಂಗ್



ಬೆಂಗಳೂರು, ಮಾ.17– ತೆಗೆದು ಬಿಸಾಡುತ್ತೇನೆ, ಗೆಟ್ ಔಟ್... ಹೀಗೆ ಸದನದಲ್ಲಿ ಸ್ಪೀಕರ್ ಯು.ಟಿ. ಖಾದರ್ ಕೆಂಡಾಮಂಡಲರಾದರು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸಿಎಂ ಸಿದ್ದರಾಮಯ್ಯ ಉತ್ತರ ನೀಡುತ್ತಿದ್ದ ಸಂದರ್ಭದಲ್ಲಿ ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಯಾರು ಎಂಬ ಕಾವೇರಿದ ಚರ್ಚೆ ನಡೆಯಿತು.

ಈ ವೇಳೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ತೀವ್ರ ವಾಕ್ಸಮರ ನಡೆದಾಗ ತಾಳ್ಮೆ ಕಳೆದುಕೊಂಡ ಸ್ಪೀಕರ್ ಯು.ಟಿ. ಖಾದರ್, ಬಿಜೆಪಿ ಸದಸ್ಯ ಹರೀಶ್ ಪೂಂಜಾಗೆ ಖಡಕ್ ವಾರ್ನಿಂಗ್ ನೀಡಿದರು.

ನಾನು ಲಿಮಿಟ್‌ನಲ್ಲಿ ಇದ್ದೇನೆ. ಇಲ್ಲಿ ಇರಲು ಆಗದಿದ್ದರೆ ಸದನ ಬಿಟ್ಟು ಹೋಗಿ. ಇಲ್ಲಾಂದ್ರೆ ನಾನೇ ತೆಗೆದು ಬಿಸಾಡಬೇಕಾಗುತ್ತದೆ. ಯಾರು ಎಂದು ನೋಡಲ್ಲ. ಹೊರಗಡೆ ಹೋಗಿ ಎಂದು ಪೂಂಜಾಗೆ ಎಚ್ಚರಿಕೆ ನೀಡಿದರು.

ಬಿಜೆಪಿ ಸದಸ್ಯ ಹರೀಶ್ ಪೂಂಜಾ ಬೇರೆ ಸದಸ್ಯರ ಆಸನದಲ್ಲಿ ಇದ್ದಾಗ ಅವರಿಗೆ ಎಚ್ಚರಿಕೆ ಕೊಟ್ಟ ಸ್ಪೀಕರ್ ನಿನ್ನ ಸೀಟಿಗೆ ಹೋಗಿ ಮಾತನಾಡು. ಇಲ್ಲಾಂದ್ರೆ ಹೊರಗಡೆ ನಡಿ ಗೆಟ್ ಔಟ್ ಎಂದು ತಾಳ್ಮೆ ಕಳೆದುಕೊಂಡು ವಾರ್ನಿಂಗ್ ಮಾಡಿದರು.

ಈ ವೇಳೆ, ಸ್ಪೀಕರ್ ಬಿಸಾಡುತ್ತೇನೆ ಎಂಬ ಪದ ಬಳಕೆಗೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಹಾಗೆ ಮಾತನಾಡುವುದು ಸರಿಯಲ್ಲ. ಯಾವ ಅಧ್ಯಕ್ಷರೂ ಹೀಗೆ ಮಾತನಾಡಿಲ್ಲ ಎಂದು ಬಿಜೆಪಿ ಸದಸ್ಯ ಸಿ.ಸಿ ಪಾಟೀಲ್ ಆಕ್ಷೇಪ ವ್ಯಕ್ತಪಡಿಸಿದರು.

ಅಂಬೇಡ್ಕರ್ ಬಗ್ಗೆ ಮಾತನಾಡಿದಾಗ ಬಿಸಾಡುತ್ತೇನೆ ಎಂದರೆ ಏನು ಅರ್ಥ. ನಾವು ಬಿಟ್ಟಿಗೆ ಬಂದಿದ್ದೇವಾ ಎಂದು ಹರೀಶ್ ಪೂಂಜಾ ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ವೇದವ್ಯಾಸ ಕಾಮತ್ ಸಾಥ್ ನೀಡಿದರು.

ಬಿಜೆಪಿ ಸದಸ್ಯರ ಅಸಮಾಧಾನದ ವೇಳೆ ತಿರುಗೇಟು ಕೊಟ್ಟ ಸ್ಪೀಕರ್, ಮಂಗಳೂರಿನಲ್ಲಿ ಅಂಬೇಡ್ಕರ್ ಸರ್ಕಲ್ ಕಟ್ಟಿ ಎಷ್ಟು ವರ್ಷವಾಯ್ತು. ಒಂದು ಸರ್ಕಲ್ ಕಟ್ಟುವ ಯೋಗ್ಯತೆ ಇಲ್ಲ. ಇಲ್ಲಿ ಮಾತನಾಡುತ್ತೀರಾ ಎಂದು ಗದರಿಸಿದರು.

ಕೊನೆಗೆ ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಯಾರು ಎಂಬ ಬಗ್ಗೆ ಶುಕ್ರವಾರ ಮಧ್ಯಾಹ್ನ ಸದನದಲ್ಲಿ ಚರ್ಚೆ ಮಾಡೋಣ ಎಂದು ಸ್ಪೀಕರ್ ಯು.ಟಿ.ಖಾದರ್ ಅವಕಾಶ ಕೊಡುವುದಾಗಿ ತಿಳಿಸಿದರು. ಅಂಬೇಡ್ಕರ್ ಮೇಲಿನ ಪ್ರೀತಿಯನ್ನು ಅಂದು ತೋರಿಸಿ ಎಂದರು.

ಸದನ ಭೋಜನ ವಿರಾಮದ ಬಳಿಕ ಮತ್ತೆ ಆರಂಭವಾದಾಗ, ಸ್ಪೀಕರ್ ಮಾತಿಗೆ ಯತ್ನಾಳ್ ಆಕ್ಷೇಪ ವ್ಯಕ್ತಪಡಿಸಿದರು. ಎತ್ತಿ ಬಿಸಾಡುತ್ತೇನೆ ಎನ್ನುವುದು ಸರಿಯಲ್ಲ ಎಂದರು. ಈ ವೇಳೆ ಕರಾವಳಿ ಭಾಷೆ ಸುಂದರ ಎಂದು ತಾವೇ ಹೇಳುತ್ತಿರುತ್ತೀರಿ. ಹಾಗಿದ್ದಾಗ ಸುಂದರ ಭಾಷೆಯಾಗಿರುವಾಗ ಸುಂದರ ಪದಗಳು ಬರುತ್ತವೆ ಎಂದು ತಮ್ಮ ಮಾತನ್ನು ಸ್ಪೀಕರ್ ಖಾದರ್ ಸಮರ್ಥಿಸಿಕೊಂಡರು.

ಮೈಸೂರು ಮಿತ್ರ 45

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು